ಸಂಪುಟ: 06 ಸಂಚಿಕೆ: 57 ಪುಟಗಳು: 08 ಸೋಮವಾರ 11 ಮೇ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿನ್ನನ್ನು ನೋಡಿ ಚಪ್ಪಾಳೆ ತಟ್ಟುವ ಹತ್ತು ಬೆರಳುಗಳಿಗಿಂತಲೂ ಕಣ್ಣೀರು ಒರೆಸುವ ಒಂದು ಬೆರಳು ಮೇಲು

## ಇಲಾಖೆಯಲ್ಲಿ ಮೇಜರ್ ಸರ್ಜರಿ: 293 ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮೇಜರ್ ಸರ್ಜರಿ ಮಾಡಲಾಗಿದ್ದು, ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಗಳಾದ ಸುರೇಶ್ ಎಚ್.ವಿ., ಅರ್ಜುನ್ ಸಿ.ಆರ್, ಅನಿತಾ ಕುಮಾರಿ ಎಂ, ಕುಮಾರಸ್ವಾಮಿ ಬಿ.ಜಿ. ಸೇರಿದಂತೆ 293 ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ. ರವಿವಾರ ಪೊಲೀಸ್ ಇಲಾಖೆ ಈ ಆದೇಶವನ್ನು ಹೊರಡಿಸಿದ್ದು, ಸಿಐಡಿ ವಿಭಾಗಕ್ಕೆ ಸುರೇಶ್ ಎಚ್.ವಿ., ಬನಶಂಕರಿ ಪೊಲೀಸ್ ಠಾಣೆಗೆ ಅರ್ಜುನ್ ಸಿ.ಆರ್., ಆಂತರಿಕ ಭದ್ರತಾ ವಿಭಾಗಕ್ಕೆ ಅನಿತಾ ಕುಮಾರಿ ಎಂ., ಲೋಕಾಯುಕ್ತಕ್ಕೆ ಕುಮಾರಸ್ವಾಮಿ ಬಿ.ಜೆ. ಅವರುಗಳು ಸೇರಿದಂತೆ ವಿವಿಧ ಸ್ಥಳಗಳಿಗೆ ಒಟ್ಟಾರೆ 293 ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ನಿಯುಕ್ತಿಗೊಳಿಸಲಾದ ಸ್ಥಳಗಳಲ್ಲಿ ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

## ರಾಜ್ಯದಲ್ಲಿ ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ, ಎಲ್ಲಾ ಗಟ್ಟಿಯಾಗಿವೆ

• ಉದಯವಾಹಿನಿ, ಬೆಂಗಳೂರು

'ಕರ್ನಾಟಕ ರಾಜ್ಯದಲ್ಲಿ ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ. ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ. ಪ್ರಧಾನಿ ಮೋದಿಯವರ ಕಣ್ಣಿಗೆ ಏನು ಕಾಣುತ್ತಿದೆಯೋ ಗೊತ್ತಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಪ್ರಧಾನಿ ಮೋದಿಗೆ ತಿರುಗೇಟು ನೀಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಿಎಂ ಕುರ್ಚಿ ಅಲುಗಾಡುತ್ತಿದೆ. ಕೇರಳ, ಪಂಜಾಬ್‌ನಲ್ಲೂ ಇದೇ ರೀತಿ ಇದೆ ಎನ್ನುವ ಪ್ರಧಾನಿ ಮೋದಿ ಅವರ ಹೇಳಿಕೆ ಸುಳ್ಳು ನಮ್ಮ ಸರಕಾರ ಅತ್ಯಂತ ಸುಭದ್ರವಾಗಿದೆ ಎಂದು ಸ್ಪಷ್ಟಪಡಿಸಿದರು. ಸಚಿವ ಡಿ.ಸುಧಾಕರ್ ಅವರ ಭದ್ರಾ ಮೇಲ್ದಂಡೆ ಯೋಜನೆ ಉದ್ಘಾಟನೆಗೆ ನಮ್ಮೊಡನೆ ಇರಬೇಕಿತ್ತು. ಅವರ ಅನಾರೋಗ್ಯದ ಕಾರಣಕ್ಕೆ ಇದು ಸಾಧ್ಯವಾಗಲಿಲ್ಲ. ನನ್ನನ್ನ, ಸಿಎಂ ಅವರನ್ನ ಭೇಟಿ ಮಾಡಿದಾಗಲೆಲ್ಲ ಸದಾ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಕುರಿತಾಗಿ ಮನವಿ ಮಾಡುತ್ತಲೇ ಇದ್ದರು ಎಂದು ಅವರು ಸ್ಮರಿಸಿದರು. ಸುಧಾಕರ್ ಅವರು ಜೈನ ಸಮುದಾಯಕ್ಕೆ ಸೇರಿದವರು. ಕಡಿಮೆ ಜನಸಂಖ್ಯೆ ಇದ್ದರು ಎಲ್ಲಾ ಸಮುದಾಯದ ಜನರನ್ನ ಪ್ರೀತಿಯಿಂದ ಕಾಣುತ್ತಿದ್ದರು. ಹೃದಯ ಶ್ರೀಮಂತಿಕೆ ಇದ್ದಂತಹ ಮನುಷ್ಯ ಇವರ ಸಾವಿನಿಂದ ನಮ್ಮ ಸರಕಾರಕ್ಕೆ ಹಿರಿಯುರು ವಿಧಾನಸಭಾ ಕ್ಷೇತ್ರಕ್ಕೆ ನಷ್ಟ ಉಂಟಾಗಿದೆ. ನನಗೆ ವೈಯಕ್ತಿಕವಾಗಿ ಬಹಳ ಆಘಾತವಾಗಿದೆ ಎಂದು ಅವರು ನುಡಿದರು.

## ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದಿದ್ದರೆ ಜನರಿಂದಲೇ ತಕ್ಕಪಾಠ

• ಉದಯವಾಹಿನಿ, ಬೆಂಗಳೂರು


'ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳಷ್ಟೇ ಮಹತ್ವ ಹೊಂದಿರುವ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಕಾಲಮಿತಿಯೊಳಗೆ ಚುನಾವಣೆ ನಡೆಸಬೇಕು. ಹಿತಾಸಕ್ತಿಗಳಿಗೆ ಸಿಲುಕಿ ವಿಳಂಬ ಮಾಡುವ ಅಧಿಕಾರರೂಢ ಪಕ್ಷಗಳಿಗೆ ಜನರೇ ತಕ್ಕಪಾಠ ಕಲಿಸುತ್ತಾರೆ' ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಎಚ್ಚರಿಸಿದರು. 16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗದ ವರದಿಗಳ ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. 'ಯಾವುದೇ ಪಕ್ಷದ ಸರ್ಕಾರವಿದ್ದರೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಅಡ್ಡಿ ಇದ್ದೇ ಇರುತ್ತದೆ. ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಪಂಚಾಯಿತಿಗಳ ಚುನಾವಣೆಗೆ ಅಡ್ಡಿಯಾಗಿತ್ತು. ಆಗ ಪಂಚಾಯತ್‌ರಾಜ್ ಸಚಿವರಾಗಿದ್ದ ಎಂ.ವೈ. ಘೋರ್ಪಡೆ ರಾಜೀನಾಮೆ ನೀಡಿದ್ದರು. ಮರು ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ನಾವು ಕಡಿಮೆ ಸ್ಥಾನ ಪಡೆಯಬೇಕಾಯಿತು. ತಮಿಳುನಾಡಿನಲ್ಲೂ ಈಗ ಹೇಗೆ ಸರ್ಕಾರ ಬದಲಿಸಿದರು ಎನ್ನುವ ಅರಿವು ಆಡಳಿತ ನಡೆಸುವವರಿಗೆ ಇರಬೇಕಾಗುತ್ತದೆ' ಎಂದರು.

## ಗಿಗ್ ಕಾರ್ಮಿಕರ ಕುಂದುಕೊರತೆ ಆಲಿಸಲು ವಿಶೇಷ ಡಿಜಿಟಲ್ ವೇದಿಕೆ

• ಉದಯವಾಹಿನಿ, ಬೆಂಗಳೂರು

ದೇಶದಲ್ಲೇ ಮೊದಲ ಬಾರಿಗೆ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಕಾಯ್ದೆ ಜಾರಿ ಮಾಡುವ ಮೂಲಕ ಮಾದರಿಯಾಗಿರುವ ರಾಜ್ಯ ಸರ್ಕಾರವು ಇದೀಗ ಗಿಗ್ ಕಾರ್ಮಿಕರ ಕುಂದುಕೊರತೆಗಳನ್ನು ಆಲಿಸಲು ವಿಶೇಷ ಡಿಜಿಟಲ್ ವೇದಿಕೆಯನ್ನು ಕಲ್ಪಿಸಿದೆ. ಪೋರ್ಟಲ್ ಮೂಲಕ ಸಮಸ್ಯೆಗಳಿಗೆ ಪರಿಹಾರ ವೇತನ, ರಜೆ, ದುಡಿಯುವ ಸ್ಥಿತಿಗತಿ ಸೇರಿ ಏನೇ ಸಮಸ್ಯೆಗಳಿದ್ದರೂ ದೂರು ನೀಡಬಹುದು. ಸಂಬಂಧಪಟ್ಟ ಕಂಪನಿಗೆ ನಿಮ್ಮ ದೂರನ್ನು ವರ್ಗಾವಣೆ ಮಾಡಿ ಪರಿಹಾರ ಒದಗಿಸಲಾಗುವುದು. ನೋಂದಣಿ, ಪರಿಹಾರ ಮತ್ತಿತರ ನೆರವಿಗಾಗಿ ಕಾರ್ಮಿಕ ಸಹಾಯವಾಣಿ 155214 ಸಂಪರ್ಕಿಸಬಹುದು. ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ಮಸೂದೆ-2025ಕ್ಕೆ ವಿಧಾನಸಭೆ ಅಂಗೀಕಾರ ನೀಡಿತ್ತು. ಇದರಿಂದ ರಾಜ್ಯದ 4 ಲಕ್ಷ ಗಿಗ್ ಕಾರ್ಮಿಕರಿಗೆ ಅನುಕೂಲವಾಗಲಿದೆ ಎಂದು ಅಂದಾಜಿಸಲಾಗಿತ್ತು. ಗಿಗ್ ಕಾರ್ಮಿಕರು ಸರಕು ಸೇವೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಸೂಚಿಸಿದ ಸ್ಥಳಗಳಿಗೆ ವಾಹನಗಳಲ್ಲಿ ತೆರಳಿ ವಿತರಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಅಪಘಾತಕ್ಕೆ ಒಳಗಾಗಬಹುದು. ಅಪಘಾತದಿಂದ ಮರಣ, ಶಾಶ್ವತ ಅಂಗವೈಕಲ್ಯ ಹೊಂದಿದರೆ ಅವರು ಮತ್ತು ಅವರ ಅವಲಂಬಿತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅವರು ಮತ್ತು ಅವರ ಕುಟುಂಬಗಳಿಗೆ ಸಾಮಾಜಿಕ ಭದ್ರತೆ ಸಿಗಲಿದೆ.





# ಕಳಗಂ ರೋಚಕ ವಿಜಯ್ ಪಟ್ಟಾಭಿಷೇಕ

# ದಳಪತಿ ಯುಗಾರಂಭ

### ಸಿಎಂ ವಿಜಯ್‌ಗೆ ಮೋದಿ ಅಭಿನಂದನೆ

ತಮಿಳುನಾಡಿನ ಹೊಸ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಟಿವಿಕೆ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಜನರ ಜೀವನವನ್ನು ಸುಧಾರಿಸಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ತಿಳಿಸಿದ್ದಾರೆ. ಅಭಿಮಾನಿಗಳು, ಕಾರ್ಯಕರ್ತರ ಸಂಭ್ರಮ, ಇತ್ತ ವಿಜಯ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆಯೇ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದ್ದಾರೆ.

**ಸಿಎಂ ಆಗಿ ವಿಜಯ್ ಪ್ರಮಾಣ ವಚನ**

**1** ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ಸಿ. ಜೋಸೆಫ್ ವಿಜಯ್‌ಗೆ ಪ್ರಧಾನಿ ಮೋದಿ ಅಭಿನಂದನೆ.

**2** ಈ ಬಗ್ಗೆ 2 ಟ್ವೀಟ್ ಮಾಡಿದ್ದು, ಒಂದು ಇಂಗ್ಲಿಷ್ ಹಾಗೂ ಮತ್ತೊಂದು ತಮಿಳು ಭಾಷೆಯಲ್ಲಿದೆ.

**3** ಈ ಬಾರಿ ಮೋದಿಯವರು ಸ್ವತಃ ವಿಜಯ್ ಅವರನ್ನು ಟ್ಯಾಗ್ ಮಾಡಿದ್ದಾರೆ.

• ಉದಯವಾಹಿನಿ, ದೆಹಲಿ

ಚೊಚ್ಚಲ ವಿಧಾನಸಭಾ ಚುನಾವಣೆಯಲ್ಲೇ ಅದ್ಭುತ ಯಶಸ್ಸು ಸಾಧಿಸಿದ ನಂತರ ತಮಿಳಗ ವೆಟ್ರಿ ಕಳಗಂ ಪಕ್ಷದ ಮುಖ್ಯಸ್ಥ ಚಂದ್ರಶೇಖರ್ ಜೋಸೆಫ್ ವಿಜಯ್ ತಮಿಳುನಾಡಿನ 9ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರು ವಿಜಯ್ ಮತ್ತು ಅವರ ಒಂಬತ್ತು ಸಂಪುಟ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ಇದರಲ್ಲಿ ಹಿರಿಯರಾದ ಕೆ.ಎ.ಸೆಂಗೋಟ್ಟೈಯನ್ ಮತ್ತು ಯುವ ಮುಖಗಳಾದ ಡಾ.ಟಿ.ಕೆ.ಪ್ರಭು ಮತ್ತು ಎಸ್.ಕೀರ್ತನಾ ಸೇರಿದ್ದಾರೆ. ಚೆನ್ನೈನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಸಮಾರಂಭ ನಡೆಯಿತು. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಟಿವಿಕೆ ಕಾರ್ಯಕರ್ತರ ಶಿಳ್ಳೆ, ಚಪ್ಪಾಳೆಯ ನಡುವೆ, ವಿಜಯ್ ದೇವರ ಹೆಸರಿನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸಚಿವರೂ ಸಹ ಹಿಂದಿನ ಡಿಎಂಕೆ ಆಡಳಿತದ ಇತರರಿಗಿಂತ ಭಿನ್ನವಾಗಿ ದೇವರ ಹೆಸರಿನಲ್ಲೇ ಪ್ರಮಾಣ ಕೈಗೊಂಡರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ವಿಜಯ್ ಅವರ ಪೋಷಕರು, ನಟಿ ತ್ರಿಶಾ ಕೃಷ್ಣನ್ ಮತ್ತು ಇತರೆ ಗಣ್ಯರು ಹಾಗು ಅಪಾರ ಸಂಖ್ಯೆಯ ಟಿವಿಕೆ ಕಾರ್ಯಕರ್ತರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ನಾನು ಸುಳ್ಳು ಭರವಸೆಗಳಿಂದ ಜನರನ್ನು ಮೋಸಗೊಳಿಸಲಾರೆ:** ಪ್ರಮಾಣವಚನ ಸ್ವೀಕರಿಸಿದ ನಂತರ ಮಾತನಾಡಿದ ವಿಜಯ್ ಅವರು, ನಾನು ಯಾವುದೇ ರಾಜಮನೆತನದವನಲ್ಲ. ಆದರೂ ಜನರು ನನ್ನನ್ನು ಸ್ವಾಗತಿಸಿ, ಸ್ವೀಕರಿಸಿದರು. ನಾನು ಸುಳ್ಳು ಭರವಸೆಗಳಿಂದ ಜನರನ್ನು ಮೋಸಗೊಳಿಸಲಾರೆ ಎಂದು ಹೇಳಿದರು.

**ಡಿಎಂಕೆ ಸರ್ಕಾರದಿಂದ 10 ಲಕ್ಷ ಕೋಟಿ ಸಾಲ- ವಿಜಯ್:** ಹಿಂದಿನ ಡಿಎಂಕೆ ಸರ್ಕಾರ 10 ಲಕ್ಷ ಕೋಟಿ ರೂ ಸಾಲ ಉಳಿಸಿದೆ. ನನಗೆ ಸ್ವಲ್ಪ ಸಮಯ ಕೊಡಿ. ನಾನು ಸರ್ಕಾರದ ಹಣಕಾಸು ಪರಿಸ್ಥಿತಿಯ ಬಗ್ಗೆ ಶ್ವೇತ ಪತ್ರ ಬಿಡುಗಡೆ ಮಾಡಲು ಚಿಂತನೆ ಮಾಡುತ್ತಿದ್ದೇನೆ. ಈ ಮೂಲಕ ಪಾರದರ್ಶಕ ಆಡಳಿತ ನೀಡಲು ಕ್ರಮ ವಹಿಸುತ್ತೇನೆ. ರಾಜ್ಯದಲ್ಲಿ ಡ್ರಗ್ಸ್ ನಿರ್ಮೂಲನೆಗೆ ಕಠಿಣ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಇದೇ ವೇಳೆ, ರಾಜ್ಯದಲ್ಲಿ ಹೊಸ ಆಡಳಿತ ಆರಂಭವಾಗಿದೆ. ನಿಜವಾದ, ಜಾತ್ಯತೀತ, ಸಾಮಾಜಿಕ ನ್ಯಾಯದ ಹೊಸ ಯುಗ ಈಗ ಶುರುವಾಗಿದೆ ಎಂದು ಹೇಳಿದರು.



**ಮಿಂಚಿದ ತ್ರಿಶಾ ಕೃಷ್ಣನ್:** ಪ್ರಮಾಣವಚನ ಸಮಾರಂಭದಲ್ಲಿ ತ್ರಿಶಾ ಕೃಷ್ಣನ್ ಮಿಂಚಿದರು. ಹಸಿರು ಬಣ್ಣದ ಸೀರೆ ಮತ್ತು ತಲೆಗೆ ಬಿಳಿ ಬಣ್ಣದ ಹೂವುಗಳನ್ನು ತೊಟ್ಟು ಬಂದಿದ್ದ ಅವರು ನೆರೆದಿದ್ದ ಅಪಾರ ಜನಸ್ತೋಮದತ್ತ ಕೈಬೀಸಿ ಗಮನ ಸೆಳೆದರು. ವಿಜಯ್ ಚೊಚ್ಚಲ ಸಂಪುಟದ ಹೊಸ ಸಚಿವರು ಇವರು: ಎನ್.ಆನಂದ್, ಆಧವ್ ಅರ್ಜುನ, ಕೆ.ಎ.ಸೆಂಗೋಟ್ಟಯ್ಯನ್, ಕೆ.ಜಿ.ಅರುಣ್ ರಾಜ್, ಪಿ.ವೆಂಕಟರಮಣನ್, ಆರ್.ನಿರ್ಮಲಕುಮಾರ್, ರಾಜ್‌ಮೋಹನ್, ಟಿ.ಕೆ.ಪ್ರಭು ಮತ್ತು ಎಸ್.ಕೀರ್ತನಾ ಸೇರಿದಂತೆ 9 ಟಿವಿಕೆ ಶಾಸಕರು ವಿಜಯ್ ಅವರ ಚೊಚ್ಚಲ ಸರ್ಕಾರದ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ತಮಿಳುನಾಡಿನಲ್ಲಿ ವಿಜಯ್‌ಗೆ ಸಿಕ್ಕ ಅಭೂತಪೂರ್ವ ಜನಾದೇಶ ಇತಿಹಾಸದ ಪುಟ ಸೇರಿದೆ. ಟಿವಿಕೆ ತನ್ನ ಚೊಚ್ಚಲ ರಾಜಕೀಯ ಅವಧಿಯಲ್ಲೇ ವಿಧಾನಸಭೆಯ ಒಟ್ಟು 234 ಸ್ಥಾನಗಳ ಪೈಕಿ 108 ಸ್ಥಾನಗಳನ್ನು ಜಯಿಸಿದೆ.

ಇದರೊಂದಿಗೆ ರಾಜ್ಯ ರಾಜಕೀಯದ ಇತಿಹಾಸದಲ್ಲೇ ಮೊದಲ ಬಾರಿಗೆ ಎರಡೂ ಪರಂಪರೆಯ 'ದ್ರಾವಿಡ' ಪಕ್ಷಗಳನ್ನು ಅಧಿಕಾರದಿಂದ ಹೊರಹಾಕುವಲ್ಲಿ ಯಶಸ್ವಿಯಾಗಿದೆ. ಆದಾಗ್ಯೂ, ವಿಜಯ್ ಸರ್ಕಾರ ರಚನೆಗೆ ಬೇಕಾಗುವಷ್ಟು ಬಹುಮತ ಸಿಗಲಿಲ್ಲ. ನಂತರ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಒಕ್ಕೂಟದ ಮಿತ್ರಪಕ್ಷಗಳಾಗಿದ್ದ ಕಾಂಗ್ರೆಸ್ (5), ಸಿಪಿಐ-ಎಂ (2), ಸಿಪಿಐ (2), ವಿಸಿಕೆ (2) ಮತ್ತು ಐಯುಎಂಎಲ್ (2) ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದವು. ಈ ಮೂಲಕ ಮ್ಯಾಜಿಕ್ ನಂಬರ್ 118 ಸಂಖ್ಯೆಯನ್ನು ಅವರು ದಾಟಿದ್ದು, ಇದೀಗ ಸರ್ಕಾರಕ್ಕೆ 120 ಶಾಸಕರ ಬೆಂಬಲ ದೊರೆತಿದೆ.

'ದಳಪತಿ' ಎಂದೇ ಕರೆಯಲ್ಪಡುವ ವಿಜಯ್, ಚುನಾವಣಾ ರ್‍ಯಾಲಿಗಳಲ್ಲಿ ಜನಸಮೂಹವನ್ನು ಸೆಳೆಯುವ ಸಾಮರ್ಥ್ಯ ತೋರಿಸಿದ್ದರು. ಇವರನ್ನು ಅನೇಕರು ನಟ-ರಾಜಕಾರಣಿ ಮತ್ತು ಮಾಜಿ ಮುಖ್ಯಮಂತ್ರಿ ಎಂ.ಜಿ.ರಾಮಚಂದ್ರನ್ ಅವರಿಗೆ ಹೋಲಿಸಿದ್ದಾರೆ.ತಮಿಳುನಾಡು ನಟರು ರಾಜಕೀಯ ಪ್ರವೇಶಿಸುವ ಮತ್ತು ಗೆಲ್ಲುವ ದೀರ್ಘ ಇತಿಹಾಸ ಹೊಂದಿದ್ದರೂ, ಕ್ಯಾಪ್ಟನ್ ವಿಜಯಕಾಂತ್ ನಂತರದ ಸಾಲಿನಲ್ಲಿ ನಿಲ್ಲಲು ರಾಜ್ಯ ಮತ್ತೊಬ್ಬ ತಾರೆಗಾಗಿ ಕಾಯುತ್ತಿತ್ತು. 2009ರಿಂದ ವಿಜಯ್ ರಾಜಕೀಯ ಪ್ರವೇಶಿಸುವ ಊಹಾಪೋಹಗಳಿದ್ದವು. ಈ ನಿಟ್ಟಿನಲ್ಲಿ ಕಾರ್ಯಚಟುವಿಕೆಗಳನ್ನು ಪ್ರಾರಂಭಿಸಿದ್ದ ವಿಜಯ್, ಸಾಮಾಜಿಕ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಹಾಲಿ ಚುನಾವಣೆಯಲ್ಲಿ ವಿಜಯ್, ಪೆರಂಬೂರ್ ಮತ್ತು ತಿರುಚ್ಚಿ ಪೂರ್ವ ಎರಡೂ ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದರು.

### ತಮಿಳುನಾಡಿನಲ್ಲಿ ರಾಜಕೀಯ ಹೊಸ ಮನ್ವಂತರ

ಸಿನಿಮಾ ರಂಗದಲ್ಲಿ 'ದಳಪತಿ' ಎಂದೇ ಕೋಟ್ಯಂತರ ಅಭಿಮಾನಿಗಳ ಹೃದಯ ಗೆದ್ದಿದ್ದ ವಿಜಯ್, ಇದೀಗ ರಾಜಕೀಯದಲ್ಲಿ ಹೊಸ ಮನ್ವಂತರ ಸೃಷ್ಟಿಸಿ ತಮಿಳುನಾಡಿನ ಚುಕ್ಕಾಣಿ ಹಿಡಿದಿದ್ದಾರೆ. ನೂತನ ಮುಖ್ಯಮಂತ್ರಿಯಾಗಿರುವ ವಿಜಯ್ ಅವರಿಗೆ ಪ್ರಧಾನಿ ಮೋದಿಯವರು ಅಭಿವೃದ್ಧಿಯ ದೃಷ್ಟಿಯಿಂದ ಬೆಂಬಲ ಸೂಚಿಸಿರುವುದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಉತ್ತಮ ಬಾಂಧವ್ಯದ ಮುನ್ಸೂಚನೆಯಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ರಾಜ್ಯದೆಲ್ಲೆಡೆ ವಿಜಯ್ ಅಭಿಮಾನಿಗಳು ಹಾಗೂ ಪಕ್ಷದ ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ.

### ಡಿವೋರ್ಸ್ ಅರ್ಜಿ ಜೂನ್ 15ಕ್ಕೆ ವಿಚಾರಣೆ


27 ವರ್ಷಗಳ ಸುದೀರ್ಘ ದಾಂಪತ್ಯ ಜೀವನದ ನಂತರ ವಿಜಯ್ ಪತ್ನಿ ಸಂಗೀತಾ ಕಳೆದ ಫೆಬ್ರವರಿಯಲ್ಲಿ ಕೌಟುಂಬಿಕ ಕಲ್ಯಾಣ ನ್ಯಾಯಾಲಯದಲ್ಲಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದರು. ವಿಶ್ವಾಸದ್ರೋಹ ಮತ್ತು ಮಾನಸಿಕ ಕಿರುಕುಳವನ್ನು ಅವರು ವಿಚ್ಛೇದನಕ್ಕೆ ಕಾರಣವಾಗಿ ನೀಡಿದ್ದರು. ಪ್ರಕರಣದ ಮುಂದಿನ ವಿಚಾರಣೆ ಜೂನ್ 15ರಂದು ನಡೆಯಲಿದೆ. ಸದ್ಯ ಲಂಡನ್‌ನಲ್ಲಿದ್ದು, ನೇರ ಕೋರ್ಟ್‌ಗೆ ಆಗಮಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಅರ್ಜಿಯಲ್ಲಿ ಸಂಗೀತಾ, 1998ರಲ್ಲಿ ಯುಕೆಯಲ್ಲಿ ತಮ್ಮ ವಿವಾಹ ನೋಂದಣಿಯಾಗಿತ್ತು, ನಂತರ 1999 ರಲ್ಲಿ ಚೆನ್ನೈನ ರಾಜಾ ಮುತ್ತಯ್ಯ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದಾಗಿ ತಿಳಿಸಿದ್ದರು. ಆರಂಭಿಕ ವರ್ಷಗಳಲ್ಲಿ ತಮ್ಮ ದಾಂಪತ್ಯ ಜೀವನ ಸುಖಮಯವಾಗಿತ್ತು. ಆದರೆ, 2021ರಲ್ಲಿ ವಿಜಯ್ ಅವರಿಗೆ ನಟಿಯೊಬ್ಬಳ ಜೊತೆಗಿದ್ದ ವಿವಾಹೇತರ ಸಂಬಂಧದ ಬಗ್ಗೆ ತಿಳಿದ ನಂತರ ತಮ್ಮ ವೈವಾಹಿಕ ಜೀವನದಲ್ಲಿ ಬಿರುಕು ಮೂಡಿತು ಎಂದು ಸಂಗೀತಾ ಗಂಭೀರ ಆರೋಪ ಮಾಡಿದ್ದಾರೆ.

## ಅಲ್ಪಸಂಖ್ಯಾತರನ್ನು ಮತದಾರರ ಪಟ್ಟಿಯಿಂದ ತೆಗೆಯಲು ಎಸ್‌ಐಆರ್ ಜಾರಿ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಸರಕಾರವು ಚುನಾವಣಾ ಆಯೋಗದ ಮೂಲಕ ದೇಶದಲ್ಲಿರುವ ಅಲ್ಪಸಂಖ್ಯಾತರನ್ನು, ವಿಶೇಷವಾಗಿ ಮುಸ್ಲಿಮರನ್ನು ಮತದಾರರ ಪಟ್ಟಿಯಿಂದ ಹೊರತೆಗೆಯಲು ವಿಶೇಷ ತೀವ್ರ ಪರಿಷ್ಕರಣೆ ಎಸ್‌ಐಆರ್ ನಡೆಸುತ್ತಿದೆ ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಆರೋಪಿಸಿದ್ದಾರೆ.

ರವಿವಾರ ಇಲ್ಲಿನ ಆಶೀರ್ವಾದ್ ಸೆಂಟರ್ ನಲ್ಲಿ ನಡೆದ 'ಕ್ಷೇತ್ರ ಮರುವಿಂಗಡನೆ, ಮಹಿಳಾ ಮೀಸಲಾತಿ ಮಸೂದೆ ಹಾಗೂ ಎಸ್‌ಐಆರ್- ಸಾರ್ವಜನಿಕ ವಿಚಾರ ಸಂಕಿರಣ'ದಲ್ಲಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಎಸ್‌ಐಆರ್ ಎಂಬುದು ಗಂಬೀರ ಸಮಸ್ಯೆಯಾಗುತ್ತಿದ್ದು, ದೇಶದ ಅರ್ಹ ಮತದಾರರ ಹಕ್ಕುಗಳನ್ನು ಕಸಿಯಲು ಜಾರಿ ಮಾಡಲಾಗಿದೆ ಎಂದರು. ಎಸ್‌ಐಆರ್ ಮತದಾರರ ಪಟ್ಟಿ ಪರಿಶೀಲನೆಗಾಗಿ ಚುನಾವಣಾ ಆಯೋಗವು ಮನೆಯಿಂದ ಮನೆಗೆ ಎಣಿಕೆ(ಎನ್ಯುಮರೇಶನ್ ಫಾರ್ಮ್‌ಗಳನ್ನು ಭರ್ತಿ ಮಾಡಲು ಕಡ್ಡಾಯಗೊಳಿಸಿದೆ. ಈ ಪ್ರಕ್ರಿಯೆಯು ಪ್ರಸ್ತುತ ಮತದಾರರ ಪಟ್ಟಿಯನ್ನು ಪರಿಶೀಲಿಸಿ, ನವೀಕರಿಸುತ್ತದೆ ಎಂದು ಆಯೋಗವು ಹೇಳಿದೆ. ಆದರೆ ದೇಶದ ಮೊದಲ ಮತದಾರರ ಪಟ್ಟಿ ತಯಾರಿಸಿದಾಗ ಈ ಪ್ರಕ್ರಿಯೆ ಇರಲಿಲ್ಲ ಎಂದು ಅವರು ಹೇಳಿದರು.



ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಮೂಲಕ 60 ಲಕ್ಷ ಮತದಾರರನ್ನು ಪಟ್ಟಿಯಿಂದ ತೆಗೆಯಲಾಗಿದೆ. 27 ಸಾವಿರಕ್ಕೂ ಅಧಿಕ ಮಂದಿಯನ್ನು ಕೇವಲ ಹೆಸರಿನಲ್ಲಿ ಅಕ್ಷರಗಳು ವ್ಯತ್ಯಾಸ ಇದೆ ಎಂದು ತೆಗೆಯಲಾಗಿದೆ. ಇದರಲ್ಲಿ ಶೇ.70 ಮಂದಿ ಮುಸ್ಲಿಮರಾಗಿದ್ದಾರೆ. ಅಲ್ಲದೆ ಬಹುತೇಕ ಮಂದಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತದಾರರೇ ಆಗಿದ್ದಾರೆ. ಹೀಗಾಗಿಯೇ ಪಶ್ಚಿಮ ಬಂಗಾಳದ ಬಹುತೇಕ ವಿಧಾನಸಭೆ ಕ್ಷೇತ್ರಗಳಲ್ಲಿ ಅಲ್ಪ ಮತಗಳ ಅಂತರದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂದು ಅವರು ವಿಶ್ಲೇಷಿಸಿದರು. ಸುಪ್ರೀಂ ಕೋರ್ಟ್‌ನಲ್ಲಿ ಎಸ್‌ಐಆರ್ ಬಗ್ಗೆ ಪ್ರಶ್ನಿಸಿದಾಗ, ಸರಿಯಾಗಿ ವಿಚಾರಣೆಯನ್ನು ಮಾಡಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ತೆರವುಗೊಳಿಸಿದ 60 ಲಕ್ಷ ಮತದಾರರ ಪೈಕಿ ಕೇವಲ 1,500 ಮತದಾರರನ್ನು ಮರಳಿ ಪಟ್ಟಿಗೆ ಸೇರಿಸಲಾಗಿದೆ.

> 'ಉತ್ತರ ಭಾರತದ ಜನಸಂಖ್ಯೆಯು ದಕ್ಷಿಣ ಭಾರತದ ಜನಸಂಖ್ಯೆಗಿಂತ ಗಣನೀಯವಾಗಿ ಏರಿಕೆಯಾಗಿದೆ. ಹೀಗಾಗಿ ಕ್ಷೇತ್ರ ಮರುವಿಂಗಡನೆ ಮಾಡಿದರೆ, ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ. ಅಲ್ಲದೆ ಕ್ಷೇತ್ರ ಮರುವಿಂಗಡನೆಯ ಸಮಿತಿಯು ಕೇಂದ್ರ ಬಿಜೆಪಿ ಸರಕಾರದ ಕೈಗೊಂಬೆಯಾಗಿ ಕೆಲಸ ಮಾಡಲಿದೆ. ಜನಸಂಖ್ಯಾ ಆಧಾರದಲ್ಲಿ ಕ್ಷೇತ್ರ ಮರುವಿಂಗಡನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ. ಹೀಗಾಗಿ ಅನ್ಯಾಯಕ್ಕೆ ಒಳಗಾಗುವ ದಕ್ಷಿಣ ರಾಜ್ಯಗಳು ಕ್ಷೇತ್ರ ಮರುವಿಂಗಡನೆ ವಿರುದ್ಧ ಬೀದಿ ಹೋರಾಟಗಳನ್ನೆ ಮಾಡಬೇಕು'
>
> -ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ

ಹೀಗಾಗಿ ಆಯೋಗವು ಪಕ್ಷಪಾತವಾಗಿ ಕೆಲಸ ಮಾಡುತ್ತಿದೆ. ಚುನಾವಣಾ ಆಯೋಗದ ಆಯುಕ್ತರ ನೇಮಕಾತಿ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದರೂ, ಪ್ರಯೋಜನವಾಗುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು. ಹೋರಾಟಗಾರ್ತಿ ಕೆ.ಎಸ್. ವಿಮಲಾ ಮಾತನಾಡಿ, ಎಸ್‌ಐಆರ್ ಜಾರಿ ಮಾಡುವ ಮೂಲಕ ಮುಸ್ಲಿಮರು ಸೇರಿದಂತೆ ಮಹಿಳೆಯರ ಹಕ್ಕುಗಳನ್ನು ಕಸಿಯಲಾಗಿದೆ. ಆದರೆ ಈಗ ಬಿಜೆಪಿ ಸರಕಾರವು ಮಹಿಳಾ ಮೀಸಲಾತಿಯನ್ನು ಪ್ರಸ್ತಾಪಿಸಿದೆ. ಅಲ್ಲದೆ ಕ್ಷೇತ್ರ ಮರುವಿಂಗಡನೆ ಮತ್ತು ಜನಗಣತಿಯ ಬಳಿಕವೇ ಮಹಿಳಾ ಮೀಸಲಾತಿಯನ್ನು ತರಲು ಉದ್ದೇಶಿಸಿರುವುದು ಸರಿಯಾದ ಕ್ರಮವಲ್ಲ ಎಂದರು.

# ಸಚಿವ ಡಿ ಸುಧಾಕರ್ ನಿಧನ: ಇಂದು ತವರು ಜಿಲ್ಲೆಗೆ ಸರ್ಕಾರಿ ರಜೆ ಘೋಷಣೆ

## ■ ಮೃತರ ಅಂತಿಮ ಸಂಸ್ಕಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಸಲು ಸರ್ಕಾರ ಸೂಚನೆ

• ಉದಯವಾಹಿನಿ, ಬೆಂಗಳೂರು

ಸಚಿವ ಡಿ ಸುಧಾಕರ್ ನಿಧನಕ್ಕೆ ಕರ್ನಾಟಕ ಸರ್ಕಾರ ಸಂತಾಪ ಸೂಚಿಸಿದ್ದು, ತವರು ಜಿಲ್ಲೆ ಚಿತ್ರದುರ್ಗಕ್ಕೆ ಅನ್ವಯವಾಗುವಂತೆ ಸೋಮವಾರ (ಮೇ 11) ಸರ್ಕಾರಿ ರಜೆ ಘೋಷಣೆ ಮಾಡಿದೆ. ಜತೆಗೆ 3 ದಿನ ರಾಜ್ಯಾದ್ಯಂತ 3 ದಿನ ಶೋಕಾಚರಣೆ. ಅನಾರೋಗ್ಯದಿಂದ ಬಳಲುತ್ತಿದ್ದ ಹಿರಿಯೂರು ಶಾಸಕರು ಹಾಗೂ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ ಸುಧಾಕರ್ ಅವರು ಮೇ 10 ಬೆಳಗಿನ ಜಾವ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಈ ಹಿನ್ನೆಲೆ ಸರ್ಕಾರ ಸಂತಾಪ ಸೂಚಿಸಿ ಅಧಿಸೂಚನೆ ಹೊರಡಿಸಿದೆ. ಮೃತರ ಗೌರವಾರ್ಥ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲು ಸರ್ಕಾರ ಆದೇಶಿಸಿದೆ.

**ಚಿತ್ರದುರ್ಗದಲ್ಲಿ ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ**

ಮೇ 11 ರಂದು ಸೋಮವಾರ ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಸರ್ಕಾರಿ ಕಚೇರಿಗಳಿಗೆ ಮತ್ತು ಎಲ್ಲಾ ಶಾಲಾ ಕಾಲೇಜುಗಳಿಗೆ (ಅನುದಾನ ಪಡೆಯುವ ಎಲ್ಲಾ ವಿದ್ಯಾ ಸಂಸ್ಥೆಗಳಿಗೂ ಸೇರಿದಂತೆ) ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳು ಒಳಗೊಂಡಂತೆ ಸಾರ್ವಜನಿಕ ರಜೆ ಘೋಷಿಸಿದೆ.



**3 ದಿನ ರಾಜ್ಯಾದ್ಯಂತ ಸಂತಾಪ**

**ಮೂರು ದಿನ ಶೋಕಾಚರಣೆ**


ಮೇ 10 ರಿಂದ 12 ರವರೆಗೆ ಮೂರು ದಿನಗಳು ರಾಜ್ಯಾದ್ಯಂತ ಶೋಕವನ್ನು ಆಚರಿಸಲಾಗುವುದು. ಈ ಅವಧಿಯಲ್ಲಿ ಯಾವುದೇ ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ. ನಿಯತವಾಗಿ ಹಾರಿಸಲ್ಪಡುವ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು ಎಂದು ಅಧಿಸೂಚನೆಯಲ್ಲಿ ತಿಳಿಸಿದಲಾಗಿದೆ.

### ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಸಂತಾಪ

ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಸಂತಾಪ ಸೂಚಿಸಿದ್ದು, ರಾಜ್ಯ ಸರ್ಕಾರದ ಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವರು ಹಾಗೂ ನಾಡಿನ ಹಿರಿಯ ರಾಜಕಾರಣಿಯೂ ಆಗಿದ್ದ ಡಿ.ಸುಧಾಕರ್ ಅವರ ಅಕಾಲಿಕ ಮರಣ ನನಗೆ ಅತೀವ ದುಃಖ ಉಂಟು ಮಾಡಿದೆ. ಜನಾನುರಾಗಿ ನಾಯಕರಾಗಿದ್ದ ಅವರ ನಿಧನ ರಾಜ್ಯಕ್ಕೆ ಆಗಿರುವ ಬಹುದೊಡ್ಡ ನಷ್ಟವಾಗಿದೆ. ಮೃತರ ಆತ್ಮಕ್ಕೆ ಆ ಭಗವಂತ ಚಿರಶಾಂತಿ ನೀಡಲಿ, ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ ಓಂ ಶಾಂತಿಃ ಎಂದಿದ್ದಾರೆ.

**ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಸಂತಾಪ**

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವವರು ಸಂತಾಪ ಸೂಚಿಸಿದ್ದು, ಸಚಿವರಾದ ಡಿ. ಸುಧಾಕರ ಅವರು ಅಕಾಲಿಕವಾಗಿ ನಿಧನ ಹೊಂದಿರುವ ಸುದ್ದಿ ತಿಳಿದು ಅತ್ಯಂತ ದುಃಖವಾಯಿತು.



ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಗುಣಮುಖರಾಗುತ್ತಾರೆ ಎಂಬ ಪ್ರಾರ್ಥನೆ ಫಲಿಸಲಿಲ್ಲ.

ಸಾರ್ವಜನಿಕ ಜೀವನದಲ್ಲಿ ಜನಪರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮದೇ ಆದ ಪ್ರಭಾವ ಬೆಳೆಸಿಕೊಂಡಿದ್ದರು. ಅವರ ನಿಧನದಿಂದ ರಾಜ್ಯ ರಾಜಕಾರಣ ಮತ್ತು ಹಿರಿಯೂರು ಕ್ಷೇತ್ರದ ಜನತೆಗೆ ತುಂಬಲಾರದ ನಷ್ಟ ಉಂಟಾಗಿದೆ. ಅವರ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಕರುಣಿಸಲಿ, ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಕೋರಿದ್ದಾರೆ.

**ಈ ದಿನದ ದರ** ಪೆಟ್ರೋಲ್: 102.99 ₹/L | ಡೀಸೆಲ್ : 91.06 ₹/L | ಬಂಗಾರ: ₹15,235/Gram24ct ₹13,965/Gram22ct | ಬೆಳ್ಳಿ: ₹275.00/Gram

# ಕರ್ನಾಟಕ ಸಿಎಂ ಇನ್ನೆಷ್ಟು ದಿನ ಅಧಿಕಾರದಲ್ಲಿ ಇರುತ್ತಾರೆ ಗೊತ್ತಿಲ್ಲ! ಮುಂದಿನದ್ದು ಅತಂತ್ರ: ಪ್ರಧಾನಿ


• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಒಳಜಗಳ ನಡೆಯುತ್ತಿದ್ದು, ಆಡಳಿತ ಸಂಪೂರ್ಣ ಕುಸಿದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಮಾತ್ರವಲ್ಲದೇ, ಈ ಮುಖ್ಯಮಂತ್ರಿಗಳು (ಸಿದ್ದರಾಮಯ್ಯ) ಎಷ್ಟು ದಿನ ಅಧಿಕಾರದಲ್ಲಿ ಇರುತ್ತಾರೆ ಎಂಬುದೇ ಇನ್ನೂ ನಿರ್ಧಾರವಾಗಿಲ್ಲ ಮುಂದಿನದು ಕೂಡ ಅತಂತ್ರ ಎಂದಿದ್ದಾರೆ. ಭಾನುವಾರ ಬೆಂಗಳೂರಿಗೆ ಆಗಮಿಸಿದ್ದ ಪ್ರಧಾನಿ ಮೋದಿಯವರಿಗೆ ಬಿಜೆಪಿ ಕಾರ್ಯಕರ್ತರು, ಬೆಂಬಲಿಗರು ಅಭಿನಂದನಾ ಕಾರ್ಯಕ್ರಮ ಆಯೋಜಿಸಿದ್ದರು. ಈ ವೇಳೆ ಮಾತನಾಡಿದ ಅವರು ತಮ್ಮ ಭಾಷಣದುದ್ದಕ್ಕೂ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಪಕ್ಷವನ್ನು 'ಪರಾವಲಂಬಿ ರಾಜಕೀಯ ಶಕ್ತಿ' ಎಂದು ಜರಿದಿರುವ ಅವರು, ಮಿತ್ರಪಕ್ಷಗಳು ಮತ್ತು ಜನರಿಗೆ ದ್ರೋಹ ಬಗೆಯುವುದೇ ಕಾಂಗ್ರೆಸ್‌ನ ಜಾಯಮಾನ ಎಂದು ಟೀಕಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳು ಅಸ್ಥಿರತೆ ಮತ್ತು ಹುಸಿಯಾದ ಭರವಸೆಗಳಿಂದ ಕೂಡಿವೆ ಎಂದು ಪ್ರಧಾನಿ ಆರೋಪಿಸಿದರು. ಕರ್ನಾಟಕವನ್ನು ಪ್ರಸ್ತಾಪಿಸಿ ಮಾತನಾಡಿದ ಅವರು, ಆಡಳಿತ ಪಕ್ಷವು ಆಡಳಿತ ನಡೆಸುವ ಬದಲು ಆಂತರಿಕ ಕಚ್ಚಾಟದಲ್ಲಿಯೇ ಮುಳುಗಿದೆ ಎಂದರು.

**ಕರ್ನಾಟಕದಲ್ಲಿ ನಾಯಕತ್ವದ ಕಿತ್ತಾಟ:** ರಾಜ್ಯ ಸರ್ಕಾರದ ಆಡಳಿತ



ವೈಫಲ್ಯವನ್ನು ಎತ್ತಿತೋರಿಸಿದ ಪ್ರಧಾನಿ, ಕರ್ನಾಟಕದಲ್ಲಿ ಪ್ರಸ್ತುತ ಇರುವ ಮುಖ್ಯಮಂತ್ರಿಗಳು ಎಷ್ಟು ದಿನ ಅಧಿಕಾರದಲ್ಲಿ ಇರುತ್ತಾರೆ ಎಂಬುದೇ ಇನ್ನೂ ನಿರ್ಧಾರವಾಗಿಲ್ಲ. ಬೇರೊಬ್ಬರಿಗೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂಬ ಗೊಂದಲದಲ್ಲಿಯೇ ಕಾಲಹರಣ ಮಾಡುತ್ತಿದ್ದಾರೆ. ಜನರ ಸಮಸ್ಯೆಗಳನ್ನು ಬಗೆಹರಿಸುವ ಬದಲು, ಸರ್ಕಾರದ ಬಹುಪಾಲು ಸಮಯ ನಾಯಕತ್ವದ ಕಚ್ಚಾಟದಲ್ಲೇ ಕಳೆದುಹೋಗುತ್ತಿದೆ ಎಂದು ಟೀಕಿಸಿದರು. ಕಾಂಗ್ರೆಸ್ ನೀಡಿದ್ದ ಗ್ಯಾರಂಟಿಗಳೆಲ್ಲವೂ ಸುಳ್ಳು ಗ್ಯಾರಂಟಿಗಳು ಎಂದ ಅವರು, ಕಾಂಗ್ರೆಸ್ ಆಡಳಿತದ ಪುಸ್ತಕದಲ್ಲಿ ಉತ್ತಮ ಆಡಳಿತ ಎಂಬ ಅಧ್ಯಾಯವೇ ಇಲ್ಲ ಎಂದರು.

**ಕಾಂಗ್ರೆಸ್ ಒಂದು ಪರಾವಲಂಬಿ ಪಕ್ಷ:** ಕಾಂಗ್ರೆಸ್ ಪಕ್ಷವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಪ್ರಧಾನಿ, ಕಾಂಗ್ರೆಸ್‌ಗೆ ಕೇವಲ ದ್ರೋಹ ಮಾಡುವುದಷ್ಟೇ ಗೊತ್ತು. ತಮಿಳುನಾಡಿನಲ್ಲಿ ದೀರ್ಘಕಾಲದ ಮಿತ್ರಪಕ್ಷ ಡಿಎಂಕೆಗೆ ಅವರು ದ್ರೋಹ ಬಗೆದಿದ್ದಾರೆ. ರಾಜಕೀಯ ಸಮೀಕರಣಗಳು ಬದಲಾದಾಗಲೆಲ್ಲಾ ಮೈತ್ರಿ ಪಕ್ಷಗಳ ವಿರುದ್ಧವೇ ತಿರುಗಿಬೀಳುವ ಇತಿಹಾಸ ಕಾಂಗ್ರೆಸ್‌ಗಿದೆ. ಇದೊಂದು ಪರಾವಲಂಬಿ ಪಕ್ಷ. ಪ್ರಸ್ತುತ ರಾಜಕೀಯದಲ್ಲಿ ಪ್ರಸ್ತುತತೆ ಉಳಿಸಿಕೊಳ್ಳಲು ಬೇರೊಂದು ಪ್ರಾದೇಶಿಕ ಪಕ್ಷದ ಬೆನ್ನು ಬೇಕಾಗಿದೆ ಎಂದು ವ್ಯಂಗ್ಯವಾಡಿದರು.

**ಕಾಂಗ್ರೆಸ್ 100 ಗಡಿದಾಟಲು ಹೆಣಗಾಡುತ್ತಿದೆ:** ಒಂದು ಕಾಲದಲ್ಲಿ 400ಕ್ಕೂ ಹೆಚ್ಚು ಲೋಕಸಭಾ ಸ್ಥಾನಗಳನ್ನು ಗೆಲ್ಲುತ್ತಿದ್ದ ಕಾಂಗ್ರೆಸ್, ಇಂದು ಮೈತ್ರಿ ಮಾಡಿಕೊಂಡರೂ 100ರ ಗಡಿ ದಾಟಲು ಹೆಣಗಾಡುತ್ತಿದೆ. ಆದರೆ, ಬಿಜೆಪಿ ದೇಶದಾದ್ಯಂತ ತನ್ನ ನೆಲೆ ವಿಸ್ತರಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಕೇವಲ 3 ಶಾಸಕರಿದ್ದ ನಾವು 200ರ ಗಡಿ ದಾಟಿದ್ದೇವೆ. ಕೇರಳದಲ್ಲೂ ನಮ್ಮ ಬಲ ಒಂದರಿಂದ ಮೂರಕ್ಕೆ ಏರಿದೆ. ಭವಿಷ್ಯದಲ್ಲಿ ಕೇರಳದಲ್ಲೂ ಎನ್‌ಡಿಎ ಮೈತ್ರಿಕೂಟ ಬಹುಮತ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಕೆಂಪೇಗೌಡರ ಸ್ಮರಣೆ:** ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡರ ಕೊಡುಗೆಯನ್ನು ಸ್ಮರಿಸಿದ ಮೋದಿ, 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಐತಿಹಾಸಿಕ ದಿನದ ತ್ಯಾಗ-ಬಲಿದಾನಗಳನ್ನು ನೆನಪಿಸಿಕೊಂಡರು. ಅಲ್ಲದೆ, ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆ ಸೇರಿದಂತೆ ಜಾಗತಿಕ ಸವಾಲುಗಳ ನಡುವೆ ದೇಶದ ನಾಗರಿಕರು ಒಗ್ಗಟ್ಟಿನಿಂದ ಇರಬೇಕು ಸ್ವಾವಲಂಬಿ ಭಾರತಕ್ಕಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

## ಜನರ ಸಮಸ್ಯೆಗಳಿಗೆ ಫೋರಂ ಧ್ವನಿಯಾಗಲಿ

• **ಉದಯವಾಹಿನಿ, ಬೆಂಗಳೂರು**

ನಗರದ ಜನರ ಸಮಸ್ಯೆಗಳಿಗೆ ಧ್ವನಿಯಾಗುವ ಕೆಲಸವನ್ನು ಗ್ರೇಟರ್ ಬೆಂಗಳೂರು ವೆಲ್‌ಫೇರ್ ಅಸೋಸಿಯೇಷನ್, ಗ್ರೇಟರ್ ಬೆಂಗಳೂರು ಸಿಟಿಜನ್ ಫೋರಂ ಮಾಡಬೇಕು ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ವೀರಪ್ಪ ಹೇಳಿದರು. ವೆಲ್‌ಫೇರ್ ಅಸೋಸಿಯೇಷನ್ ಮತ್ತು ಸಿಟಿಜನ್ ಫೋರಂ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಎರಡು ಸಂಘಟನೆಗಳು ನಗರದ ಪ್ರತಿ ವಾರ್ಡ್‌ನಲ್ಲಿ ಸಮಿತಿ ಮಾಡಬೇಕು. ಸ್ಥಳೀಯ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ, ಜನಪ್ರತಿನಿಧಿಗಳ ಗಮನಕ್ಕೆ ತಂದು ಸರಿಪಡಿಸಬೇಕು ಎಂದು ಸಲಹೆ ನೀಡಿದರು.

'ಸಮಾಜದಲ್ಲಿ ಆಗುವ ಅನ್ಯಾಯ, ವಂಚನೆ, ಭ್ರಷ್ಟಾಚಾರಗಳ ಬಗ್ಗೆ ಲೋಕಾಯುಕ್ತದ ಗಮನಕ್ಕೆ ತನ್ನಿ. ಆದರೆ, ಸುಮ್ಮನೆ ದೂರು ನೀಡಬಾರದು. ಲೋಕಾಯುಕ್ತಕ್ಕೆ ಬರುವ ದೂರುಗಳಲ್ಲಿ ವೈಯಕ್ತಿಕ ದ್ವೇಷದಿಂದ ನೀಡುವ ಸುಳ್ಳು ದೂರುಗಳೇ ಶೇ 50ರಷ್ಟು ಇರುತ್ತವೆ. ನ್ಯಾಯಯುತವಾದ ದೂರುಗಳ ಬಗ್ಗೆ ಕ್ರಮ ವಹಿಸಲಾಗುವುದು' ಎಂದು ಹೇಳಿದರು. ಫೋರಂ ಅಧ್ಯಕ್ಷ ಬಿ.ಆರ್. ರಾಮೇಗೌಡ ಮಾತನಾಡಿ, 'ಬೆಂಗಳೂರಿಗೆ ಏನು ಬೇಕು ಎಂಬುದನ್ನು ಸ್ಥಳೀಯರೇ ನಿರ್ಧರಿಸುವಂತಾಗಬೇಕು. ಇಲ್ಲಿ ಏನು ಕೆಲಸ ಆಗಬೇಕು ಎಂದು ಸರ್ಕಾರದ ಗಮನ ಸೆಳೆಯಲಾಗುವುದು. ಸ್ಪಂದಿಸದೇ ಇದ್ದಾಗ ಹೋರಾಟದ ಮೂಲಕ ಒತ್ತಡ ತರಲಾಗುವುದು ಎಂದು ತಿಳಿಸಿದರು.

## ಸಮಸ್ಯೆಯ ಆಗರ ಕೊಡಿಗೇಹಳ್ಳಿ ಗ್ರಾಮ

• **ಉದಯವಾಹಿನಿ, ಕೆ.ಆರ್.ಪುರ**

ತೆರೆದ ಚರಂಡಿಯ ದುರ್ನಾತ, ರಸ್ತೆ ಬದಿ ತ್ಯಾಜ್ಯದ ರಾಶಿ, ರಸ್ತೆ ಮೇಲೆ ಹರಿಯುವ ಮಳೆ ನೀರು, ಗುಂಡಿಮಯ ರಸ್ತೆಗಳು, ಸಾರ್ವಜನಿಕ ಶೌಚಾಲಯ ಕೊರತೆ, ಮೂಲ ಸೌಲಭ್ಯ ವಂಚಿತ ಬಸ್ ನಿಲ್ದಾಣ. ಇದು ಬೆಂಗಳೂರು ಪೂರ್ವ ತಾಲ್ಲೂಕಿನ ಮಹದೇವಪುರ ಕ್ಷೇತ್ರದ ಹೂಡಿ ವಾರ್ಡ್‌ನ ಕೊಡಿಗೇಹಳ್ಳಿ ಗ್ರಾಮದ ಸ್ಥಿತಿ. ಮೂಲ ಸೌಲಭ್ಯಗಳ ಕೊರತೆಯಿಂದ ಗ್ರಾಮದ ನಿವಾಸಿಗಳು ತೊಂದರೆ ಪಡುತ್ತಿದ್ದಾರೆ.

ಕೊಡಿಗೇಹಳ್ಳಿ ಗ್ರಾಮ ಒಂದೆಡೆಗೆ ಕೆ.ಆರ್.ಪುರ ವಿಧಾನ ಸಭಾ ಕ್ಷೇತ್ರ, ಇನ್ನೊಂದೆಡೆಗೆ ಮಹದೇವಪುರ ಕ್ಷೇತ್ರದ ಅಂಚಿನಲ್ಲಿದ್ದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಐ.ಟಿ ಕ್ಷೇತ್ರ, ಖಾಸಗಿ ಶಾಲೆಗಳು, ರಿಯಲ್ ಎಸ್ಟೇಟ್ ಉದ್ಯಮ ಆವರಿಸಿಕೊಂಡಿದೆ. ಕೊಡಿಗೇಹಳ್ಳಿ ಗ್ರಾಮದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ. ಈಗ ಹೂಡಿ ವಾರ್ಡ್‌ಗೆ ಸೇರಿಸಿದ್ದರೂ ಇಲ್ಲಿಯವರೆಗೆ ಯಾವುದೇ ಶಾಶ್ವತ ಯೋಜನೆ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

'ಒಳಚರಂಡಿ ವ್ಯವಸ್ಥೆ ಸರಿಯಿಲ್ಲ. ಹೂಳು ತುಂಬಿಕೊಂಡು ನೀರು ಸರಾಗವಾಗಿ ಹರಿಯುತ್ತಿಲ್ಲ. ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತದೆ. ಸೊಳ್ಳೆಗಳ ಆವಾಸ ಸ್ಥಾನವಾಗಿದೆ. ಬಿಬಿಎಂಪಿ ಸಿಬ್ಬಂದಿ ಕಸಕ್ಕೆ ಬೆಂಕಿ ಹಾಕುವುದರಿಂದ ತ್ಯಾಜ್ಯದ ಹೊಗೆಯಿಂದ ಜನರು ಉಸಿರಾಟ ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಗ್ರಾಮದ ಮುಖಂಡ ವಿ.ವಿವೇಕ್ ದೂರಿದರು

## 1,115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವವು ಇದೇ 12ರಂದು ನಡೆಯಲಿದ್ದು, ಈ ವರ್ಷ ಒಟ್ಟು 1,115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ. 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕ ಹಾಗೂ ಚಿನ್ನದ ಪದಕ ಪ್ರಶಸ್ತಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಕೆವಿಕೆ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಬೆಳಿಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ವಹಿಸಲಿದ್ದಾರೆ. ಸಹ ಕುಲಾಧಿಪತಿಯೂ ಆಗಿರುವ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭಾಗವಹಿಸಲಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾಜಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದರು.

55 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ 46 ಚಿನ್ನದ ಪದಕ ಹಾಗೂ ದಾನಿಗಳ 72 ಚಿನ್ನದ ಪದಕ, 22 ವಿದ್ಯಾರ್ಥಿಗಳಿಗೆ ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಪಿಎಚ್.ಡಿಯಲ್ಲಿ 13, ಸ್ನಾತಕೋತ್ತರ ಪದವಿಯಲ್ಲಿ 68 ಹಾಗೂ ಸ್ನಾತಕ ಪದವಿಯಲ್ಲಿ 59 ಚಿನ್ನದ ಪದಕಗಳನ್ನು ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುತ್ತದೆ' ಎಂದು ವಿವರಿಸಿದರು.

### ಯೋಜನೆ ಜಾರಿಯಾಗಿ ಒಂದು ವರ್ಷ; ಸಂಚಾರಿ ಕಾವೇರಿಯಿಂದ 5 ಕೋಟಿ ರೂ.ಆದಾಯ

## ಯೋಜನೆಗೆ ನಗರ ವಾಸಿಗಳಿಂದ ಉತ್ತಮ ಸ್ಪಂದನೆ

• **ಉದಯವಾಹಿನಿ, ಬೆಂಗಳೂರು**

ಸಿಲಿಕಾನ್ ಸಿಟಿಯಲ್ಲಿ ನೀರಿನ ಟ್ಯಾಂಕರ್ ದಂಧೆಕೋರರಿಗೆ ಬ್ರೇಕ್ ಹಾಕುವಲ್ಲಿ ಜಲಮಂಡಳಿ ಜಾರಿಗೊಳಿಸಿದ ಸಂಚಾರಿ ಕಾವೇರಿ ಯೋಜನೆಯು ಯಶಸ್ವಿಯಾಗಿದೆ. ಈ ಯೋಜನೆಯಿಂದ ಜಲಮಂಡಳಿಯು 5.25 ಕೋಟಿ ಆದಾಯ ಗಳಿಸಿದೆ. ಖಾಸಗಿ ಟ್ಯಾಂಕರ್ ಮಾಲೀಕರು ಮನಸೋ ಇಚ್ಛೆ ದರ ನಿಗದಿಪಡಿಸಿ ಗ್ರಾಹಕರಿಂದ ವಸೂಲಿ ಮಾಡುತ್ತಿದ್ದರು. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಜಲಮಂಡಳಿಯು, ಸಾರ್ವಜನಿಕರ ಮನೆ ಬಾಗಿಲಿಗೆ ಬಿಐಎಸ್ ಪ್ರಮಾಣೀಕೃತ ಶುದ್ಧ ಕಾವೇರಿ ಕುಡಿಯುವ ನೀರು ತಲುಪಿಸುವ ಮಹತ್ವಾಕಾಂಕ್ಷಿ 'ಸಂಚಾರಿ ಕಾವೇರಿ' ಯೋಜನೆ ಜಾರಿಗೊಳಿಸಿತು. ಹಲವು ಸಂದರ್ಭಗಳಲ್ಲಿ 6 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕರ್ ನೀರಿಗೆ 800 ರೂ. ನಿಂದ 3 ಸಾವಿರ ರೂ ವಸೂಲಿ ಮಾಡುತ್ತಿದ್ದರು. ಜಲಮಂಡಳಿಯು ಕಡಿಮೆ ದರದಲ್ಲಿ ನೀರು ವಿತರಿಸುತ್ತಿರುವುದರಿಂದ ಟ್ಯಾಂಕರ್ ದಂಧೆಗೆ ಕಡಿವಾಣ ಬಿದ್ದಿದೆ.

**ಟ್ಯಾಂಕರ್ ದಂಧೆಗೆ ಕಡಿವಾಣ**

2025 ಮೇ 9 ರಿಂದ ಈವರೆಗೆ ಸುಮಾರು 16,000ಕ್ಕೂ ಅಧಿಕ ಗ್ರಾಹಕರು ಯೋಜನೆಗೆ ನೋಂದಣಿಯಾಗಿ ನೀರು ಖರೀದಿಸುತ್ತಿದ್ದಾರೆ. ಅಲ್ಲದೆ, ನೋಂದಣಿಯಾಗುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ.

ನೀರು ಸರಬರಾಜು ಮಾಡುವ ಟ್ಯಾಂಕರ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ನಾಗಕರಿಕರು ಮಂಡಳಿಯ ವೆಬ್‌ಸೈಟ್ ಅಥವಾ ಮೊಬೈಲ್‌ನಲ್ಲಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಬುಕ್ಕಿಂಗ್ ಮಾಡಿದ 18 ರಿಂದ 24 ಗಂಟೆಗಳಲ್ಲಿ ನೀರು ಒದಗಿಸಲಾಗುತ್ತಿದೆ.

**30,744 ಆರ್ಡರ್‌ಗಳು:(2026 ಮೇ 9ರವರೆಗೆ)**

4,000 ಲೀಟರ್‌ಗೆ 660 ರೂ, 5,000 ಲೀಟರ್‌ಗೆ 700 ರೂ., 6000 ಲೀಟರ್‌ಗೆ 740 ರೂ. ಮತ್ತು 12,000 ಲೀಟರ್‌ಗೆ 1,290 ರೂ. ನಿಗದಿಪಡಿಸಲಾಗಿದೆ. ಜಲಮಂಡಳಿಯ ನೀರು ಸಂಗ್ರಹಾಗಾರಗಳಿಂದ ಎರಡು ಕಿ.ಮೀ. ಒಳಗಿನ ಪ್ರದೇಶಗಳಿಗೆ ಇದೇ ದರ ಇರಲಿದೆ. ಹೆಚ್ಚುವರಿಯಾಗಿ ಪ್ರತಿ ಕಿ.ಮೀ. ದೂರಕ್ಕೆ 70 ರೂ. ಶುಲ್ಕವನ್ನು ಗ್ರಾಹಕರು ತೆರಬೇಕಿದೆ.

ಕಳೆದೊಂದು ವರ್ಷದಲ್ಲಿ ಈವರೆಗೂ ಆನ್‌ಲೈನ್ ಮೂಲಕ 30,744 ಆರ್ಡರ್‌ಗಳನ್ನು ಪಡೆದು ಸುಮಾರು 231.32 ಎಂಎಲ್‌ಡಿ ನೀರು ಪೂರೈಕೆ ಮಾಡಲಾಗಿದೆ. ಇದರಿಂದ 2.88 ಕೋಟಿ ರೂ. ಆದಾಯ ಗಳಿಸಿದೆ.

ಉದಯವಾಹಿನಿ ಚಿತ್ರ



**ನಗರ ವಾಸಿಗಳಿಂದ ಉತ್ತಮ ಸ್ಪಂದನೆ**

**ಒಂದು ವರ್ಷದ ಹಿಂದೆ ಶುರುವಾದ ಈ ಯೋಜನೆಗೆ ನಗರ ವಾಸಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಹೀಗಾಗಿ, ಈ ಯೋಜನೆ ಮೂಲಕ ಜಲಮಂಡಳಿ ಬೊಕ್ಕಸಕ್ಕೆ ಬರೋಬ್ಬರಿ 5,25,09,030 ರೂ. ಆದಾಯ ಹರಿದು ಬಂದಿದೆ. ಬೇಸಿಗೆಯಲ್ಲಿ ನೀರಿನ ಅಭಾವವನ್ನೇ ಬಂಡವಾಳವಾಗಿಸಿಕೊಳ್ಳುತ್ತಿದ್ದ ಖಾಸಗಿ ಟ್ಯಾಂಕರ್ ಮಾಲೀಕರು, ನೀರಿನ ದರವನ್ನು ಏಕಾಏಕಿ ಏರಿಕೆ ಮಾಡಿ ಗ್ರಾಹಕರನ್ನು ಸುಲಿಗೆ ಮಾಡುತ್ತಿದ್ದರು. ನೀರಿನ ಶುದ್ಧತೆಯನ್ನೂ ಪರೀಕ್ಷಿಸದ ಗ್ರಾಹಕರು, ಅನಿವಾರ್ಯವಾಗಿ ಕೇಳಿದಷ್ಟು ಹಣ ಕೊಟ್ಟು ನೀರು ಖರೀದಿಸುವ ಪರಿಸ್ಥಿತಿಯಿತ್ತು.**

**5,25,09,030 ರೂಪಾಯಿ ಆದಾಯ**

**ಬೆಂಗಳೂರಿನಲ್ಲಿ ಖಾಸಗಿ ಟ್ಯಾಂಕರ್ ಮಾಲೀಕರ ದರ ಸುಲಿಗೆಗೆ ಬ್ರೇಕ್ ಹಾಕಲು ಜಲಮಂಡಳಿ ಆರಂಭಿಸಿದ 'ಸಂಚಾರಿ ಕಾವೇರಿ' ಯೋಜನೆ ಅಭೂತಪೂರ್ವ ಯಶಸ್ಸು ಕಂಡಿದೆ. ಸಾರ್ವಜನಿಕರ ಮನೆ ಬಾಗಿಲಿಗೆ ಬಿಐಎಸ್ ಪ್ರಮಾಣೀಕೃತ ಶುದ್ಧ ಕುಡಿಯುವ ನೀರನ್ನು ಪೂರೈಸುವ ಈ ಮಹತ್ವಾಕಾಂಕ್ಷಿ ಯೋಜನೆಗೆ ನಗರವಾಸಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಕಳೆದ ಒಂದು ವರ್ಷದಲ್ಲಿ ಜಲಮಂಡಳಿಯ ಬೊಕ್ಕಸಕ್ಕೆ ಒಟ್ಟು 5,25,09,030 ರೂಪಾಯಿ ಆದಾಯ ಹರಿದುಬಂದಿದೆ.**

20,284 ಬಲ್ಕ್ ಆರ್ಡರ್‌ಗಳಿಂದ 2.36 ಕೋಟಿ ರೂ. ಸಂಗ್ರಹಿಸಲಾಗಿದೆ. ಒಟ್ಟು 51,028 ಆರ್ಡರ್‌ಗಳಿಂದ 5.25 ಕೋಟಿ ರೂ. ಆದಾಯ ಹರಿದು ಬಂದಿದೆ.

**ಪೂರ್ವ ವಲಯದಲ್ಲಿಯೇ ಹೆಚ್ಚು:** 51,028 ಆರ್ಡರ್‌ಗಳಿಂದ ಸಂಗ್ರಹವಾಗಿರುವ 5,25,09,030 ರೂ ಆದಾಯದ ಪೈಕಿ 3,42,15,030 ರೂ. ಪೂರ್ವ ವಲಯ, 1,15,91,630 ರೂ. (11,727 ಆರ್ಡರ್) ದಕ್ಷಿಣ ವಲಯ, 44,96,550 ರೂ. (6,184 ಆರ್ಡರ್) ಉತ್ತರ ವಲಯ ಹಾಗೂ 22,05,820 ರೂ.(2,820 ಆರ್ಡರ್) ಪಶ್ಚಿಮ ವಲಯದಿಂದ ಬಂದಿದೆ. ಕಾವೇರಿ 5ನೇ ಹಂತದ ಯೋಜನೆ ವ್ಯಾಪ್ತಿಯ 110 ಹಳ್ಳಿಗಳು ಸೇರಿರುವ ಪೂರ್ವ ವಲಯದಲ್ಲಿ ಹೆಚ್ಚಿನ ಪ್ರಮಾಣದ ನೀರು ಮಾರಾಟವಾಗಿದೆ.

ಈ ಯೋಜನೆ ಅನುಷ್ಠಾನದ ನಂತರ ಖಾಸಗಿ ಟ್ಯಾಂಕರ್‌ಗಳ ದುಪ್ಪಟ್ಟು ದರ ನಿಗದಿಗೆ ಕಡಿವಾಣ ಬಿದ್ದಿದೆ. ಸಾರ್ವಜನಿಕರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಈ ಯೋಜನೆಯಡಿ 151ಕ್ಕೂ ಅಧಿಕ ಟ್ಯಾಂಕರ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂದು ಜಲಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

## ಅಪ್ರಾಪ್ತ ವಯಸ್ಸಿನ ಅಪರಾಧ ಕೃತ್ಯಕ್ಕೆ ವಯಸ್ಕನಾದಾಗ ಬಂಧನ ಸಾಧ್ಯವಿಲ್ಲ: ಹೈಕೋರ್ಟ್

• **ಉದಯವಾಹಿನಿ, ಬೆಂಗಳೂರು**

ಅಪ್ರಾಪ್ತ ವಯಸ್ಸಿನಲ್ಲಿದ್ದಾಗ ಎಸಗಿರುವ ಅಪರಾಧಗಳನ್ನು ಆಧಾರವಾಗಿಟ್ಟುಕೊಂಡು ವಯಸ್ಕನಾದ ನಂತರ ಗೂಂಡಾ ಕಾಯಿದೆಯಡಿ ಮುನ್ನೆಚ್ಚರಿಕಾ ಕ್ರಮವಾಗಿ ಬಂಧನ ಆದೇಶ ಹೊರಡಿಸಲು ಅಧಿಕಾರವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

**ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ:** ಅಲ್ಲದೆ, ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿರುವ ಅಭಿಚೆರ್ಲಿ ಅಲಿಯಾಸ್ ಅಭಿ ಎಂಬುವವರನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಸರಕಾರಕ್ಕೆ ಸೂಚನೆ ನೀಡಿದೆ. ತಮ್ಮ ಪುತ್ರನನ್ನು ಬಂಧಿಸಿರುವ ಆದೇಶ ಪ್ರಶ್ನಿಸಿ ಕೋಲಾರ ಜಿಲ್ಲೆಯ ಕೆಜಿಎಫ್‌ನ ಮೇರಿ ಉಷಾ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ತಾರಾ ವಿತಸ್ತ ಗಂಜು ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಬಂಧಿತರು 2006 ರ ಅ.8 ರಂದು ಜನಿಸಿದ್ದು, ಸದ್ಯ 19 ವರ್ಷ ವಯಸ್ಸಿನವರಾಗಿದ್ದಾರೆ. ಅವರ ವಿರುದ್ಧ 2025ರ ಡಿ.11ರಂದು ಗೂಂಡಾ ಕಾಯಿದೆಯಡಿ ಬಂಧನ ಆದೇಶ ಹೊರಡಿಸಲಾಗಿದೆ. ಅವರ ವಿರುದ್ಧದ ಆರೋಪಗಳು 2 023, 2024, 2025 ರಲ್ಲಿ ನಡೆದ ಘಟನೆಗಳಾಗಿವೆ. ಹಾಗಾಗಿ ಅವರ ಬಂಧನಕ್ಕೆ ಹೊರಡಿಸಿರುವ ಆದೇಶದಲ್ಲಿ 18 ವರ್ಷಕ್ಕೂ ಕಡಿಮೆ ವಯಸ್ಸಿನಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಉಲ್ಲೇಖಿಸಲಾಗಿದೆ ಎಂದು ನ್ಯಾಯಾಲಯ ಹೇಳಿದೆ. ಬಾಲ ನ್ಯಾಯ ಕಾಯಿದೆ ಆದ್ದರಿಂದ ಬಾಲ ನ್ಯಾಯ ಕಾಯಿದೆಯನ್ನು ಸಂವಿಧಾನದ ಪರಿಚ್ಛೇದ 15(3) ಅಡಿಯಲ್ಲಿ ಜಾರಿ ಮಾಡಲಾಗಿದೆ.




ಈ ಕಾಯಿದೆಯು ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆ ಮತ್ತು ಹೇಗ್ ಸಮ್ಮೇಳನದಲ್ಲಿ ಆಗಿರುವ ಒಡಂಬಡಿಕೆಗಳ ಅನುಸಾರದಲ್ಲಿ ಜಾರಿ ಮಾಡಲಾಗಿದೆ. ಹಾಗಾಗಿ ಕಾಯಿದೆಯ ಸೆಕ್ಷನ್ 24 ರ ಉದ್ದೇಶವು, ಅಪ್ರಾಪ್ತನಾಗಿದ್ದ ಸಂದರ್ಭದಲ್ಲಿ ಮಾಡಿದ ಅಪರಾಧ ಕೃತ್ಯಗಳು, ಪ್ರಾಪ್ತರಾದ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ. ಆ ಪ್ರಕರಣಗಳ ಆಧಾರದಲ್ಲಿ ಗೂಂಡಾ ಕಾಯಿದೆಯಡಿ ಬಂಧನ ಆದೇಶ ಹೊರಡಿಸಧಿಲಾಗದು, ಎಂದು ನ್ಯಾಯಾಲಯ ಹೇಳಿದೆ. ಜತೆಗೆ ಬಂಧನದ ನಿರ್ಧಾರ ತೆಗೆದುಕೊಳ್ಳುವಾಗ ಅಧಿಕಾರಿಗಳು ಹಳೆಯ ಪ್ರಕರಣಗಳನ್ನು ಗಣನೆಗೆ ತೆಗೆದುಕೊಂಡಿರುವುದು ಕಾಯಿದೆಯ ಉದ್ದೇಶಕ್ಕೆ ವಿರುದ್ಧವಾಗಿದೆ. ಹೀಗಾಗಿ ಬಂಧನ ಆದೇಶ ರದ್ದುಪಡಿಸಿ ತಕ್ಷಣ ಬಿಡುಗಡೆ ಮಾಡಬೇಕು ಎಂದು ನ್ಯಾಯಪೀಠ ತಿಳಿಸಿದೆ.

## ಎಲ್‌ಪಿಜಿ ಅಭಾವ: ಕೈಗಾರಿಕೆಗಳಿಗೆ ಮುಚ್ಚುವ ಭೀತಿ

• **ಉದಯವಾಹಿನಿ, ಬೆಂಗಳೂರು**

ವಾಣಿಜ್ಯ ಬಳಕೆಯ ಎಲ್‌ಪಿಜಿ ಅಭಾವ, ದರ ಏರಿಕೆ ಪರಿಣಾಮ, ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ 400ಕ್ಕೂ ಹೆಚ್ಚು ಸಣ್ಣ ಕಾರ್ಖಾನೆಗಳಿಗೆ ಮುಚ್ಚುವ ಭೀತಿ ಎದುರಾಗಿದೆ. ಏಷ್ಯಾದಲ್ಲಿಯೇ ಅತಿದೊಡ್ಡ ಕೈಗಾರಿಕಾ ಪ್ರದೇಶ ಪೀಣ್ಯದಲ್ಲಿರುವ ಕೈಗಾರಿಕೆಗಳು ಸಮಸ್ಯೆಗಳನ್ನು ಎದುರಿಸುತ್ತಿವೆ. ಏಪ್ರಿಲ್‌ನಿಂದ, ಸರ್ಕಾರಿ ಸ್ವಾಮ್ಯದ ಅನಿಲ ಕಂಪನಿಗಳು ತಮ್ಮ ನಿಯಮಿತ ಪೂರೈಕೆಯನ್ನು ನಿಲ್ಲಿಸಿವೆ. ಸಣ್ಣ ಉದ್ಯಮಿಗಳು ಕಾಳಸಂತೆಯಲ್ಲಿ ಎಲ್‌ಪಿಜಿ ಖರೀದಿಸುವಂತಾಗಿದೆ. 19 ಕೆ.ಜಿ. ಸಿಲಿಂಡರ್ ದರವನ್ನು ಇತ್ತೀಚೆಗೆ 993 ಹೆಚ್ಚಿಸಲಾಯಿತು. ಪ್ರಸ್ತುತ 19 ಕೆ.ಜಿ. ಸಿಲಿಂಡರ್ ದರ 3,152 ಇದನ್ನು ಕಾಳಸಂತೆಯಲ್ಲಿ 4,500ವರೆಗೂ ಮಾರಾಟ ಮಾಡಲಾಗುತ್ತಿದೆ.

ಪೀಣ್ಯ ಇಂಡಸ್ಟ್ರೀಸ್ ಅಸೋಸಿಯೇಷನ್ ಪ್ರಕಾರ, ಅನೇಕ ಕಾರ್ಖಾನೆಗಳನ್ನು ನಡೆಸಲು



ವಾರಕ್ಕೆ ಕನಿಷ್ಠ 15 ರಿಂದ 20 ಸಿಲಿಂಡರ್‌ಗಳು ಅಗತ್ಯವಿದೆ. ಆದರೆ, ಪ್ರತಿ ಘಟಕಕ್ಕೆ ವಾರಕ್ಕೆ ಕೇವಲ ಮೂರು ಸಿಲಿಂಡರ್‌ಗಳಿಗೆ ಮಾತ್ರ ಅನುಮತಿ ನೀಡಲಾಗಿದೆ. ಪಶ್ಚಿಮ ಏಷ್ಯಾ ಸಂಘರ್ಷದಿಂದ ಈ ವ್ಯತ್ಯಯ ಉಂಟಾಗಿದೆ. ಇದರಿಂದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಆರ್ಥಿಕ ಸ್ಥಿರತೆ ಹದಗೆಟ್ಟಿದೆ. ಪೀಣ್ಯದ ಬಹುತೇಕ ಸಣ್ಣ ವರ್ಕ್‌ಶಾಪ್‌ಗಳು ದೊಡ್ಡ ಕಂಪನಿಗಳಿಗೆ ಅಗತ್ಯವಿರುವ ಬಿಡಿಭಾಗಗಳನ್ನು ತಯಾರಿಸುತ್ತವೆ. ಈ ಸಂಬಂಧ ಒಪ್ಪಂದ ಮಾಡಿಕೊಂಡಿವೆ.


ದೊಡ್ಡ ಕೈಗಾರಿಕೆಗಳೊಂದಿಗೆ 6 ರಿಂದ 12 ತಿಂಗಳವರೆಗೆ ಸ್ಥಿರ ದರದ ಒಪ್ಪಂದ ಮಾಡಿಕೊಳ್ಳಲಾಗಿದೆ. ಬೆಲೆಗಳನ್ನು ಒಪ್ಪಂದದ ಮಧ್ಯದಲ್ಲಿ ಹೆಚ್ಚಿಸಲು ಸಾಧ್ಯವಿಲ್ಲ, ಆದರೆ, ಇಂಧನ ವೆಚ್ಚ ಮೂರು ಪಟ್ಟು ಹೆಚ್ಚಾಗಿದೆ. ನಾವು ಸರಬರಾಜು ಮಾಡದಿದ್ದರೆ, ನಮ್ಮನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ' ಎಂದು ಸಣ್ಣ ಘಟಕದ ಮಾಲೀಕರೊಬ್ಬರು ತಿಳಿಸಿದರು. 12,000ಕ್ಕೂ ಹೆಚ್ಚು ಕೈಗಾರಿಕೆಗಳನ್ನು ಪ್ರತಿನಿಧಿಸುವ ಪಿಐಎ,ಎಂಎಸ್‌ಎಂಇ ನೆರವಿಗೆ ಧಾವಿಸುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

'ವಿದ್ಯುತ್, ನೀರು ಮತ್ತು ತೆರಿಗೆ ಬಿಲ್‌ಗಳು ಹೆಚ್ಚುತ್ತಿವೆ. ಕೇಂದ್ರ ಸರ್ಕಾರ ಇತ್ತೀಚೆಗೆ ಎಂಎಸ್ ಎಂಇಗಳಿಗೆ 2.5 ಲಕ್ಷ ಕೋಟಿ ತುರ್ತು ನಿಧಿ ಬಿಡುಗಡೆ ಮಾಡಿದೆ. ಆದರೆ ನಮಗೆ ನಿರ್ದಿಷ್ಟವಾಗಿ ಬೇಕಾಗಿರುವುದು ಸಬ್ಸಿಡಿ ಯೋಜನೆ ಮತ್ತು ನೇರ ಸಹಾಯಧನ' ಎಂದು ಪಿಐಎ ಅಧ್ಯಕ್ಷ ಡಿ.ಪಿ. ದಾನಪ್ಪ ಹೇಳಿದರು.

## ಭದ್ರಾ ಮೇಲ್ದಂಡೆ ಯೋಜನೆಗೆ ಡಿ.ಸುಧಾಕರ್ ಹೆಸರು

• **ಉದಯವಾಹಿನಿ, ಬೆಂಗಳೂರು**

ಭದ್ರಾ ಮೇಲ್ದಂಡೆ ಯೋಜನೆಗೆ ಡಿ.ಸುಧಾಕರ್ ಹೆಸರನ್ನು ನಾಮಕರಣ ಮಾಡಲು ಕ್ರಮ ಕೈಗೊಳ್ಳುವುದಾಗಿ ಜಲ ಸಂಪನೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ತಮ್ಮ ನಿವಾಸದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ, ಸುಧಾಕರ್ ಅವರು ಅಪಾರ ಕಾಳಜಿವಹಿಸಿದ್ದರು. ಕೆಲಸ ಮುಗಿದ ಬಳಿಕ ಅದರ ಉದ್ಘಾಟನೆಗೆ ತೀವ್ರ ಆಸಕ್ತಿವಹಿಸಿದ್ದರು. ಆದರೆ ಚಿಕ್ಕ ವಯಸ್ಸಿನಲ್ಲೇ ಅಕಾಲಿಕ ನಿಧನಕ್ಕೀಡಾಗಿದ್ದಾರೆ ಎಂದು ವಿಷಾದಿಸಿದರು. ತಮ್ಮ ಆತೀಯ ಸ್ನೇಹಿತ ಹಾಗೂ ಸಂಪುಟದ ಸಹೋದ್ಯೋಗಿ. ಸುಧಾಕರ್ ಮಂಡಿ ನೋವಿನ ಶಸ್ತ್ರ ಚಿಕಿತ್ಸೆಗೊಳಗಾದ ಬಳಿಕ ಚೇತರಿಸಿಕೊಳ್ಳಲಿಲ್ಲ ಎಂದು ಹೇಳಿದರು. ಅವರ ಆರೋಗ್ಯ ಸುಧಾರಿಸಿ ಮೊದಲಿನಂತಾಗುತ್ತಾರೆಂದು ನಾವು ಬಹಳ ನಿರೀಕ್ಷೆ ಹೊಂದಿದ್ದೆವು. ಆದರೆ ಅದು ಈಡೇರಲಿಲ್ಲ. ನಮ್ಮ ಜೊತೆ ಹೆಚ್ಚು ಒಡನಾಟ ಹೊಂದಿದ್ದರು. ಎಸ್.ಎಂ.ಕೃಷ್ಣ



ಸಿಎಂಆಗಿದ್ದಾಗಲೇ ಅವರಿಗೆ ಹಿರಿಯೂರು ಕ್ಷೇತ್ರದಿಂದ ಟಿಕೆಟ್ ಕೊಡಿಸಲು ತಾವು ಪ್ರಯತ್ನಿಸಿದ್ದಾಗಿ ಡಿ.ಕೆ. ಶಿವಕುಮಾರ್ ಹೇಳಿದರು. 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಅವರಿಗೆ ಯೋಜನೆ ಮತ್ತು ಮುಜರಾಯಿ ಖಾತೆಗಳನ್ನು ನೀಡಲು ನಿರ್ಧರಿಸಲಾಗಿತ್ತು. ನಂತರ ರಾಮಲಿಂಗಾರೆಡ್ಡಿ ಅವರಿಗೆ ಮುಜರಾಯಿ ಖಾತೆ ನೀಡಿ, ಸುಧಾಕರ್ ಅವರಿಗೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗಳ ಜವಾಬ್ದಾರಿ ನೀಡಿದ್ದಾಗಿ ತಿಳಿಸಿದರು.

ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆಯಲ್ಲಿ 5 ದಿನದ ಉಸ್ತುವಾರಿಯನ್ನು ಡಿ.ಸುಧಾಕರ್ ನಿರ್ವಹಿಸಿದ್ದರು. ಮಳೆ ಬಂದು ಅವ್ಯವಸ್ಥೆಗಳಾದಾಗ ಅದನ್ನು ಸರಿಪಡಿಸಲು ಡಿ.ಸುಧಾಕರ್ ಮತ್ತು ಅವರ ಬೆಂಬಲಿಗರು ಶ್ರಮಪಟ್ಟಿದ್ದನ್ನು ಕಣ್ಣಾರೆ ಕಂಡಿದ್ದನ್ನು ಸರಿಸಿಕೊಂಡರು. ಜೈನ ಸಮುದಾಯಕ್ಕೆ ಸೇರಿದ್ದರೂ ಎಲ್ಲರನ್ನು ಒಳಗೊಳ್ಳುವ ಮೂಲಕ ಜನಪ್ರಿಯ ನಾಯಕರಾಗಿದ್ದರು ಎಂದು ವಿವರಿಸಿದರು.

## ಆಯುಷ್ಮಾನ್ ಭಾರತ್ ಯೋಜನೆಯಡಿ ನಕಲಿ ಕ್ಲೇಮ್ ತಡೆಗೆ ಎಐ

• **ಉದಯವಾಹಿನಿ, ಬೆಂಗಳೂರು**

ಆಯುಷ್ಮಾನ್ ಭಾರತ್ ಯೋಜನೆಯಡಿ ನಕಲಿ ದಾಖಲೆ ಸಲ್ಲಿಸಿ ವಿಮೆ ಕ್ಲೇಮ್ ಮಂಜೂರು ಮಾಡಿಕೊಳ್ಳುವುದನ್ನು ತಡೆಯಲು ಕೃತಕ ಬುದ್ಧಿಮತ್ತೆ ಬಳಸಲಾಗುತ್ತಿದೆ. ಈ ಮೂಲಕ ಕಳೆದೆರಡು ವರ್ಷದಲ್ಲಿ 630 ಕೋಟಿ ರೂ. ಉಳಿಸಲಾಗಿದೆ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಸಿಇಒ ಡಾ. ಸುನೀಲ್ ಕುಮಾರ್ ಬನ್ವಾಲ್ ತಿಳಿಸಿದರು.

ನಕಲಿ ದಾಖಲೆ ಸಲ್ಲಿಸುವ ಆಸ್ಪತ್ರೆಗಳ ಬಗ್ಗೆ ಆಯಾ ರಾಜ್ಯಗಳಿಗೆ ಮಾಹಿತಿ ನೀಡಲಾಗುತ್ತಿದ್ದು, ಕಪ್ಪು ಪಟ್ಟಿಗೆ ಸೇರ್ಪಡೆ ಸೇರಿದಂತೆ ಹಲವು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ, ಎಂದರು.

**ವರ್ಷದಲ್ಲಿ 630 ಕೋಟಿ ರೂ. ಉಳಿಸಲಾಗಿದೆ**

Pradhan Mantri Jan Arogya Yojana
Ayushman Bharat
PM-JAY



ಆಯುಷ್ಮಾನ್ ಭಾರತ್ ಯೋಜನೆ
ಚಿಕಿತ್ಸೆ ನಿರಾಕರಿಸಿದರೆ ದೂರು ಸಲ್ಲಿಸಿ

ಪ್ರಸ್ತುತ ಎಐ ಬಳಸಿ ಡಯಾಲಿಸಿಸ್, ಕೆಟರಾಕ್ಟ್ ರೋಗಿಗಳ ದಾಖಲಾತಿಯನ್ನು ಶೇ. 100 ರಷ್ಟು ಸ್ವಯಂಚಾಲಿತವಾಗಿ ಪರಿಶೀಲಿಸುತ್ತಿದ್ದೇವೆ. ಪ್ರತಿದಿನ ಸುಮಾರು 40 ಸಾವಿರಕ್ಕೂ ಹೆಚ್ಚು ಕ್ಲೇಮ್‌ಗಳನ್ನು ಈ

**ಪಿಎಂಜೆಎವೈ ಅಡಿ ವಿಮೆ ಕ್ಲೇಮ್ ದುರುಪಯೋಗ ತಡೆ**

**''ಅನೇಕ ಆಸ್ಪತ್ರೆಗಳು, ಏಜೆನ್ಸಿಗಳು, ವ್ಯಕ್ತಿಗಳು ನಕಲಿ ಆರೋಗ್ಯ ದಾಖಲೆ ಸಲ್ಲಿಸಿ ಪಿಎಂಜೆಎವೈ ಅಡಿ ವಿಮೆ ಕ್ಲೇಮ್ ಮಾಡಿಕೊಂಡು ಯೋಜನೆಯನ್ನು ದುರುಪಯೋಗಪಡಿಸಿಕೊಳ್ಳಲು ಯತ್ನಿಸಿದ್ದರು. ಇದನ್ನು ಎಐ ಮೂಲಕ ಪತ್ತೆ ಮಾಡಿ, ಅಂತಹ ಕ್ಲೇಮ್ ಮಂಜೂರಾತಿ ತಡೆಯಲಾಗಿದೆ.**

ವ್ಯವಸ್ಥೆಯ ಮೂಲಕ ಪರಿಶೀಲಿಸಿ ಮಂಜೂರಾತಿ ನೀಡಲಾಗುತ್ತಿದೆ,'' ಎಂದು ಹೇಳಿದರು.

''ಮ್ಯಾನ್ಯುವಲ್ ಆಗಿ ಕ್ಲೇಮ್ ಮಂಜೂರಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಎಕ್ಸಿಕ್ಯೂಟಿವ್, ವೈದ್ಯರಿಗೆ ಕನಿಷ್ಠ 20 ದಿನವಾದರೂ ಬೇಕು. ಆದರೆ, ಎಐ ತಂತ್ರಜ್ಞಾನದಲ್ಲಿ ಶೇ.90 ರಷ್ಟು ಪ್ರಕರಣಗಳನ್ನು 4 ತಾಸಿನಲ್ಲಿ ಇತ್ಯರ್ಥಪಡಿಸಬಹುದು. ಉಳಿದಂತೆ ಪಿಎಂಜೆಎವೈ ಯೋಜನೆಯಡಿ ಲಭ್ಯವಿರುವ ಸುಮಾರು 2 ಸಾವಿರಕ್ಕೂ ಹೆಚ್ಚು ರೋಗಗಳ ವಿಮಾ ಪ್ರಕ್ರಿಯೆಗೂ ಇದನ್ನು ಅನ್ವಯಿಸಲು ಯೋಜಿಸಿದ್ದೇವೆ,'' ಎಂದು ತಿಳಿಸಿದರು.

''ಪಿಎಂಜೆಎವೈ ಅಡಿ ರೋಗ ನಿರ್ಣಯಕ್ಕೂ ಎಐ ಬಳಸಲಾಗುತ್ತಿದೆ. ಇದರಿಂದ ಕ್ಯಾನ್ಸರ್ ಪ್ರಕರಣವನ್ನು ಮೊದಲ ಹಂತದಲ್ಲಿ ಪತ್ತೆ ಮಾಡಿ ಪರಿ ಣಾಮಕಾರಿ ಚಿಕಿತ್ಸೆ ನೀಡಿ ಜೀವ ಉಳಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

## ರೈಲು ಪ್ರಯಾಣಿಕರಿಗೆ ಗುಡ್‌ನ್ಯೂಸ್

### ನೈಋತ್ಯ ವಲಯದ 18 ರೈಲುಗಳು ಕಾಯಂ, ಯಾವೆಲ್ಲಾ ರೈಲುಗಳು

• **ಉದಯವಾಹಿನಿ, ಬೆಂಗಳೂರು**

ನೈಋತ್ಯ ರೈಲ್ವೆ ವಲಯವು ತನ್ನ ವ್ಯಾಪ್ತಿಯ 18 ವಿಶೇಷ ರೈಲುಗಳನ್ನು ಕಾಯಂ ರೈಲುಗಳಾಗಿ ಪರಿವರ್ತಿಸಿ ಶನಿವಾರ ಆದೇಶ ಹೊರಡಿಸಿದೆ. ವರ್ಷದಿಂದ ವಿಶೇಷ ರೈಲುಗಳಾಗಿ ಸಂಚರಿಸುತ್ತಿದ್ದ ಕಾರಣ ಪ್ರಯಾಣಿಕರು ಶೇ.30ರಷ್ಟು ಹೆಚ್ಚಿನ ದರವನ್ನು ಪಾವತಿಸಬೇಕಾಗಿತ್ತು. ರೈಲ್ವೆ ಮಂಡಳಿಯ ಒಪ್ಪಿಗೆ ಬಳಿಕವೂ ನೈಋತ್ಯ ರೈಲ್ವೆ ಕಾಯಂ ಮಾಡಿರಲಿಲ್ಲ. ಈ ಬಗ್ಗೆ ವಿಜಯ ಕರ್ನಾಟಕ ಮೇ 4ರಂದು 'ವಿಶೇಷ ರೈಲುಗಳ ಕಾಯಂ ಯಾವಾಗ' ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ಈಗ ವಲಯವು ರೈಲುಗಳ ಕಾಯಮಾತಿಯನ್ನು ಮೇ 11ರಿಂದ ಹಂತ ಹಂತವಾಗಿ ಜಾರಿ ಮಾಡಲಿದೆ. ಇದರಿಂದಾಗಿ ಇನ್ನು ಮುಂದೆ ಈ ರೈಲುಗಳ ಸಂಚಾರ ಪದೇಪದೆ ವಿಸ್ತರಣೆಯಾಗುವುದು ಹಾಗೂ ಮುಂಗಡ ಬುಕ್ಕಿಂಗ್ ಸಮಸ್ಯೆ ತಪ್ಪಲಿದೆ.

**ಪ್ರತಿ ದಿನದ ರೈಲುಗಳು:** ಹುಬ್ಬಳ್ಳಿ-ವಿಜಯಪುರ ಹೋಗಿ ಬರುವ ನಾಲ್ಕು ರೈಲು, ಕೆಎಸ್‌ಆರ್ ಬೆಂಗಳೂರು-ಚನ್ನಪಟ್ಟಣಕ್ಕೆ ಹೋಗಿ ಬರುವ ಎರಡು ರೈಲು, ಬೆಂಗಳೂರಿಂದ ಅಶೋಕಪುರಂ ಹೋಗಿ ಬರುವ ಎರಡು ರೈಲು, ಬಂಗಾರಪೇಟೆಯಿಂದ ಬೆಂಗಳೂರಿಗೆ ಹೋಗಿ ಬರುವ ಎರಡು ರೈಲು, ಯಶವಂತಪುರ ಹಿಂದೂಪುರ ಹೋಗಿ ಬರುವ ರೈಲುಗಳನ್ನು ಕಾಯಂಗೊಳಿಸಲಾಗಿದೆ. ಜತೆಗೆ ಶುಕ್ರವಾರದಿಂದ ಭಾನುವಾರದವರೆಗೆ ಓಡಾಡುವ ಕೆಎಸ್‌ಆರ್ ಬೆಂಗಳೂರು-ಅಶೋಕಪುರಂ ನಡುವೆ ಎರಡು ರೈಲು, ಶುಕ್ರವಾರ ಮತ್ತು ಶನಿವಾರ ಹೋಗಿ ಬರುವ ಯಶವಂತಪುರ-ತಾಳಗುಪ್ಪ ರೈಲು ಸೇವೆ ಕಾಯಂ ಆಗಿವೆ.



ಮೈಸೂರು ಹಾಗೂ ಬೆಂಗಳೂರು ಎಸ್‌ಎಂವಿಟಿ ನಡುವಿನ ಪ್ಯಾಸೆಂಜರ್ ರೈಲು ಸೇವೆ ಕಾಯಂ ಆಗಿಲ್ಲ. ರಾತ್ರಿ ಸಂಚರಿಸುವ ಈ ರೈಲಿನಲ್ಲಿ ಸಾಕಷ್ಟು ಪ್ರಯಾಣಿಕರು ಓಡಾಡುತ್ತಿದ್ದು, ಹೆಚ್ಚಿನ ಬೇಡಿಕೆ ಇದೆ. ಆದಷ್ಟು ಬೇಗ ಇದನ್ನು ಕಾಯಂ ರೈಲಾಗಿ ಪರಿವರ್ತಿಸಬೇಕು, ಎಂದು ಮೈಸೂರಿನ ರೈಲು ಬಳಕೆದಾರ ಬಿ.ರಾಜೇಶ್ ಒತ್ತಾಯಿಸಿದ್ದಾರೆ. ರೈಲುಗಳನ್ನು ಕಾಯಂ ಮಾಡಿರುವುದರಿಂದ ಹೆಚ್ಚು ಅನುಕೂಲವಾಗಲಿದ್ದು, ಇತರೆ ವಲಯಗಳಿಂದ ರಾಜ್ಯಕ್ಕೆ ಸಂಚರಿಸುವ ರೈಲುಗಳನ್ನು ಕಾಯಂ ಮಾಡಲು ನೈಋತ್ಯ ರೈಲ್ವೆ ಪ್ರಯತ್ನಿಸಬೇಕು, ಎಂದು ರೈಲ್ವೆ ಸಾರಿಗೆ ತಜ್ಞ ಕೆ.ಎನ್.ಕೃಷ್ಣಪ್ರಸಾದ್ ಹೇಳಿದರು.

- **ವಲಯವು ರೈಲುಗಳ ಕಾಯಮಾತಿಯನ್ನು ಮೇ 11ರಿಂದ ಹಂತ ಹಂತವಾಗಿ ಜಾರಿ ಮಾಡಲಿದೆ. ಇದರಿಂದಾಗಿ ಇನ್ನು ಮುಂದೆ ಈ ರೈಲುಗಳ ಸಂಚಾರ ಪದೇಪದೆ ವಿಸ್ತರಣೆಯಾಗುವುದು ಹಾಗೂ ಮುಂಗಡ ಬುಕ್ಕಿಂಗ್ ಸಮಸ್ಯೆ ತಪ್ಪಲಿದೆ.**
- **ಹುಬ್ಬಳ್ಳಿ-ವಿಜಯಪುರ ಹೋಗಿ ಬರುವ ನಾಲ್ಕು ರೈಲು, ಕೆಎಸ್‌ಆರ್ ಬೆಂಗಳೂರು-ಚನ್ನಪಟ್ಟಣಕ್ಕೆ ಹೋಗಿ ಬರುವ ಎರಡು ರೈಲು, ಬೆಂಗಳೂರಿಂದ ಅಶೋಕಪುರಂ ಹೋಗಿ ಬರುವ ಎರಡು ರೈಲು, ಖಾಯಂ**
- **ಮೈಸೂರು ಹಾಗೂ ಬೆಂಗಳೂರು ಎಸ್‌ಎಂವಿಟಿ ನಡುವಿನ ಪ್ಯಾಸೆಂಜರ್ ರೈಲು ಸೇವೆ ಕಾಯಂ ಆಗಿಲ್ಲ. ರಾತ್ರಿ ಸಂಚರಿಸುವ ಈ ರೈಲಿನಲ್ಲಿ ಸಾಕಷ್ಟು ಪ್ರಯಾಣಿಕರು ಓಡಾಡುತ್ತಿದ್ದು, ಹೆಚ್ಚಿನ ಬೇಡಿಕೆ ಇದೆ.**

**ರೈಲುಗಳನ್ನೂ ಕಾಯಂ ಮಾಡಲು ಒತ್ತಾಯ**

**ನೈರುತ್ಯ ವಲಯದ 18 ರೈಲುಗಳು ಕಾಯಂ ಆಗುವ ಮೂಲಕ ಜನರಿಗೆ ಹೆಚ್ಚುವರಿಯಾಗಿ ತಗುಲುತ್ತಿದ್ದ 30% ಟಿಕೆಟ್ ಹಣ ಇನ್ಮುಂದೆ ಕಡಿತ ಆಗಲಿದೆ. ಮೇ 11 ರಿಂದ ವಿಶೇಷ ರೈಲುಗಳು ಖಾಯಂ ಆಗಲಿದ್ದು, ಇತರೆ ವಲಯಗಳ ರೈಲುಗಳನ್ನೂ ಕಾಯಂ ಮಾಡಲು ಒತ್ತಾಯ ಕೇಳಿಬಂದಿದೆ.**

### ನೈಋತ್ಯ ರೈಲ್ವೆ ಸುರಕ್ಷತಾ ದಳ ಪ್ರಯಾಣಿಕರ ಸುರಕ್ಷತಾ ಅಭಿಯಾನ

- **ಏಪ್ರಿಲ್ 2026 ರಲ್ಲಿ 'ನನ್ಹೆ ಫರಿಸ್ತೇ' ಕಾರ್ಯಾಚರಣೆಯ ಅಡಿಯಲ್ಲಿ ನೈಋತ್ಯ ರೈಲ್ವೆಯು 12 ಹುಡುಗಿಯರು ಸೇರಿದಂತೆ 67 ಮಕ್ಕಳನ್ನು ರಕ್ಷಿಸಿದೆ.**
- **36.62 ಲಕ್ಷ ಮೌಲ್ಯದ ಪ್ರಯಾಣಿಕರ ಕಳೆದುಹೋದ ವಸ್ತುಗಳನ್ನು ತ್ವರಿತವಾಗಿ ವಶಪಡಿಸಿಕೊಂಡು ಹಿಂದಿರುಗಿಸಲಾಗಿದೆ**
- **ಏಪ್ರಿಲ್ 2026 ರಲ್ಲಿ 04 ವ್ಯಕ್ತಿಗಳನ್ನು ಬಂಧಿಸಿ ರೂ. 61.6 ಲಕ್ಷ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಕೊಳ್ಳಲಾಗಿದೆ**
- **ಉಪಲಬ್ದ್ ಕಾರ್ಯಾಚರಣೆಯ ಅಡಿಯಲ್ಲಿ ರೂ. 2.43 ಲಕ್ಷ ಮೌಲ್ಯದ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದೆ.**

ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ರೈಲ್ವೆ ಆಸ್ತಿ, ಪ್ರಯಾಣಿಕರ ಪ್ರದೇಶಗಳು ಮತ್ತು ಪ್ರಯಾಣಿಕರ ಕಲ್ಯಾಣವನ್ನು ಕಾಪಾಡುವ ತನ್ನ ದೃಢ ಬದ್ಧತೆಯನ್ನು ನಿರಂತರವಾಗಿ ಮುಂದುವರಿಸಿಕೊಂಡಿದೆ. ಪ್ರಯಾಣಿಕರಿಗೆ ಸುರಕ್ಷಿತ, ಭದ್ರತೆ ಹಾಗೂ ಆರಾಮದಾಯಕ ಪ್ರಯಾಣವನ್ನು ಖಚಿತಪಡಿಸಲು ಈ ಪಡೆ ದಿನದ 24 ಗಂಟೆಗಳೂ ನಿರಂತರವಾಗಿ ಸೇವೆ ಸಲ್ಲಿಸುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಏ. 2026ರಲ್ಲಿ, ಆರ್‌ಪಿಎಫ್ ಪ್ರಯಾಣಿಕರ ಸುರಕ್ಷತೆ, ಭದ್ರತೆ, ಸೌಕರ್ಯಗಳನ್ನು ಖಚಿತಪಡಿಸುವ ಕಾರ್ಯವನ್ನು ಮುಂದುವರಿಸಿಕೊಂಡು, ಭಾರತೀಯ ರೈಲ್ವೆ ತನ್ನ ಗ್ರಾಹಕರಿಗೆ ವಿಶ್ವಾಸಾರ್ಹ ಸರಕು ಸಾಗಣೆ ಸೇವೆಗಳನ್ನು ಒದಗಿಸಲು ಸಹಕಾರ ನೀಡಿದೆ.

## ಶ್ರೀರಂಗಪಟ್ಟಣ; ಬೆಂಕಿ ಆಕಸ್ಮಿಕದಿಂದ ಮನೆ ಅಗ್ನಿಗಾಹುತಿ: ಶಾಸಕ, ತಹಶೀಲ್ದಾರ್ ಭೇಟಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಶ್ರೀರಂಗಪಟ್ಟಣ

ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ರಾತ್ರಿ ಬೆಂಕಿ ಆಕಸ್ಮಿಕದಿಂದ ಪುಟ್ಟೇಗೌಡ ಎಂಬವರ ಮನೆ ಸುಟ್ಟು ಹೋಗಿದ್ದು, ಶಾಸಕ ರಮೇಶ ಬಂಡಿಸಿದ್ದೇಗೌಡ ಹಾಗೂ ತಹಶೀಲ್ದಾರ್ ಚೇತನಾ ಯಾದವ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮನೆ ಕಳೆದುಕೊಂಡ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಮನೆ ಪುನರ್ ನಿರ್ಮಾಣಕ್ಕೆ ವಸತಿ ಯೋಜನೆಯಡಿ ಅನುದಾನ ಕೊಡಿಸುವುದಾಗಿ ರಮೇಶ ಬಂಡಿಸಿದ್ದೇಗೌಡ ಭರವಸೆ ನೀಡಿದರು. ವೈಯಕ್ತಿಕವಾಗಿ ಒಂದು ಲಕ್ಷ ರೂಪಾಯಿ ಆರ್ಥಿಕ ನೆರವನ್ನೂ ಸಂತ್ರಸ್ತರಿಗೆ ಅವರು ನೀಡಿದರು. ತಾ.ಪಂ. ಮಾಜಿ ಸದಸ್ಯ ಸಂತೋಷ್, ಕಾಂಗ್ರೆಸ್ ಮುಖಂಡ ಹಂಗರಹಳ್ಳಿ ಗೋವಿಂದೇಗೌಡ ಕೂಡ ಆರ್ಥಿಕ ನೆರವು ನೀಡಿದರು.

ಮನೆ ಸಂಪೂರ್ಣ ಸುಟ್ಟು ಹೋಗಿರುವುದರಿಂದ 10 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ. ಬಟ್ಟೆ, ಪಾತ್ರೆ, ದವಸ-ಧಾನ್ಯ ಎಲ್ಲಾ ನಾಶವಾಗಿವೆ. ವಾಸ ಮಾಡಲು ಸದ್ಯ ಮನೆ ಇಲ್ಲದಂತಾಗಿದೆ ಎಂದು ಪುಟ್ಟೇಗೌಡ ಮತ್ತು ಅವರ ಕುಟುಂಬದ ಸದಸ್ಯರು ಕಣ್ಣೀರು ಹಾಕಿದರು. ಅಡುಗೆ ಮಾಡಲು ಹಚ್ಚಿದ್ದ ಒಲೆಯಿಂದ ಅಟ್ಟಕ್ಕೆ ಬೆಂಕಿ ಹೊತ್ತಿಕೊಂಡಿದೆ. ಬಳಿಕ ಇಡೀ ಮನೆಗೆ ಬೆಂಕಿ ವ್ಯಾಪಿಸಿದೆ. ಮನೆಯ ಅಟ್ಟದಲ್ಲಿ ಅಪಾರ ಪ್ರಮಾಣದ ಸೌದೆ, ಪುಸ್ತಕ, ಕಾಗದ ಪತ್ರಗಳು ಇದ್ದ ಕಾರಣ ಬೆಂಕಿ ಜ್ವಾಲೆ ತೀವ್ರವಾಗಿ ವ್ಯಾಪಿಸಿದೆ. ತೊಲೆ, ರಿಪೀಸುಗಳ ಸಹಿತ ಮನೆ ಸಂಪೂರ್ಣ ಸುಟ್ಟು ಹೋಗಿದೆ. ಅಡುಗೆ ಅನಿಲ ಸಿಲಿಂಡರ್ ಸ್ಫೋಟ ಸಂಭವಿಸಿಲ್ಲ ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ಅಡುಗೆ ಅನಿಲ ಸಿಲಿಂಡರ್ ಮಾರಾಟ ಏಜೆನ್ಸಿಯ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಖಚಿತ ಪಡಿಸಿದರು.

# ಬಿಸಿಲ ಹೊಡೆತಕ್ಕೆ ರೇಷ್ಮೆ ಬೆಲೆ ಕುಸಿತ

## ಕಂಗಾಲಾದ ರೇಷ್ಮೆ ಬೆಳೆಗಾರರು, ಸರಕಾರದ ಮಧ್ಯಪ್ರವೇಶಕ್ಕೆ ಆಗ್ರಹ

• ಉದಯವಾಹಿನಿ, ಚಿಕ್ಕಬಳ್ಳಾಪುರ

ರಾಜ್ಯದಲ್ಲಿ ಬಿರು ಬಿಸಿಲ ಹೊಡೆತಕ್ಕೆ ಜನ ಜಾನುವಾರುಗಳು ಬಳಲಿರುವುದಷ್ಟೇ ಅಲ್ಲದೆ ಕೃಷಿ ಕ್ಷೇತ್ರವೂ ನಲಗುತ್ತಿದೆ. ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾದ ರೇಷ್ಮೆ ಕೃಷಿ ಗುಣಮಟ್ಟದ ಜೊತೆಗೆ ಬೆಲೆ ಕುಸಿತದ ಹೊಡೆತಕ್ಕೆ ಸಿಲುಕಿದೆ. ಇದರಿಂದ ಕಷ್ಟಪಟ್ಟು ರೇಷ್ಮೆಗೂಡು ಬೆಳೆದ ರೈತರು ಸರಿಯಾದ ಬೆಲೆ ಸಿಗದೇ ಆತಂಕ ಎದುರಿಸುವಂತಾಗಿದೆ. ಉಷ್ಣಾಂಶ ಹೆಚ್ಚಳದಿಂದ ರೇಷ್ಮೆಗೆ ನಾನಾ ಕಾಯಿಲೆಗಳೂ ಸಹ ಕಾಡುತ್ತಿದ್ದು, ಹೀಗಾಗಿ ಅತಿ ಸೂಕ್ಷ್ಮ ಎನ್ನಿಸಿರುವ ರೇಷ್ಮೆ ನಿರೀಕ್ಷಿತ ಉತ್ಪಾದನೆ ಆಗುತ್ತಿಲ್ಲ. ರೇಷ್ಮೆ ಕೃಷಿ ನಿರ್ವಹಣೆ ಕಷ್ಟವಾಗಿದೆ.

**ದಿಢೀರ್ ಬೆಲೆ ಕುಸಿತ:** ಬಿಸಿಲಲ್ಲಿ ಕಷ್ಟಪಟ್ಟು ಬೆಳೆ ಬೆಳೆದರೂ ಮಾರುಕಟ್ಟೆಯಲ್ಲಿ ರೇಷ್ಮೆಗೂಡಿನ ಬೆಲೆ ಕಡಿಮೆಯಾಗಿದೆ. ಕಳೆದ 15 ದಿನಗಳ ಹಿಂದೆ ಪ್ರತಿ ಕೆ.ಜಿ ರೇಷ್ಮೆಗೂಡು 800 ರೂ.ವರೆಗೂ ಮಾರಾಟವಾಗುತ್ತಿತ್ತು. ಆದರೆ ಈಗ ಪ್ರತಿ ಕೆ.ಜಿ ರೇಷ್ಮೆಗೂಡಿನ ಗರಿಷ್ಠ ಬೆಲೆ 500 ರೂ.ಗೆ ಕುಸಿದಿದೆ. ಪ್ರತಿ ಕಿಲೋ ಮೇಲೆ ಸರಾಸರಿ 350-400 ರೂ.ನಷ್ಟು ಬೆಲೆ ಕಡಿಮೆ ಆಗಿದೆ. ಮಾರುಕಟ್ಟೆಗೆ ಬರುತ್ತಿರುವ ಗೂಡಿನ ಪ್ರಮಾಣದಲ್ಲಿ ಹೆಚ್ಚಾಗಿದ್ದರೂ, ಗುಣಮಟ್ಟವಿಲ್ಲದ ಕಾರಣ ರೇಷ್ಮೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ.

**ಗೂಡು ಬೆಳೆಯಲು ಪರದಾಟ:** ಬಿಸಿಲಿನ ತಾಪ ಹೆಚ್ಚಾಗುತ್ತಿರುವುದರಿಂದ ರೇಷ್ಮೆ ಕೃಷಿ ಉಳಿಸಿಕೊಳ್ಳಲು ಬೆಳೆಗಾರರು ನಾನಾ ರೀತಿಯ ಪ್ರಯತ್ನ ಮಾಡುತ್ತಿದ್ದಾರೆ. ಮನೆಗಳ ಸುತ್ತ ಚಪ್ಪರ ಹಾಕುವುದು, ಹನಿ ನೀರಾವರಿ, ಕಿಟಕಿಗಳಿಗೆ ಗೋಣಿಚೀಲ ಹಾಕಿ ನೀರು ಸಿಂಪಡಿಸುವುದು, ಚಾವಣಿ ಕಾಯದಂತೆ ಶೇಡ್‌ನೆಟ್ ಹೊದಿಸುವುದು. ತಂಪು ಹೊತ್ತಿನಲ್ಲಿ ಸೊಪ್ಪು ತರುವುದು, ಹುಳು ಸಾಕಣೆಗೆ ಮನೆಯ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಇರುವಂತೆ ನೋಡಿಕೊಳ್ಳುತ್ತಿದ್ದರೂ ಉತ್ತಮ ಗುಣಮಟ್ಟದ ಗೂಡು ಬೆಳೆಯುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ.

**ದಂಧೆಗಿಲ್ಲ ಕಡಿವಾಣ:** ಮತ್ತೊಂದೆಡೆ ರೇಷ್ಮೆ ಮಾರಾಟವೂ ಒಂದು ದಂಧೆಯಾಗಿ ಮಾರ್ಪಟ್ಟಿದೆ. ರೇಷ್ಮೆ ಮಾರುಕಟ್ಟೆ ಮೇಲೆ ಸರಕಾರದ ನಿಯಂತ್ರಣವಿಲ್ಲದಂತಾಗಿದೆ. ಒಂದು ವೇಳೆ ಸರಕಾರವೇ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸಿ ರೀಲರ್‌ಗಳಿಂದ ರೇಷ್ಮೆ ಖರೀದಿಗೆ ಮುಂದಾದರೆ ರೇಷ್ಮೆ ವರ್ತಕರು ಇನ್ನೂ ಹೆಚ್ಚಿನ ಬೆಲೆಗೆ ರೇಷ್ಮೆ ಖರೀದಿಸಲು ಬರುತ್ತಾರೆ. ಆದರೆ ರಾಜ್ಯ ಸರಕಾರ ಆ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ರೇಷ್ಮೆಗೂಡಿನ ಬೆಲೆ ನಿಯಂತ್ರಣ ಅನಿಶ್ಚಿತತೆಯಿಂದ ಕೂಡಿದೆ.


ಉದಯವಾಹಿನಿ ಚಿತ್ರ

- **ಕಳೆದ 15 ದಿನಗಳ ಹಿಂದೆ ಪ್ರತಿ ಕೆ.ಜಿ ರೇಷ್ಮೆಗೂಡು 800 ರೂ.ವರೆಗೂ ಮಾರಾಟವಾಗುತ್ತಿತ್ತು. ಆದರೆ ಈಗ ಪ್ರತಿ ಕೆ.ಜಿ ರೇಷ್ಮೆಗೂಡಿನ ಗರಿಷ್ಠ ಬೆಲೆ 500 ರೂ.ಗೆ ಕುಸಿದಿದೆ.**
- **ತಂಪು ಹೊತ್ತಿನಲ್ಲಿ ಸೊಪ್ಪು ತರುವುದು, ಹುಳು ಸಾಕಣೆಗೆ ಮನೆಯ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಇರುವಂತೆ ನೋಡಿಕೊಳ್ಳುತ್ತಿದ್ದರೂ ಉತ್ತಮ ಗುಣಮಟ್ಟದ ಗೂಡು ಬೆಳೆಯುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ.**
- **ಒಂದು ವೇಳೆ ಸರಕಾರವೇ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸಿ ರೀಲರ್‌ಗಳಿಂದ ರೇಷ್ಮೆ ಖರೀದಿಗೆ ಮುಂದಾದರೆ ರೇಷ್ಮೆ ವರ್ತಕರು ಇನ್ನೂ ಹೆಚ್ಚಿನ ಬೆಲೆಗೆ ರೇಷ್ಮೆ ಖರೀದಿಸಲು ಬರುತ್ತಾರೆ.**

**ಬಿಸಿಲ ಹೊಡೆತದಿಂದ ದಿಢೀರ್ ರೇಷ್ಮೆ ಬೆಲೆ ಕುಸಿತವಾಗಿದೆ. ಗೂಡಿನ ಬೆಲೆ 800 ರಿಂದ 500 ರೂಪಾಯಿಗೆ ಕುಸಿದಿದೆ. ಗುಣಮಟ್ಟದ ಕೊರತೆಯಿಂದ ರೇಷ್ಮೆಗೂಡಿಗೆ ಹೆಚ್ಚಿನ ಬೆಲೆ ಸಿಗುತ್ತಿಲ್ಲ. ಆದರೆ ಇದು ಸಮಸ್ಯೆ ಅಷ್ಟೆ, ಈ ಬೆಲೆ ಶಾಶ್ವತ ಅಲ್ಲ.**

**ಮಾರಪ್ಪ ಬಿರಾಲದಿನ್ನಿ ರೇಷ್ಮೆ ಇಲಾಖೆ ಉಪನಿರ್ದೇಶಕ**

## ಮಲೆ ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಗೆ ಬಾಲಕ ಬಲಿ


• ಉದಯವಾಹಿನಿ, ಹನೂರು

ತಾಲ್ಲೂಕಿನ ಮಲೈ ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿ ಮುಂದುವರೆದಿದ್ದು, ಕುಟುಂಬದವರೊಂದಿಗೆ ನಾಗಮಲೆಗೆ ತೆರಳುತ್ತಿದ್ದ ಬಾಲಕನೋರ್ವ ಚಿರತೆ ದಾಳಿಗೆ ಬಲಿಯಾಗಿರುವ ದುರ್ಘಟನೆ ಇಂದು ಬೆಳಿಗ್ಗೆ ನಡೆದಿದೆ.ಬೆಂಗಳೂರಿನ ನಿವಾಸಿ ಸುರೇಶ್ ಪುತ್ರ ಹರ್ಷಿತ್ (10) ಮೃತ ಬಾಲಕ.

ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಪೋಷಕರೊಂದಿಗೆ ತೆರಳಿದ್ದ ಬಾಲಕ ಭಾನುವಾರ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ನಾಗಮಲೆಗೆ ದೇವರ ದರ್ಶನಕ್ಕೆ ತೆರಳುವಾಗ ಇಂಡಿಗನತ್ತ ಅರಣ್ಯ ಪ್ರದೇಶದಲ್ಲಿ ಬಾಲಕನ ಮೇಲೆ ಚಿರತೆ ದಾಳಿ ನಡೆಸಿ ಎಳೆದೊಯ್ದಿದೆ. ಪೋಷಕರ ಮುಂದೆಯೇ ಚಿರತೆ ಬಾಲಕನನ್ನು ಎಳೆದೊಯ್ದ ದೃಶ್ಯ ಕರಳು ಹಿಂಡುವಂತಿತ್ತು.

ಸುಮಾರು ಅರ್ಧ ತಾಸಿನ ಬಳಿಕ ಬಾಲಕನ ಮೃತದೇಹ ಬಂಡೆಗಳ ಮಧ್ಯೆ ಪತ್ತೆಯಾಗಿದ್ದು, ಬಾಲಕನ ಕತ್ತು ಸೇರಿದಂತೆ ಅಂಗಾಂಗಳು ರಕ್ತಸಿಕ್ತವಾಗಿವೆ ಎಂದು ಸ್ಥಳೀಯರಿಂದ ತಿಳಿದು ಬಂದಿದೆ. ವಿಷಯ ತಿಳಿದ ಅರಣ್ಯ ಇಲಾಖೆ ವಾಚರ್‌ಗಳು ಸ್ಥಳದಲ್ಲಿದ್ದು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಭಕ್ತರು ನಾಗಮಲೆಗೆ ತೆರಳಲು ಅರಣ್ಯ ಇಲಾಖೆ ಅವರು ಬೆಳಿಗ್ಗೆ 7 ಗಂಟೆ ಬಳಿಕ ಟಿಕೆಟ್ ನೀಡುತ್ತಿದ್ದರು. ಆದರೆ ಇಂದು 6 ಗಂಟೆಗೆ ಟಿಕೆಟ್ ನೀಡಿರುವುದರಿಂದ ಈ ದುರ್ಘಟನೆ ಸಂಭವಿಸಿದೆ. ಈ ಸಾವಿಗೆ ಅರಣ್ಯ ಇಲಾಖೆಯವರೇ ಕಾರಣ ಎಂದು ನಮ ಕನ್ನಡಿಗರ ವಿಜಯ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಪೊನ್ನಾಚಿ ಸ್ನೇಹಜೀವಿ ರಾಜು ಆರೋಪಿಸಿದ್ದಾರೆ.



**ಮುಂದುವರೆದ ಚಿರತೆ ದಾಳಿ :** ಮಲೆ ಮಹದೇಶ್ವರ ಬೆಟ್ಟ ಕಾನನದಲ್ಲಿ ಚಿರತೆ ದಾಳಿ ಮುಂದುವರೆದಿದ್ದು ಈ ಹಿಂದೆ ಮಂಡ್ಯ ಮೂಲದ ಪಾದಯಾತ್ರಿ ಯುವಕ ಚಿರತೆ ದಾಳಿಗೆ ಬಲಿಯಾಗಿದ್ದ. ಈ ಘಟನೆ ಮಾಸುವ ಮುನ್ನವೇ ಕುಟುಂಬಸ್ಥರ ಜೊತೆ ಪಾದಯಾತ್ರೆ ಮೂಲಕ ತೆರಳುತ್ತಿದ್ದ ಬಾಲಕನ ಮೇಲೆ ಚಿರತೆ ದಾಳಿ ನಡೆಸಿತ್ತು. ಅದೃಷ್ಟವಶಾತ್ ತರಚಿದ ಗಾಯಗಳಾಗಿ ಬಾಲಕ ಬದುಕುಳಿದಿದ್ದ. ಇದಾದ ಬಳಿಕ ಇಂದು ಬೆಳಿಗ್ಗೆ ಬಾಲಕ ಚಿರತೆ ದಾಳಿಗೆ ಬಲಿಯಾಗಿರುವುದು ಭಕ್ತರು ಹಾಗೂ ಸಾರ್ವಜನಿಕರಲ್ಲಿ ಆತಂಕ ತಂದಿದೆ.

**ಆಕ್ರಂದನ :** ಮಗನನ್ನು ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಬಾಲಕನ ಶವವನ್ನು ಕಂಡ ಕೂಡಲೇ ಪೋಷಕರ ದುಃಖದ ಕಟ್ಟೆ ಹೊಡೆದಿತ್ತು. ದೇವರ ದರ್ಶನಕ್ಕೆ ಬಂದು ಈ ರೀತಿಯಾಗಿ ನಮ ಮಗನ ಅಂತ್ಯವಾಗಿದೆ, ಯಾವ ಶತ್ರುವಿಗೂ ಈ ಶೋಕ ಬಾರದೇ ಇರಲಿ ಎಂದು ಪೋಷಕರು ಅಳಲು ತೋಡಿಕೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕಾಡುಪ್ರಾಣಿಗಳು ನಾಡಿಗೆ ಬರುತ್ತಿರುವುದು ಅಥವಾ ಜನವಸತಿ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಹೆಚ್ಚಾಗಿದೆ. ಅದರಲ್ಲೂ ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳುವ ಭಕ್ತರ ಸುರಕ್ಷತೆ ಬಹಳ ಮುಖ್ಯವಾಗಿದೆ. ಅಂಥಹ ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಅಳವಡಿಕೆ, ಹೆಚ್ಚಿನ ಸಿಬ್ಬಂದಿ ನಿಯೋಜನೆ ಮತ್ತು ಭಕ್ತರಿಗೆ ಮುನ್ನೆಚ್ಚರಿಕೆ ನೀಡುವಂತಹ ಕೆಲಸಗಳು ತುರ್ತಾಗಿ ಆಗಬೇಕಿದೆ.

**ಪರಿಹಾರ :** ಮೃತಬಾಲಕನ ಕುಟುಂಬಕ್ಕೆ ಸರ್ಕಾರ, ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು. ಮಲೆ ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿ ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.ಮೃತ ಬಾಲಕನ ಪೋಷಕರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಮಲೆಮಹದೇಶ್ವರ ಭಕ್ತರು ಕಂಬನಿ ಮಿಡಿದಿದ್ದಾರೆ.

## ನಿರ್ವಹಣೆ ಕೊರತೆಯಿಂದ ಪಾಳುಬಿದ್ದ ನೀರಿನ ಘಟಕ

• ಉದಯವಾಹಿನಿ, ಮಳವಳ್ಳಿ

ಹಲಗೂರು, ಕಸಬಾ, ಕಿರುಗಾವಲು ಹೋಬಳಿ ಹಾಗೂ ಪಟ್ಟಣದಲ್ಲಿನ ಹಲವು ಕೊಳವೆಬಾವಿಗಳು ಬತ್ತಿ ಹೋಗಿದ್ದು, ಮೇ ಮೊದಲ ವಾರದಲ್ಲಿಯೇ ಗ್ರಾಮೀಣ ನಗರ ಪ್ರದೇಶಗಳಲ್ಲಿ ಜನರು ನೀರಿನ ಅಭಾವ ಎದುರಿಸುತ್ತಿದ್ದಾರೆ.

ಬೇಸಿಗೆಯ ಬೇಗೆ ನೆಲದ ನೆತ್ತಿಯನ್ನು ಸುಡುತ್ತಿದೆ. ಮತ್ತೊಂದೆಡೆ ನೆಲದಾಳದಲ್ಲಿರುವ ಜಲಮಟ್ಟಕ್ಕೂ ಧಗೆ ತರಿಸಿದೆ. ಮಳವಳ್ಳಿ ತಾಲ್ಲೂಕಿನ ಬೊಪ್ಪೇಗೌಡನಪುರ (ಬಿ.ಜಿ. ಪುರ) ಹೋಬಳಿ ಹೊರತುಪಡಿಸಿ ಪಟ್ಟಣ ಸೇರಿದಂತೆ ಉಳಿದೆಡೆ ಅಂತರ್ಜಲ ಗಣನೀಯವಾಗಿ ಕುಸಿಯುತ್ತಿದೆ. ಮತ್ತೊಂದೆಡೆ ಶುದ್ಧ ಕುಡಿಯುವ ನೀರಿನ ಘಟಕಗಳ ಅಸಮರ್ಪಕ ನಿರ್ವಹಣೆಯಿಂದ ಸಮಸ್ಯೆ ಎದುರಾಗಿದೆ.

ಪಟ್ಟಣದ ಕೆಲವು ವಾರ್ಡ್‌ಗಳು, ತಾಲ್ಲೂಕಿನ ಗುಂಡಾಪುರ, ಬಸವನಹಳ್ಳಿ, ಬಂಡೂರು, ತುರಗನೂರು, ನಡಕಲಪುರ, ಸಾಹಳ್ಳಿ, ಸುಜ್ಜಲೂರು, ಚಿಕ್ಕಎಲಚಗೆರೆ, ಕೃಷ್ಣೆಗೌಡನದೊಡ್ಡಿ, ನೆಲಮಾಕನಹಳ್ಳಿ ಸೇರಿದಂತೆ ಸುಮಾರು 40ಕ್ಕೂ ಅಧಿಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕುಂತೂರು, ಬಾಳೆಹೊನ್ನಿಗ, ಡಿ.ಕೆ. ಹಳ್ಳಿ, ಜೂಗನಹಳ್ಳಿ ಸೇರಿದಂತೆ ಹಲವೆಡೆ ಖಾಸಗಿ ಬೋರ್ ವೆಲ್‌ಗಳಿಂದ ನೀರು ಪಡೆಯಲಾಗುತ್ತಿದೆ.


ಉದಯವಾಹಿನಿ ಚಿತ್ರ

ಮುಂದಿನ ದಿನಗಳಲ್ಲಿ 30 ಗ್ರಾಮಗಳನ್ನು ಸಮಸ್ಯಾತ್ಮಕ ಎಂದು ಗುರುತಿಸಲಾಗಿದೆ ಎನ್ನುತ್ತಾರೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರ್ ಅಶೋಕ್.

ಗ್ರಾಮೀಣ ಪ್ರದೇಶದಲ್ಲಿ 100 ಶುದ್ಧ ಕುಡಿಯುವ ನೀರಿನ ಘಟಕಗಳಿವೆ. ಸಹಕಾರ ಸಂಘಗಳ ವ್ಯಾಪ್ತಿಯ 12 ಘಟಕಗಳಲ್ಲಿ 11 ಕಾರ್ಯನಿರ್ವಹಿಸುತ್ತಿವೆ.ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ 88 ಘಟಕಗಳಿದ್ದು, 53 ಘಟಕಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಲಾಗಿದೆ.

ಮಳವಳ್ಳಿ ಪಟ್ಟಣದಲ್ಲಿನ ಪುರಸಭೆಯ 93 ಬೋರ್ ವೆಲ್‌ಗಳಲ್ಲಿ 30ಕ್ಕೂ ಅಧಿಕ ಕೊಳವೆ ಬಾವಿಗಳಲ್ಲಿ ಇಳುವರಿ ಗಣನೀಯವಾಗಿ ಕುಸಿದಿದೆ. 9 ಬೋರ್ ವೆಲ್‌ಗಳು ಕೆಟ್ಟು ನಿಂತಿವೆ. 5ನೇ ವಾರ್ಡ್‌ನಲ್ಲಿ ಕೆಲ ಜನರು ಖಾಸಗಿ ಟ್ಯಾಂಕರ್‌ನಲ್ಲಿ ಹಣ ಕೊಟ್ಟು ನೀರು ಪಡೆಯುತ್ತಿದ್ದಾರೆ.

## ಶಿಡ್ಲಘಟ್ಟ ನೀರು, ಮೇವು ಸಮಸ್ಯೆ : ಮುನ್ನೆಚ್ಚರಿಕೆಗೆ ಸೂಚನೆ

• ಉದಯವಾಹಿನಿ, ಶಿಡ್ಲಘಟ್ಟ

ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದಾಗ ಬಗೆಹರಿಸುವುದರ ಬದಲಿಗೆ ಸಮಸ್ಯೆಯೆ ಎದುರಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ನಿರ್ಮಲಾ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಂಗಮಕೋಟೆ ಹೋಬಳಿಯಲ್ಲಿನ ಕುಡಿಯುವ ನೀರು, ರಾಸುಗಳಿಗೆ ಮೇವಿನ ಲಭ್ಯತೆ ಹಾಗೂ ಕೃಷಿ ಚಟುವಟಿಕೆಗಳ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಇದೀಗ ಬೇಸಿಗೆಯ ಬಿಸಿಲ ದಿನಗಳು ಕೇವಲ ಜನ ಸಾಮಾನ್ಯರಿಗೆ ಕುಡಿಯುವ ನೀರಿನ ಸಮಸ್ಯೆ ಮಾತ್ರ ಎದುರಾಗುವುದಿಲ್ಲ. ಬದಲಿಗೆ ರಾಸುಗಳಿಗೆ ಮೇವಿನ ಕೊರತೆಯೂ ಎದುರಾಗಬಹುದು. ಅದರಿಂದ ಬೇರೆ ಬೇರೆ ರೂಪದ ನಾನಾ ಸಮಸ್ಯೆಗಳು ಎದುರಾಗಲಿವೆ ಎಂದರು. ಸಂಬಂಧಿಸಿದ ನೋಡಲ್ ಅಧಿಕಾರಿಗಳು ಕುಡಿಯುವ ನೀರು ಹಾಗೂ ರಾಸುಗಳಿಗೆ ಮೇವಿನ ಕೊರತೆ ಆಗದಂತೆ ಮುಂಜಾಗ್ರತೆಯ ಕ್ರಮ ವಹಿಸಬೇಕು. ಜತೆಗೆ ಕೃಷಿ ಚಟುವಟಿಕೆಗಳನ್ನು ಕೂಡ ಗಮನಿಸಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಎಲ್ಲೋ ಕುಳಿತು ವರದಿ ನೀಡುವುದರಿಂದ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಹಾಗಾಗಿ ಸ್ಥಳ ಭೇಟಿ ಪರಿಶೀಲನೆಯಿಂದ ಮಾತ್ರ ಸಮಸ್ಯೆಯ ವಾಸ್ತವ ಸ್ಥಿತಿ ತಿಳಿಯಲಿದೆಯಲ್ಲದೆ ಅದರ ಪರಿಹಾರವೂ ಸಾಧ್ಯವಾಗಲಿದೆ. ಕಾಲ ಕಾಲಕ್ಕೆ ಸಮಸ್ಯೆಯ ವರದಿ ಮತ್ತು ಅದರ ಪರಿಹಾರಕ್ಕೆ ಕೈಗೊಂಡ ಕ್ರಮಗಳ ವರದಿಯನ್ನು ನೀಡುವಂತೆ ತಾಕೀತು ಮಾಡಿದರು. ಜಂಗಮಕೋಟೆ ಹೋಬಳಿಗೆ ನೇಮಕ ಮಾಡಿರುವ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ನೋಡಲ್ ಅಧಿಕಾರಿಗಳು ಸಂಬಂಧಿಸಿದ ಹೋಬಳಿಗೆ ವಾರಕ್ಕೆ ಕನಿಷ್ಠ ಒಂದು ದಿನ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ಮಾಡಬೇಕು. ತಾವು ಭೇಟಿ ನೀಡಿದ ಪರಿಶೀಲನಾ ಅವಧಿಯಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಕಂಡುಬಂದಲ್ಲಿ ತಾಲ್ಲೂಕಿನ ಟಾಸ್ಕ್‌ಫೋರ್ಸ್ ಸಮಿತಿಗೆ ಮಾಹಿತಿ ನೀಡಿ ಸಮನ್ವಯ ಸಾಧಿಸಿ ಆ ಸಮಸ್ಯೆ ಪರಿಹರಿಸಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಎದುರಾದರೆ ಸ್ಥಳೀಯ ಸಂಸ್ಥೆಗಳು ಖಾಸಗಿ ಕೊಳವೆಬಾವಿ ಮತ್ತು ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಬೇಕು. ಕೊಳವೆ ಬಾವಿಗಳು ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲನೆ ಮಾಡಬೇಕು. ದುರಸ್ತಿಯಾಗಿದ್ದರೆ ಅದರ ರಿಪೇರಿ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ ಪರಿಶೀಲನೆ, ನೀರಿನ ಗುಣಮಟ್ಟವನ್ನು ಪರಿಶೀಲನೆ ಮಾಡಿ ಕುಡಿಯುವ ನೀರು ಶುದ್ಧವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದರು. ರಾಸುಗಳ ಮೇವಿನ ಸ್ಥಿತಿಗತಿಯ ಬಗ್ಗೆ ಪರಿಶೀಲಿಸಿ ಮೇವಿನ ಕೊರತೆ ಕಂಡುಬಂದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ವರದಿ ಸಲ್ಲಿಸಿ ಅವರ ಸೂಚನೆಯಂತೆ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

## ಅಧಿಕಾರಿಗಳ ಕಿರುಕುಳ ತಪ್ಪಿಸಲು ಮನವಿ

• ಉದಯವಾಹಿನಿ, ಹಾರೋಹಳ್ಳಿ

ಹಾರೋಹಳ್ಳಿ ಹೋಬಳಿಯ ಗಬ್ಬಾಡಿ ಕಾವಲ್ ದಾಖೆ ಗ್ರಾಮದ ಸರ್ವೆ ನಂ.1ರಿಂದ 39ರವರೆಗಿನ ಭೂ ಹಿಡುವಳಿ ಜಮೀನುಗಳಿಗೆ ನಿರಾಪೇಕ್ಷಣಾ ಪತ್ರ ನೀಡುವಂತೆ ಅರಣ್ಯ ಇಲಾಖೆಗೆ ಗಬ್ಬಾಡಿ ಕಾವಲ್ ಭೂ-ಹಿತ ರಕ್ಷಣಾ ಹೋರಾಟ ಸಮಿತಿ ಸದಸ್ಯರು ಮನವಿ ಮಾಡಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಮನವಿ ಸಲ್ಲಿಸಿದ ಸಮಿತಿ ಸದಸ್ಯರು, 1957ರಲ್ಲಿ ಆದಿ ಕರ್ನಾಟಕ ಜನಾಂಗ 60ಕ್ಕೂ ಹೆಚ್ಚು ಜನರಿಗೆ ತಲಾ ಎರಡು ಎಕರೆಯಂತೆ ಕಂದಾಯ ಇಲಾಖೆ ಹಂಚಿಕೆ ಮಾಡಿದೆ. ಎಲ್ಲಾ ರೀತಿಯ ದಾಖಲಾತಿಗಳು ಸಹ ರೈತರ ಬಳಿ ಇವೆ. ಹೀಗಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ದೂರಿದರು.

ಮೈಸೂರು ಸರ್ಕಾರ ದಲಿತರಿಗೆ, ಜೀತ ಮುಕ್ತರಿಗೆ ಸ್ವತಂತ್ರವಾಗಿ ಬದುಕಲು ಜಮೀನು ಮಂಜೂರು ಸಂಬಂಧ ಖಂಡಿಕೆ ಒಂದರಲ್ಲಿ ಸೂಚಿಸಿರುವ ಬೆಂಗಳೂರು ಜಿಲ್ಲೆಯ ಒಂಬತ್ತು ಮೀಸಲು ಕಾವಲುಗಳಲ್ಲಿ ಗಬ್ಬಾಡಿ ಕಾವಲ್ ಹೊರ ತೆಗೆದು ಅಧಿಸೂಚನೆ ನೀಡಿರುತ್ತದೆ. ಹೀಗಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ರೈತರನ್ನು ಒಕ್ಕಲೆಬ್ಬಿಸಲು ನೋಡುತ್ತಿದ್ದಾರೆ. ಅಧಿಕಾರಿಗಳ ಕಿರುಕುಳ ತಪ್ಪಿಸಿ ಎಂದು ರಾಜ್ಯ ಸಮತಾ ಸೈನಿಕ ದಳದ ಯುವ ಘಟಕದ ಅಧ್ಯಕ್ಷ ಜಿ.ಗೋವಿಂದಯ್ಯ ಮನವಿ ಮಾಡಿದರು.

## ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ನವೀಕರಣ: ಅನುದಾನಕ್ಕೆ ಸಂಸದ ಮನವಿ

• ಉದಯವಾಹಿನಿ, ಮೈಸೂರು

ನಗರದ ಪಾರಂಪರಿಕ ಹೆಗ್ಗುರುತುಗಳಾದ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡದ ಸಂರಕ್ಷಣೆ ಹಾಗೂ ನವೀಕರಣಕ್ಕೆ ಶೀಘ್ರದಲ್ಲೇ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಕೋರಿದ್ದಾರೆ.



ಈ ಬಗ್ಗೆ ಪತ್ರ ಬರೆದಿದ್ದೇನೆ. ಈ ಕಟ್ಟಡಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮೇ 4ರಂದು ನೀಡಿರುವ ತೀರ್ಪು ಅತ್ಯಂತ ಮಹತ್ವದ್ದಾಗಿದೆ. ಈ ಕಟ್ಟಡಗಳನ್ನು ಕೆಡವಿ ಪುನರ್ ನಿರ್ಮಾಣದ ಪ್ರಸ್ತಾವವನ್ನು ನ್ಯಾಯಾಲಯ ತಿರಸ್ಕರಿಸಿದೆ. 19ನೇ ಶತಮಾನದ ಈ ಐತಿಹಾಸಿಕ ಕಟ್ಟಡ ಸಂರಕ್ಷಿಸಿ, ನವೀಕರಿಸುವಂತೆ ಆದೇಶಿಸಿದೆ ಎಂದು ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ' ಎಂದು ತಿಳಿಸಿದ್ದಾರೆ.

'ಐಐಟಿ ರೂರ್ಕಿ ಸಲ್ಲಿಸಿದ ವಿವರವಾದ ತಾಂತ್ರಿಕ ಅಧ್ಯಯನ ವರದಿ ಆಧರಿಸಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಶೇ 70ರಷ್ಟು ದುರಸ್ತಿ ಮಾಡಬಹುದಾಗಿದೆ. ಹಾಲಿ ಇರುವ ಅಡಿಪಾಯ ಸಂರಕ್ಷಣೆ ಮತ್ತು ನವೀಕರಣ ಸಾಧ್ಯವಾಗಲಿದೆ' ಎಂದು ಯದುವೀರ್ ವಿವರಿಸಿದ್ದಾರೆ.

'ನಾಗರಿಕ ವಾಸ್ತುಶಿಲ್ಪ ಸಮೂಹ'ಗಳು ಮೈಸೂರಿನ ಅವಿಭಾಜ್ಯ ಅಂಗವಾಗಿದೆ. ಇಲ್ಲಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸೋದ್ಯಮ ಸಂರಕ್ಷಿಸಲು ಬದ್ಧನಾಗಿದ್ದೇನೆ. ನ್ಯಾಯಾಂಗ ಆದೇಶ ಪಾಲಿಸುವುದು ನಮ್ಮ ಕರ್ತವ್ಯ.

ಈ ನಿಟ್ಟಿನಲ್ಲಿ ಐಐಟಿ ರೂರ್ಕಿ ಮತ್ತು ತಜ್ಞರ ಸಮಿತಿ ನೀಡಿರುವ ಶಿಫಾರಸಿನ ಅನ್ವಯ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ನವೀಕರಣಕ್ಕೆ ಅನುದಾನ ಬಿಡುಗಡೆ ಮಾಡಬೇಕು ಎಂದು ಕೋರಲಾಗಿದೆ ಎಂದು ಪ್ರಕಟಣೆ ನೀಡಿದ್ದಾರೆ.

ಮೈಸೂರು ಮಹಾನಗರಪಾಲಿಕೆ ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಈ ಯೋಜನೆಯನ್ನು ತಕ್ಷಣವೇ ಪ್ರಾರಂಭಿಸುವಂತೆ ಸೂಚಿಸಬೇಕು. ರಾಜ್ಯ ಸರ್ಕಾರದಿಂದ ಹಂಚಿಕೆಯಾದ ಹಣವನ್ನು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮಾತ್ರ ಬಳಸಲಾಗುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು ಎಂದಿದ್ದಾರೆ.

'ದೇವರಾಜ ಮಾರುಕಟ್ಟೆಯ ನವೀಕರಣಕ್ಕೆ 95 ಕೋಟಿ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಕ್ಕೆ 35 ಕೋಟಿಯನ್ನು 2024-25ರ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಇವು ಕೇವಲ ಕಟ್ಟಡಗಳಲ್ಲ, ಮೈಸೂರಿನ ಜೀವಂತ ಸಾಂಸ್ಕೃತಿಕ ಮತ್ತು ವಾಣಿಜ್ಯ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಮೈಸೂರಿನವರೇ ಆದ ಮುಖ್ಯಮಂತ್ರಿಯವರು ಇವುಗಳ ಸಂರಕ್ಷಣೆ ಮತ್ತು ನವೀಕರಣಕ್ಕೆ ಆದ್ಯತೆ ನೀಡಬೇಕು. ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವ ಭರವಸೆ ಇದೆ' ಎಂದು ತಿಳಿಸಿದ್ದಾರೆ.


# ಅಭಿವೃದ್ಧಿಗೆ ಮಾಜಿ ಶಾಸಕ ಶಿವಶಂಕರ ರೆಡ್ಡಿ ಅಡ್ಡಗಾಲು: ಶಾಸಕ

## ನಮ್ಮ ಅಭಿವೃದ್ಧಿ ಬಗ್ಗೆ ಅಪಪ್ರಚಾರ ಮಾಡುವುದೇ ಇವರ ಮನೆ ದೇವರಾಗಿದೆ, ಬಡ ನಿವೇಶನ ರಹಿತರಿಗೆ ನಿವೇಶನ ಮಾಡಲು ಜಾಗ ಗುರುತು

• ಉದಯವಾಹಿನಿ, ಗೌರಿಬಿದನೂರು

ತಾಲ್ಲೂಕಿನ ಜನರಿಗೆ ಮೂಲಸೌಕರ್ಯ ನೀಡಲು ಅಭಿವೃದ್ಧಿ ಕಾರ್ಯ ಮಾಡುತ್ತಿದ್ದರೆ, ಮಾಜಿ ಶಾಸಕ ಎನ್.ಎಚ್.ಶಿವಶಂಕರ ರೆಡ್ಡಿ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸಿ ತಾಲ್ಲೂಕಿನ ಜನರ ಮೇಲೆ ದ್ವೇಷ ಸಾಧಿಸುತ್ತಿದ್ದಾರೆ ಎಂದು ಶಾಸಕ ಕೆ.ಎಚ್.ಪುಟ್ಟಸ್ವಾಮಿ ಗೌಡ ಆರೋಪಿಸಿದರು. ಶಾಸಕರ ಗೃಹ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, 'ಮಾಜಿ ಶಾಸಕ ಶಿವಶಂಕರ ರೆಡ್ಡಿ ತಮ್ಮ 25 ವರ್ಷಗಳ ರಾಜಕೀಯ ಅನುಭವವನ್ನು ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸಲು, ನನ್ನ, ಕೆಎಚ್‌ಪಿ ಕಾರ್ಯಕರ್ತರ ತೇಜೋವಧೆ ಮಾಡಿ ಸದಾ ಸುದ್ದಿಯಲ್ಲಿರಲು ಬಳಸುತ್ತಿದ್ದಾರೆ. ನಮ್ಮ ಅಭಿವೃದ್ಧಿ ಬಗ್ಗೆ ಅಪಪ್ರಚಾರ ಮಾಡುವುದೇ ಇವರ ಮನೆ ದೇವರಾಗಿದೆ' ಎಂದರು.

ತಾಲ್ಲೂಕಿನ ಬಡ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು 173 ಎಕರೆ ಜಾಗ ಗುರುತಿಸಲಾಗಿದೆ. 4000ಕ್ಕೂ ಹೆಚ್ಚು ನಿವೇಶನ ಮಾಡಲು ಕಳೆದ 6 ತಿಂಗಳಿನಿಂದ ಕೆಲಸ ಮಾಡಿ, ತಹಶೀಲ್ದಾರ್, ಇಒ ಮೂಲಕ ಜಿಲ್ಲಾಧಿಕಾರಿಯಿಂದ ಅನುಮೋದನೆ ಪಡೆದು ನಿವೇಶನ ರಹಿತರಿಗೆ ಜಾತಿ, ಧರ್ಮ, ರಾಜಕೀಯ ರಹಿತವಾಗಿ ನಿವೇಶನ ಹಂಚಿಕೆ ಮಾಡುವುದು ಮತ್ತು ಈ ಬಗ್ಗೆ ಗ್ರಾಮ ಸಭೆಗಳಲ್ಲಿ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು ಶಾಸಕನಾಗಿ ನನ್ನ ಕರ್ತವ್ಯ ಎಂದರು.


ಉದಯವಾಹಿನಿ ಚಿತ್ರ

ಹತಾಶೆ ಮನೋಭಾವದಿಂದ ನನ್ನ ಶಾಸಕ ಸ್ಥಾನ ಕಳೆಯಲು ಹೈ ಕೋರ್ಟ್‌ನಲ್ಲಿ ದೂರು ನೀಡಿದ್ದರು. ನಾನು ಮೂರು ವರ್ಷ ನ್ಯಾಯಾಲಯಕ್ಕೆ ಅಲೆದೆ. ನ್ಯಾಯಾಲಯ ಸುಳ್ಳು ಆರೋಪ ಎಂದು ವಜಾ ಮಾಡಿತು. ಈಗ ಇವರ ಹಿಂಬಾಲಕರಿಂದ ರಾತ್ರೋ ರಾತ್ರಿ ರಸ್ತೆ ಕಿತ್ತು ಹಾಕಿಸಿ ವಿಡಿಯೋ ಮಾಡಿಸುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿದೆ, ನಾನು ಕಾಂಗ್ರೆಸ್ ಹಿರಿಯ ನಾಯಕ ಎಂದು ಅಧಿಕಾರಿಗಳಿಗೆ ಬೆದರಿಕೆ ಹಾಕುವುದು ಇವರ ಕಸುಬಾಗಿದೆ' ಎಂದರು.

**ಮಾಜಿ ಶಾಸಕ ನನ್ನ ಜೊತೆ ರೌಡಿ ಶೀಟರ್‌ಗಳಿದ್ದಾರೆ ಎಂದು ಆರೋಪಿಸುತ್ತಾರೆ. ಇವರ ಜೊತೆ ಬೇಕಾದಷ್ಟು ರೌಡಿ ಶೀಟರ್‌ಗಳಿದ್ದಾರೆ. ಇವರ ಅವಧಿಯಲ್ಲಿ 169 ಜನರನ್ನು ರೌಡಿ ಶೀಟರ್ ಮಾಡಿ ಎಲ್ಲರನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದರು. 70 ಅಮಾಯಕರು ಇಂದು ಖುಲಾಸೆಯಾಗಿದ್ದಾರೆ. ರೌಡಿ ಶೀಟರ್‌ಗಳಿಗೆ ಬುದ್ದಿವಾದ ಹೇಳಿ, ಎಚ್ಚರಿಕೆ ನೀಡಿ ಅವರನ್ನು ಬದಲಾಯಿಸಿ ಕಾನೂನು ಸುವ್ಯವಸ್ಥೆ ಸರಿಪಡಿಸಿದ್ದೇನೆ.**

**- ಕೆ.ಎಚ್.ಪುಟ್ಟಸ್ವಾಮಿ ಗೌಡ, ಶಾಸಕ**

'ತಾಲ್ಲೂಕಿನ ಆಸ್ಪತ್ರೆ, ಕಂದಾಯ ಇಲಾಖೆ, ತಾಲ್ಲೂಕು ಪಂಚಾಯಿತಿ ಸರಿಯಿಲ್ಲ ಎಂದು ಆರೋಪಿಸಿ ಗಧಾಪ್ರಹಾರ ಮಾಡುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಆರೋಗ್ಯ ರಕ್ಷಣೆ ಸಮಿತಿ ಮಾಡಲು ಬಿಟ್ಟಿಲ್ಲ. ಕಾಂಗ್ರೆಸ್ ಹಿರಿಯ ನಾಯಕ ಎಂದು ಹೇಳಿಕೊಂಡು ಎಲ್ಲದಕ್ಕೂ ಅಡ್ಡಿ ಪಡಿಸುತ್ತಿದ್ದಾರೆ ಎಂದರು. ಎತ್ತಿನಹೊಳೆ ನೀರು ತರದೇ ವಾಟದಹೊಸಹಳ್ಳಿ ಕೆರೆಯಿಂದ ನಗರಕ್ಕೆ ನೀರು ಹರಿಸುವುದಿಲ್ಲ. ಬೇರೆಯವರು ಹರಿಸಲು ಬಿಡುವುದಿಲ್ಲ. ಈ ಯೋಜನೆಗಾಗಿ ಮತ್ತೆ 10 ಕೋಟಿ ಮಂಜೂರು ಮಾಡಿಸಿದ್ದೇನೆ. ರೈತರು ಮನವಿ ನೀಡಿದರೆ ಅವರೊಂದಿಗೆ ಚರ್ಚಿಸಲು ಸಿದ್ಧ ಎಂದರು. ಚಿಮುಲ್ ನಿರ್ದೇಶಕ ಕಾಂತರಾಜ್ ಮಾತನಾಡಿ, 'ಮಾಜಿ ಶಾಸಕರು ಅವರ ಹಿಂಬಾಲಕರಿಗೆ ಜಮೀನು ಮಾಡಿ ಕೊಟ್ಟಿದ್ದಾರೆ. ಹಳ್ಳಿ ಹಳ್ಳಿಗೂ ಹೋಗಿ ಸಭೆ ನಡೆಸಿ ಹಕ್ಕು ಪತ್ರಗಳನ್ನು ನೀಡಿದ್ದಾರೆ. ಇದರಲ್ಲಿ ಜನರಿಗೆ ಮೋಸವಾಗಿದೆ' ಎಂದು ಆರೋಪಿಸಿದರು.

### ಗಲಾಟೆ ಮಾಡಲು ಪ್ರೇರಣೆ

**ಮಾಜಿ ಶಾಸಕರು ಗ್ರಾಮ ಸಭೆಗಳಲ್ಲಿ ಕಾರ್ಯಕರ್ತರು ಪಾಲ್ಗೊಳ್ಳಿ ಎಂದು ಪರೋಕ್ಷವಾಗಿ ಗಲಾಟೆ ಮಾಡಲು ಪ್ರೇರೇಪಿಸುತ್ತಿದ್ದಾರೆ. ಇವರ ಸಂಕುಚಿತ ಮನೋಭಾವದಿಂದ ಮಾಡುತ್ತಿರುವ ಪುಂಡಾಟಿಕೆ ಕೆಲಸಗಳನ್ನು ಗಣನೆಗೆ ತೆಗೆದುಕೊಳ್ಳದೆ, ಗ್ರಾಮಸಭೆಗಳು ನಡೆಸಲು ಜಿಲ್ಲಾಧಿಕಾರಿ ಮತ್ತು ಸಿಇಒಗೆ ಮನವರಿಕೆ ಮಾಡುತ್ತೇನೆ ಎಂದರು.**

## ಮಿನಿ ನ್ಯೂಸ್

### ಅರಣ್ಯ ಇಲಾಖೆ ಅಧಿಕಾರಿಗಳ ಕಿರುಕುಳ ತಪ್ಪಿಸಲು ಮನವಿ

• ಉದಯವಾಹಿನಿ, ಹಾರೋಹಳ್ಳಿ

ಹಾರೋಹಳ್ಳಿ ಹೋಬಳಿಯ ಗಬ್ಬಾಡಿ ಕಾವಲ್ ದಾಖೆ ಗ್ರಾಮದ ಸರ್ವೆ ನಂ.1ರಿಂದ 39ರ ವರೆಗಿನ ಭೂ ಹಿಡುವಳಿ ಜಮೀನುಗಳಿಗೆ ನಿರಾಪೇಕ್ಷಣಾ ಪತ್ರ ನೀಡುವಂತೆ ಅರಣ್ಯ ಇಲಾಖೆಗೆ ಗಬ್ಬಾಡಿ ಕಾವಲ್ ಭೂ-ಹಿತ ರಕ್ಷಣಾ ಹೋರಾಟ ಸಮಿತಿ ಸದಸ್ಯರು ಮನವಿ ಮಾಡಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಮನವಿ ಸಲ್ಲಿಸಿದ ಸಮಿತಿ ಸದಸ್ಯರು, 1957ರಲ್ಲಿ ಆದಿ ಕರ್ನಾಟಕ ಜನಾಂಗ 60ಕ್ಕೂ ಹೆಚ್ಚು ಜನರಿಗೆ ತಲಾ ಎರಡು ಎಕರೆಯಂತೆ ಕಂದಾಯ ಇಲಾಖೆ ಹಂಚಿಕೆ ಮಾಡಿದೆ. ಎಲ್ಲಾ ರೀತಿಯ ದಾಖಲಾತಿಗಳು ಸಹ ರೈತರ ಬಳಿ ಇವೆ. ಹೀಗಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ದೂರಿದರು. ಮೈಸೂರು ಸರ್ಕಾರ ದಲಿತರಿಗೆ, ಜೀತ ಮುಕ್ತರಿಗೆ ಸ್ವತಂತ್ರವಾಗಿ ಬದುಕಲು ಜಮೀನು ಮಂಜೂರು ಸಂಬಂಧ ಖಂಡಿಕೆ ಒಂದರಲ್ಲಿ ಸೂಚಿಸಿರುವ ಬೆಂಗಳೂರು ಜಿಲ್ಲೆಯ ಒಂಬತ್ತು ಮೀಸಲು ಕಾವಲುಗಳಲ್ಲಿ ಗಬ್ಬಾಡಿ ಕಾವಲ್ ಹೊರ ತೆಗೆದು ಅಧಿಸೂಚನೆ ನೀಡಿರುತ್ತದೆ.

ಹೀಗಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ರೈತರನ್ನು ಒಕ್ಕಲೆಬ್ಬಿಸಲು ನೋಡುತ್ತಿದ್ದಾರೆ. ಅಧಿಕಾರಿಗಳ ಕಿರುಕುಳ ತಪ್ಪಿಸಿ ಎಂದು ರಾಜ್ಯ ಸಮತಾ ಸೈನಿಕ ದಳದ ಯುವ ಘಟಕದ ಅಧ್ಯಕ್ಷ ಜಿ.ಗೋವಿಂದಯ್ಯ ಮನವಿ ಮಾಡಿದರು.

### ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ: ಶಾಸಕ ದರ್ಶನ್ ಪುಟ್ಟಣ್ಣಯ್ಯ

• ಉದಯವಾಹಿನಿ, ಪಾಂಡವಪುರ

ಕೆ.ಆರ್.ಎಸ್ ಅಣೆಕಟ್ಟೆಯಲ್ಲಿ ಇರುವ ನೀರಿನ ಅಗತ್ಯತೆ ಮೇರೆಗೆ ಮುಂದಿನ ದಿನಗಳಲ್ಲಿ ಕುಡಿಯುವ ನೀರು ಮತ್ತು ಕೃಷಿಗೆ ಅಗತ್ಯ ಕ್ರಮವಹಿಸಲಾಗುವುದು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು. ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 1.30ಕೋಟಿ ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ಸಲ್ಲಿಸಿ ಅವರು ಮಾತನಾಡಿದರು. ಈಗಾಗಲೇ ನಡೆದ ಐಸಿಸಿ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದೆ. ಕೆಆರ್‌ಎಸ್ ಹಾಗೂ ಹೇಮಾವತಿ ಅಣೆಕಟ್ಟೆಯಲ್ಲಿರುವ ನೀರಿನ ಮಾಹಿತಿ ಪಡೆಯಲಾಗಿದೆ. ಸದ್ಯದಲ್ಲಿಯೇ ಮಳೆಯಾಗುವ ಮುನ್ಸೂಚನೆ ಇದೆ. ಮಳೆಯಾದರೆ, ತಮಿಳುನಾಡಿನ ನೀರಿನ ಸಮಸ್ಯೆ ಸೇರಿದಂತೆ ಯಾವ ಸಮಸ್ಯೆಯೂ ಉದ್ಭವಿಸುವುದಿಲ್ಲ. ಇಲ್ಲವಾದರೆ ಕುಡಿಯುವ ನೀರಿಗೆ ಆದ್ಯತೆ ನೀಡಲಾಗುವುದು ಎಂದರು. ಮೇಲುಕೋಟೆ ವಿಧಾನ ಕ್ಷೇತ್ರದಲ್ಲಿ ಕೆಲವೆಡೆ ಮಾತ್ರ ನೀರಿನ ಸಮಸ್ಯೆ ಇದ್ದು, ಈ ಪರಿಹಾರಕ್ಕಾಗಿ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಲು ಸೂಚಿಸಲಾಗಿದೆ. ಕೆಲವು ಗ್ರಾಮಗಳಲ್ಲಿ ಕೆಟ್ಟಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ರಿಪೇರಿ ಮಾಡಲು ಸೂಚಿಸಲಾಗಿದೆ. ಅಗತ್ಯ ಬಿದ್ದರೆ ಬೋರ್‌ವೆಲ್‌ಗಳನ್ನು ಕೊರೆಸಿ ಕ್ರಮವಹಿಸಲಾಗುವುದು ಎಂದರು.

**ಅನುದಾನ ಬಳಕೆ:** ಮೇಲುಕೋಟೆ ವೈರಮುಡಿ ಉತ್ಸವದ ಹೆಚ್ಚುವರಿ ಅನುದಾನ ಹಾಗೂ ಪ್ರವಾಹ ಪೀಡಿತ ಹೆಚ್ಚುವರಿ ಅನುದಾನಗಳನ್ನು ಬಳಸಿ ಗ್ರಾಮೀಣ ಪ್ರದೇಶದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದರು.

### ಗಾಂಜಾ ಸೇವನೆ ಪ್ರಕರಣದ ಆರೋಪಿ ಆತ್ಮಹತ್ಯೆ

• ಉದಯವಾಹಿನಿ, ಮೈಸೂರು

ಗಾಂಜಾ ಸೇವನೆ ಪ್ರಕರಣದ ಆರೋಪಿಯಾಗಿದ್ದ ರಾಮಕೃಷ್ಣ ನಗರದ ನಿವಾಸಿ ಎಂ.ಮಧು (22) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದ ಅವರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ. ಪೋಷಕರು ದೂರು ನೀಡಿದ್ದು, ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಶವ ಪರೀಕ್ಷೆ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕುವೆಂಪುನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

**ಪ್ರಕರಣವೇನು:** ಮೇ 6ರ ರಾತ್ರಿ 9 ಗಂಟೆಗೆ ರಾಮಕೃಷ್ಣನಗರದ ಕೆ ಬ್ಲಾಕ್ ಆಲದಮರದ ಬಳಿ ಮಧು ಗಾಂಜಾ ಸೇವಿಸಿ ಸಿಕ್ಕಿ ಬಿದ್ದಿದ್ದ. ಗಾಂಜಾ ಸಿಗರೇಟಿನಲ್ಲಿ ಹಾಕಿ ಸೇವಿಸುರುವುದಾಗಿ ಒಪ್ಪಿಕೊಂಡಿದ್ದ. ವೈದ್ಯಕೀಯ ತಪಾಸಣೆಯಲ್ಲೂ ಸೇವನೆ ಮಾಡಿರುವುದು ದೃಢಪಟ್ಟಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

### ಪೊಲೀಸರ ಮೇಲೆ ಹಲ್ಲೆ ಮಾಡಿದ ಯುವಕನ ಬಂಧನ

• ಉದಯವಾಹಿನಿ, ಪಾವಗಡ

ಚಿಕ್ಕಬಳ್ಳಾಪುರ ನಂದಿಗಿರಿಧಾಮ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿ ತಲೆಮರೆಸಿಕೊಂಡಿದ್ದ ಆರೋಪದಲ್ಲಿ ಪಟ್ಟಣದ ಆದರ್ಶ ನಗರದ ಯಶ್ವಂತ್ (21)ನನ್ನು ಪೊಲೀಸರು ಬಂಧಿಸಿದ್ದಾರೆ ಚಿಕ್ಕಬಳ್ಳಾಪುರ ನಾಗಾರ್ಜುನ ಕಾಲೇಜು ಬಳಿ ದ್ವಿಚಕ್ರ ವಾಹನಕ್ಕೆ ಹೆಚ್ಚು ಶಬ್ದ ಬರುವ ಸೈಲೆನ್ಸರ್ ಅನ್ನು ಅಳವಡಿಸಿಕೊಂಡು ಶಬ್ದ ಮಾಡುತ್ತಿದ್ದದ್ದನ್ನು ಪ್ರಶ್ನಿಸಿದ್ದಕ್ಕೆ ನಂದಿಗಿರಿಧಾಮ ಪೊಲೀಸ್ ಠಾಣೆಯ ಎಎಸ್‌ಐ ಗಂಗರಾಜು, ಪಿಸಿ ಗಂಗರಾಜು ಅವರ ಮೇಲೆ 13ಕ್ಕೂ ಹೆಚ್ಚು ಮಂದಿ ಯುವಕರ ತಂಡ ಹಲ್ಲೆ ನಡೆಸಿ ಪರಾರಿಯಾಗಿತ್ತು. ಆರೋಪಿ ಪಟ್ಟಣದಲ್ಲಿ ಇರುವ ಬಗ್ಗೆ ಮಾಹಿತಿ ತಿಳಿದ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿ, ಚಿಕ್ಕಬಳ್ಳಾಪುರ ಪೊಲೀಸರ ವಶಕ್ಕೆ ನೀಡಿದ್ದಾರೆ.

### ಮಾಗಡಿ: ಕೆ.ಆರ್.ರಂಜಿತ್ ನೂತನ ತಹಶೀಲ್ದಾರ್

• ಉದಯವಾಹಿನಿ, ಮಾಗಡಿ

ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಗ್ರೇಡ್-1 ತಹಶೀಲ್ದಾರ್ ಆಗಿ ರಂಜಿತ್ ಕೆ.ಆರ್. ಅಧಿಕಾರ ವಹಿಸಿಕೊಂಡಿದ್ದಾರೆ. ಮಾಗಡಿ ತಹಶೀಲ್ದಾರ್ ಶರತ್ ಕುಮಾರ್ ಡಿ.ಪಿ. ಅವರಿಗೆ ಮುಂದಿನ ಸ್ಥಳ ನಿಯುಕ್ತಿಗಾಗಿ ಬೆಂಗಳೂರಿನ ಕಂದಾಯ ಇಲಾಖೆಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಿ ಸರ್ಕಾರ ಮೇ 6ರಂದು ಆದೇಶ ಹೊರಡಿಸಿದೆ.



ಈ ಹಿಂದೆ ರಾಜ್ಯ ಖಾದಿ, ಗ್ರಾಮೋದ್ಯೋಗ ಮಂಡಳಿಯಲ್ಲಿ ವಿಶೇಷ ತಹಶೀಲ್ದಾರ್ ಗ್ರೇಡ್-2 ಆಗಿದ್ದ ರಂಜಿತ್, ಕೊರಟಗೆರೆ ಮತ್ತು ತುಮಕೂರಿನಲ್ಲಿ ಚುನಾವಣಾ ತರಬೇತಿ ಹಾಗೂ ಬೆಂಗಳೂರು ವಿಭಾಗದ ವಿಶೇಷ ತಹಶೀಲ್ದಾರ್ ಆಗಿದ್ದರು. ತಾಲ್ಲೂಕಿನ ಸಮಸ್ಯೆ ಅರ್ಥಮಾಡಿಕೊಳ್ಳಲು ಸಮಯ ಬೇಕು ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಕೆಲವು ಗಂಭೀರ ತೊಂದರೆಗಳನ್ನು ಎದುರಿಸಲು ಸಾಧ್ಯತೆಯಿರುವುದರಿಂದ ನಿಮ್ಮನ್ನು ನಿಯಂತ್ರಿಸಿಕೊಳ್ಳಿ. ವಿಶೇಷವಾಗಿ ಸಣ್ಣ ಹುಚ್ಚಲ್ಲದೇ ಬೇರೇನೂ ಅಲ್ಲದ ನಿಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಿ.

**ವೃಷಭ** ನಿಮ್ಮ ಭರವಸೆ ಸಮೃದ್ಧ ಸೂಕ್ಷ್ಮ ಪರಿಮಳಯುಕ್ತ ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿ ಇರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ.

**ಮಿಥುನ** ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ವ್ಯಾಪಾರವನ್ನು ಬಲಪಡಿಸಲು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು. ಇದಕ್ಕಾಗಿ ನಿಮ್ಮ ಆಪ್ತ ನಿಮಗೆ ಆರ್ಥಿಕವಾಗಿ ಸಹಾಯ ಮಾಡಬಹುದು.

**ಕರ್ಕಾಟಕ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಕೆಲವು ದುಃಖದ ಸಮಯದಲ್ಲಿ ನೀವು ಸಂಗ್ರಹಿಸುವ ಹಣ ಮಾತ್ರ ನಿಮ್ಮ ಕೆಲಸಕ್ಕೆ ಬರುತ್ತದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ .

**ಸಿಂಹ** ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು.

**ಕನ್ಯಾ** ಕೆಲವು ಅನಿವಾರ್ಯ ಸಂದರ್ಭಗಳು ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು.

**ತುಲಾ** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು.

**ವೃಶ್ಚಿಕ** ನೀವು ಆರೋಗ್ಯ ಸಮಸ್ಯೆಯಿಂದಾಗಿ ಒಂದು ಪ್ರಮುಖ ಕೆಲಸಕ್ಕೆ ಹೋಗಲು ಸಾಧ್ಯವಾಗದಿರುವುದರಿಂದ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಆದರೆ ನಿಮ್ಮನ್ನು ಮೇಲೆತ್ತಲು ನಿಮ್ಮ ತಾರ್ಕಿಕತೆಯನ್ನು ಬಳಸಿ.

**ಧನಸ್ಸು** ಕುಟುಂಬದಲ್ಲಿ ಸರ್ವಾಧಿಕಾರಿ ಧೋರಣೆಯನ್ನು ಬದಲಾಯಿಸಿಕೊಳ್ಳಲು ಇದು ಒಳ್ಳೆಯ ಸಮಯ. ಜೀವನದ ಏಳುಬೀಳುಗಳನ್ನು ಹಂಚಿಕೊಳ್ಳಲು ಅವರ ಸಹಕಾರದೊಂದಿಗೆ ಕೆಲಸ ಮಾಡಿ.

**ಮಕರ** ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು ಮತ್ತು ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನೀವು ಹಣವನ್ನು ಖಾರುಚು ಮಾಡಬೇಕಾಗುತ್ತದೆ.

**ಕುಂಭ** ನೀವು ಬಯಸುವ ಎಲ್ಲಾ ಗಮನವನ್ನೂ ನೀವು ಪಡೆಯುವ ಒಳ್ಳೆಯ ದಿನ ನಿಮ್ಮ ಮನಸ್ಸಿನಲ್ಲಿ ಅನೇಕ ವಿಷಯಗಳಿರುತ್ತವೆ ಹಾಗೂ ನೀವು ಯಾವುದನ್ನು ಅನುಸರಿಸಬೇಕೆನ್ನುವ ಸಮಸ್ಯೆ ಹೊಂದಿರುತ್ತೀರಿ.

**ಮೀನ** ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು, ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊದರೆಗೊಳಗಾಗಬಹುದು.

### ಕೋಡಿಯಿಂದ ಹರಿಯುವ ನೀರನ್ನು ಸಂಗ್ರಹಿಸಿ ಬರಪೀಡಿತ ಹಳ್ಳಿಗಳ ಕೆರೆಗಳಿಗೆ ಹರಿಸುವುದು ಯೋಜನೆ ಉದ್ದೇಶ

# ಹಳ್ಳ ಹಿಡಿಯಿತೇ ಬೆರಟಿಕೆರೆ ನೀರಾವರಿ ಯೋಜನೆ

• ಉದಯವಾಹಿನಿ ಚಿಕ್ಕಮಗಳೂರು

ಅಯ್ಯನಕೆರೆಯಿಂದ ಬೆರಟಿಕೆರೆಗೆ ನೀರು ಹರಿಸುವ ಯೋಜನೆಗೆ ಅನದಾನ ದೊರೆತು ನಾಲ್ಕು ವರ್ಷ ಕಳೆದಿವೆ. ಕೆಳಭಾಗದ ರೈತರ ವಿರೋಧದ ನಡುವೆ ಯೋಜನೆಯೇ ಹಳ್ಳ ಹಿಡಿಯುವ ಲಕ್ಷಣಗಳು ಗೋಚರಿಸುತ್ತಿವೆ. ಈ ಯೋಜನೆ ನಂಬಿ ಕುಡಿಯುವ ನೀರಿನ ಕನಸು ಕಂಡಿದ್ದ ನಾಗೇನಹಳ್ಳಿ ಮತ್ತು ಹುಲಿಕೆರೆ ಸುತ್ತಮುತ್ತಲ ರೈತರು ಕಂಗಾಲಾಗಿದ್ದಾರೆ. ಅಯ್ಯನಕೆರೆಯ ಕೋಡಿಯಿಂದ ಹರಿಯುವ ನೀರನ್ನು ನಾಗೇನಹಳ್ಳಿ ಮತ್ತು ಹುಲಿಕೆರೆ ಸಮೀಪದ ಬೆರಟಿಕೆರೆಗೆ ಹರಿಸುವ ಯೋಜನೆಗೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲೇ ಅನುದಾನ ಕೂಡ ಬಿಡುಗಡೆಯಾಗಿತ್ತು.

ಕೋಡಿಯಿಂದ ಹರಿಯುವ ನೀರನ್ನು ಅಗ್ರಹಾರದ ಸಮೀಪ ಚೆಕ್‌ಡ್ಯಾಂ ಬಳಿ ನೀರು ಸಂಗ್ರಹಿಸಿ ಬರಪೀಡಿತ ಹಳ್ಳಿಗಳ ಕೆರೆಗಳಿಗೆ ಹರಿಸುವುದು ಯೋಜನೆ ಉದ್ದೇಶ. 6.5 ಕಿ.ಮೀ ದೂರಕ್ಕೆ ಪೈಪ್‌ಲೈನ್ ಮೂಲಕ ನೀರು ಸಾಗಿಸಿ ನಾಗೇನಹಳ್ಳಿ ಕೆರೆ ಮತ್ತು ಬೆರಟಿಕೆರೆಗೆ ನೀರು ಹರಿಸಲು ಉದ್ದೇಶಿಸಲಾಗಿತ್ತು. ರೂ.9.90 ಕೋಟಿ ಮೊತ್ತದ ಯೋಜನೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿತ್ತು. ಕಾಮಗಾರಿ ಆರಂಭಿಸಲು ಗುತ್ತಿಗೆದಾರರಿಗೆ ಕಾರ್ಯಾದೇಶವನ್ನೂ ನೀಡಲಾಗಿತ್ತು. ಸರ್ಕಾರ ಬದಲಾಗಿ ಕಾಂಗ್ರೆಸ್ ಆಡಳಿತಕ್ಕೆ ಬಂದಾಗ ಹಳೇ ಯೋಜನೆಗಳನ್ನು ತಡೆ ಹಿಡಿದಿತ್ತು. ಎರಡು ವರ್ಷಗಳ ಬಳಿಕ ಕಾಮಗಾರಿ ಆರಂಭಿಸಲು ಸರ್ಕಾರ ಅನುಮತಿ ನೀಡಿತ್ತು. 2025ರ ಜುಲೈನಲ್ಲಿ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಕಾಮಗಾರಿ ಆರಂಭಿಸಿದ್ದರು. ಆದರೆ, ಅಗ್ರಹಾರ ಚೆಕ್ ಡ್ಯಾಂ ನೀರು ಕಡೂರು ತಾಲ್ಲೂಕಿನ ನೂರಾರು ಹಳ್ಳಿಗಳ ಜಲಮೂಲವಾಗಿದ್ದು, ಆ ನೀರನ್ನು ಮತ್ತೊಂದು ಯೋಜನೆಗೆ ಬಳಸಿದರೆ ವೇದಾವತಿ



ಉದಯವಾಹಿನಿ ಚಿತ್ರ

ನದಿಯ ಹರಿವು ಕಡಿಮೆಯಾಗಲಿದೆ ಎಂಬುದು ಕೆಳಭಾಗದ ಹಳ್ಳಿಗಳ ರೈತರು ಆತಂಕ ವ್ಯಕ್ತಪಡಿಸಿದರು. ಅಲ್ಲದೇ ಕಾಮಗಾರಿ ನಡೆಸಂತೆ ತಡೆಯೊಡ್ಡಿದ್ದರು.

ಬಾಣೂರು, ಶಿವಪುರ, ಗುಬ್ಬಿಹಳ್ಳಿ, ಜಿಗಣೆಹಳ್ಳಿ, ಎನ್. ಜಿ.ಕೊಪ್ಪಲು, ಬಂಡಿಕೊಪ್ಪಲು, ಪಟ್ಟಣಗೆರೆ, ಕುಂತಿಹೊಳೆ, ಯಳ್ಳಂಬಳಸೆ ಸೇರಿ ಹಲವು ಹಳ್ಳಿಗಳಿಗೆ ಈ ನದಿಯ ನೀರಿನಿಂದ ಅನುಕೂಲವಾಗಿದೆ. ಹೊಸ ಯೋಜನೆಯ ಮೂಲಕ ಹುಲಿಕೆರೆ ಮತ್ತು ನಾಗೇನಹಳ್ಳಿ ಕೆರೆಗಳಿಗೆ ಈ ನೀರು ಹರಿಸಿದರೆ ನದಿಯ ನೀರಿನ ಹರಿವು ಕಡಿಮೆಯಾಗಲಿದೆ ಎಂಬುದು ಅವರ ದುಗುಡ. ಎರಡು ಭಾಗದ ರೈತರಿಂದ ಪರ–ವಿರೋಧ ವ್ಯಕ್ತವಾದ ಬಳಿಕ ಸಣ್ಣ ನೀರಾವರಿ ಇಲಾಖೆ ಕಾಮಗಾರಿ ನಿಲ್ಲಿಸಿತ್ತು.

100 ಎಚ್.ಪಿ ಸಾಮರ್ಥ್ಯದ ಮೋಟಾರ್ ಅಳವಡಿಸಿ ಮಳೆಗಾಲದ 45 ದಿನ ಮಾತ್ರ ನೀರೆತ್ತುವ ಯೋಜನೆ ಇದಾಗಿದೆ.

ಪ್ರತಿ ಸೆಕೆಂಡಿಗೆ 3,500 ಲೀಟರ್ ನೀರು ಹರಿಯುತ್ತಿದ್ದು, ಇದರಲ್ಲಿ ಎರಡೂವರೆ ಲೀಟರ್ ನೀರನ್ನು ಮಾತ್ರ ಬಳಸಿ ಕೆರೆ ತುಂಬಿಸಲು ಉದ್ದೇಶಿಸಲಾಗಿದೆ. ಸೆನ್ಸರ್ ಆಧರಿತ ಮೋಟಾರ್ ಅಳವಡಿಸಲಾಗುತ್ತದೆ. ಚೆಕ್‌ಡ್ಯಾಂ ಕೋಡಿ ಮೇಲೆ ಆರು ಇಂಚು ಮತ್ತು ಅದಕ್ಕಿಂತ ಹೆಚ್ಚಿನ ನೀರು ಹರಿಯುವ ಸಂದರ್ಭದಲ್ಲಿ ಮಾತ್ರ ಈ ಬಾವಿಗೆ ನೀರು ಬರಲಿದೆ. ಅಲ್ಲಿಂದ ಪೈಪ್‌ಲೈನ್ ಮೂಲಕ ಮೊದಲಿಗೆ ನಾಗೇನಹಳ್ಳಿ ಗ್ರಾಮದಲ್ಲಿರುವ ಸಣ್ಣ ಕೆರೆಗೆ ಬರಲಿದೆ. ಈ ವಿಷಯವನ್ನು ಕೆಳಭಾಗದ ಹಳ್ಳಿಗಳ ರೈತರಿಗೆ ಮನವರಿಕೆ ಮಾಡಿಕೊಡಬೇಕಿತ್ತು.

ಎರಡೂ ಕಡೆಯ ರೈತ ಮುಖಂಡರ ಸಭೆ ನಡೆಸಿ ಯೋಜನೆ ಕುರಿತು ಮನವರಿಕೆ ಮಾಡಿ ಕೊಡಲಾಗುವುದು ಎಂದು ಹಿಂದಿನ ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದರು. ಕಾಮಗಾರಿ ನಿಲ್ಲಿಸಿ 10 ತಿಂಗಳು ಕಳೆದರೂ ಸಭೆ ನಡೆದಿರಲಿಲ್ಲ. ಈಗಿನ ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಅವರು ಮೇ 8ರಂದು ಎರಡೂ ಭಾಗದ ರೈತರ ಸಭೆಯನ್ನು ಜಿಲ್ಲಾಧಿಕಾರಿ ಕರೆದಿದ್ದರು.

ಅಗ್ರಹಾರದ ಬಳಿ ಇರುವ ಚೆಕ್ ಡ್ಯಾಂನಿಂದ ನೀರು ಎತ್ತಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದರು ಎನ್ನಲಾಗಿದೆ.

**ಕೆರೆ ತುಂಬುವ ರೈತರ ಕನಸು ಇನ್ನೂ ದೂರ**

**ಯೋಜನೆ ಆರಂಭಿಸಬೇಕು**

**ನಮಗೆ ಕೃಷಿಗೆ ನೀರಾವರಿ ಸೌಕರ್ಯ ಬೇಕಿಲ್ಲ. ಕುಡಿಯುವ ನೀರು ದೊರೆತರೆ ಸಾಕು ಜನ–ಜಾನುವಾರುಗಳ ಜೀವ ಉಳಿಯಲಿದೆ. ಜಾನುವಾರುಗಳಿಗೆ ಮೇವಿಲ್ಲದೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಿಂದ ಖರೀದಿಸಿ ತರುವ ಪರಿಸ್ಥಿತಿ ಇದೆ. ಕೂಡಲೇ ಯೋಜನೆ ಆರಂಭಿಸಬೇಕು ಎಂಬುದು ನಾಗೇನಹಳ್ಳಿ ಗ್ರಾಮಸ್ಥರ ಮನವಿ.**

ಬೆರಟಿಕೆರೆಗೆ ನೀರು ಹರಿಸಲು ನಮ್ಮ ವಿರೋಧ ಇಲ್ಲ. ಅಗ್ರಹಾರ ಚೆಕ್‌ಡ್ಯಾಂನಿಂದ ನೀರೆತ್ತುವುದು ಬೇಡ. ಬೇರೆ ಎಲ್ಲಾದರೂ ಜಾಗ ಹುಡುಕಿ ಎಂಬ ಸಲಹೆಗಳನ್ನು ನೀಡಿದರು ಎನ್ನಲಾಗಿದೆ.

ಅಗ್ರಹಾರ ಚೆಕ್‌ಡ್ಯಾಂ ಹೊರತಾಗಿ ನೀರೆತ್ತಲು ಬೇರೆ ಕಡೆ ಜಾಗ ಹುಡಕಲು ಸಭೆ ನಿರ್ಧರಿಸಿತು ಎಂದು ಮೂಲಗಳು ಮಾಹಿತಿ ನೀಡಿವ ಈಗ ನಿಗದಿ ಮಾಡಿರುವ ಜಾಗ ಬಿಟ್ಟು ಬೇರೆ ಕಡೆಯಿಂದ ನೀರೆತ್ತುವುದಾದರೆ ಸಮಗ್ರ ಯೋಜನಾ ವರದಿ ಬದಲಾಗಬೇಕು. ಅದಕ್ಕೆ ಬೇಕಿರುವ ಹೆಚ್ಚುವರಿ ಮೊತ್ತ ಕೊಡಲು ಸರ್ಕಾರ ನಿರ್ಧರಿಸಬೇಕು. ಈ ಎಲ್ಲಾ ಕೆಲಸಗಳಾಗಲು ಇನ್ನು ಎಷ್ಟು ವರ್ಷಗಳು ಬೇಕಾಗಲಿದೆಯೋ ಗೊತ್ತಿಲ್ಲ. ಜಿಲ್ಲಾಡಳಿತದ ಈ ನಿರ್ಧಾರ ಗಮನಿಸಿದರೆ ಈ ಯೋಜನೆಗೆ ಬಹುತೇಕ ನನೆಗುದಿಗೆ ಬಿದ್ದಂತೆ ಎಂದು ರೈತರೊಬ್ಬರು ಬೇಸರ ವ್ಯಕ್ತಪಡಿಸಿದರು.

ಬೆರಟಿಕೆರೆ ಯೋಜನೆಯಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ವಿರೋಧಿಸುವ ರೈತರಿಗೆ ಅದನ್ನು ಮನವರಿಕೆ ಮಾಡಿಕೊಡುವ ಬದಲು ಬೇರೆ ಜಾಗ ಹುಡುಕುವ ನಿರ್ಧಾರ ಕಾರ್ಯಸಾಧುವಲ್ಲ. ಬಹುತೇಕ ಈ ಯೋಜನೆಗೆ ತಿಲಾಂಜಿಯನ್ನೇ ಇಟ್ಟಂತಾಗಿದೆ ಎಂದು ರೈತ ಗುರುಶಾಂತಪ್ಪ ಅಸಮಾನ ವ್ಯಕ್ತ ಪಡಿಸುತ್ತಾರೆ.

## ಕೃಷಿ ಕೆಲಸಗಳಲ್ಲಿ ಮಕ್ಕಳ ಬಳಕೆ; ಪೋಷಕರಲ್ಲಿ ಅರಿವು ಮೂಡಿಸಿ: ಸಂಗಪ್ಪ

• ಉದಯವಾಹಿನಿ ಬಾಗಲಕೋಟೆ

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕೆಲಸಗಳಲ್ಲಿ ಮಕ್ಕಳ ಬಳಕೆ ಕುರಿತು ಅಂಕಿ ಸಂಖ್ಯೆ ಸಂಗ್ರಹ, ಸಮೀಕ್ಷೆ ಪೋಷಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಾಯೋಗಿಕ ಅಧ್ಯಯನ ಕುರಿತು ಜರುಗಿದ ಪೂರ್ವಭಾವಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಮಕ್ಕಳ ಬಳಕೆಯನ್ನು ತಡೆಗಟ್ಟುವ ಹಾಗೂ ಮಕ್ಕಳ ಶಿಕ್ಷಣ ಮತ್ತು ಸುರಕ್ಷತೆಗೆ ಆದ್ಯತೆ ನೀಡುವ ಉದ್ದೇಶದಿಂದ ಕೈಗೊಳ್ಳಲಾಗುತ್ತಿರುವ ಪ್ರಾಯೋಗಿಕ ಅಧ್ಯಯನಕ್ಕೆ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ ಎಂದರು. ಕೃಷಿ ಚಟುವಟಿಕೆಗಳಲ್ಲಿ ಮಕ್ಕಳ ತೊಡಗಿಸಿ ಕೊಳ್ಳುವಿಕೆ. ಅದರಿಂದಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಣಾಮಗಳು, ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಜಾಗೃತಿ ಕಾರ್ಯಕ್ರಮಗಳ ಕುರಿತು ಚರ್ಚೆ ಮಾಡಲಾಯಿತು. ಮೂರು ವರ್ಷಗಳ ಈ ಯೋಜನೆ ಕುರಿತು ವಿಸ್ತ್ರತ ಕ್ರಿಯಾಯೋಜನೆ ರೂಪಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಬೇಕು.



ಉದಯವಾಹಿನಿ ಚಿತ್ರ

**ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಾಮಾಜಿಕ ನ್ಯಾಯ ಮತ್ತು ಅಂತರರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಮಾನವ ಮತ್ತು ಕಾರ್ಮಿಕ ಹಕ್ಕುಗಳನ್ನು ಉತ್ತೇಜಿಸಲು ಮೀಸಲಾಗಿರುವ ವಿಶೇಷ ಸಂಸ್ಥೆಯಾಗಿದೆ. -ರಂಜಿತ ಪ್ರಕಾಶ**
**ರಾಷ್ಟ್ರೀಯ ಯೋಜನಾ ಸಂಯೋಜನ ಸಮನ್ವಯ ಅಧಿಕಾರಿ**

ಗ್ರಾಮೀಣ ಪ್ರದೇಶದಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ಆಯೋಜಿಸಬೇಕು. ಜಿಲ್ಲಾ ಮಟ್ಟದ ಅಧಿಕಾರಿಗಳು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಪ್ರತಿನಿಧಿ ಜತೆ ನಿರಂತರ ಸಂಪರ್ಕದಲ್ಲಿಬೇಕು ಎಂದು ತಿಳಿಸಿದರು. ಯೋಗ್ಯ ಕೆಲಸ ಉತ್ತೇಜಿಸುವುದು. ಉತ್ಪಾದಕ, ಸುರಕ್ಷಿತ ಮತ್ತು ನ್ಯಾಯಯುತ ಕೆಲಸದ ವಾತಾವರಣಗಳನ್ನು ರಚಿಸುವತ್ತ ಗಮನ ಹರಿಸಲಾಗುತ್ತಿದೆ ಎಂದು ಹೇಳಿದರು.

ಡಿವೈಎಸ್ಪಿ ಗಜಾನನ ಸುತಾರ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಸದಾಶಿವ ಬಡಿಗೇರ, ರೇಷ್ಮೆ ಇಲಾಖೆ ಉಪನಿರ್ದೇಶಕ ಎಸ್. ಎಂ.ಕೋರೆ, ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಸ್ಥೆ ಯೋಜನಾ ನಿರ್ದೇಶಕ ಸುಧಾಕರ ಬಡಿಗೇರ, ಮಹಿಳಾ , ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನೆ ನಿರ್ದೇಶಕ ಮಂಜುನಾಥ ಉಪಸ್ಥಿತರಿದ್ದರು.

## ಮಹಿಳೆಯರಿಗಿಲ್ಲ ಶಕ್ತಿ ಯೋಜನೆಯ ಲಾಭ

• ಉದಯವಾಹಿನಿ ಬಸವಾಪಟ್ಟಣ

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯ ಲಾಭ ಬಸವಾಪಟ್ಟಣ ಭಾಗದ ಮಹಿಳೆಯರಿಗೆ ಸಿಗದಾಗಿದೆ. ಹೋಬಳಿ ವ್ಯಾಪ್ತಿಯಲ್ಲಿ 21 ಹಳ್ಳಿಗಳಿದ್ದು, ಜಿಲ್ಲಾ ಕೇಂದ್ರಕ್ಕೆ ತೆರಳಲು ಕೆಎಸ್‌ಆರ್‌ಟಿಸಿ ಬಸ್ ಸೌಕರ್ಯವೇ ಇಲ್ಲದಂತಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ಜನ ಪಟ್ಟಣ ಹಾಗೂ ಜಿಲ್ಲಾ ಕೇಂದ್ರಕ್ಕೆ ಹೋಗಲು ಇನ್ನಿಲ್ಲದ ಕಷ್ಟ ಅನುಭವಿಸುವಂತಾಗಿದೆ.

ಉತ್ತಮ ರಸ್ತೆಗಳು ಇದ್ದರೂ ನಮ್ಮ ಭಾಗಕ್ಕೆ ಸರ್ಕಾರಿ ಬಸ್ ಇಲ್ಲದಂತಾಗಿದೆ. ಆದ್ದರಿಂದ ಬೇರೆ ದಾರಿ ಇಲ್ಲದೆ ಖಾಸಗಿ ಬಸ್‌ಗಳನ್ನೇ ಅವಲಂಬಿಸಬೇಕಾಗಿದೆ. ಇರುವ ಒಂದು ಬಸ್ ಕೂಡ ಸಮಯಕ್ಕೆ ಸರಿಯಾಗಿ ಬರುವುದಿಲ್ಲ ಎಂದು ನಾಗರಿಕರು ದೂರಿದರು.

ಇರುವ ಒಂದು ಬಸ್ ದಾವಣಗೆರೆ–ಹೊನ್ನಾಳಿ ಮಾರ್ಗಕ್ಕೆ ಸೀಮಿತವಾಗಿದೆ. ಎರಡು ವರ್ಷಗಳಿಂದ ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ ಸಾರಿಗೆ ಸಂಸ್ಥೆಯ ಬಸ್ ಅಪಘಾತಕ್ಕೀಡಾಗಿದೆ. ಹೊನ್ನಾಳಿ ಮತ್ತು ಚನ್ನಗಿರಿಯಲ್ಲಿ ಕೆಎಸ್‌ಆರ್‌ಟಿಸಿ ಡಿಪೊ ಇದ್ದರೂ ಈ



ಉದಯವಾಹಿನಿ ಚಿತ್ರ

ಭಾಗದ ಜನತೆ ಖಾಸಗಿ ಬಸ್‌ಗಳನ್ನೇ ಅವಲಂಬಿಸ ಬೇಕಾಗಿರುವುದು ದುರ್ದೈವದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಭಾಗದಲ್ಲಿ ಸರ್ಕಾರಿ ಬಸ್‌ಗಳನ್ನು ಓಡಿಸುತ್ತಿಲ್ಲ. ಇದರಿಂದ ಸರ್ಕಾರದ ಯೋಜನೆಯ ಲಾಭ ನಮಗೆ ಸಿಗುತ್ತಿಲ್ಲ. ಇದು ಸಾರಿಗೆ ಸಂಸ್ಥೆ ಅಧಿಕಾರಿ ಗಳ ತಾತ್ಕಾರವೋ, ಜನಪ್ರತಿನಿಧಿಗಳ ನಿರ್ಲಕ್ಷ್ಯವೋ ಗೊತ್ತಾಗುತ್ತಿಲ್ಲ ಎಂದು ಪಟ್ಟಣದ ನಾಗರತ್ನಮ್ಮ, ಶಾರದಮ್ಮ ಅನ್ನಪೂರ್ಣಮ್ಮ ಬೇಸರಿಸಿದರು. ಹೊನ್ನಾಳಿ ಡಿಪೊದಿಂದ ಧರ್ಮಸ್ಥಳ, ಉಡುಪಿ, ಸುಬ್ರಹ್ಮಣ್ಯಕ್ಕೆ ಬಸ್ ಓಡಿಸುತ್ತಿದ್ದು, ಅವು ಹೊನ್ನಾಳಿ, ಬಸವಾಪಟ್ಟಣ, ಚನ್ನಗಿರಿ, ಬೀರೂರು ಮಾರ್ಗವಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

## ನೀರಿನ ಸಮಸ್ಯೆ ನಿವಾರಣೆಗೆ ಕ್ರಮ: ತಹಶೀಲ್ದಾರ್ ಕಲಗೌಡ ಪಾಟೀಲ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಬೇಸಿಗೆಯಲ್ಲಿ ಸಂಭನೀಯ ನೀರಿನ ತೊಂದರೆ ಎದುರಿಸಲು ತಾಲ್ಲೂಕು ಆಡಳಿತವು ಶಾಸಕ ಬಾಬಾಸಾಹೇಬ ಪಾಟೀಲ, ಜಿಲ್ಲಾಧಿಕಾರಿ ಹಾಗೂ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಈಗಾಗಲೇ ಸಿದ್ಧತೆ ಮಾಡಿ ಕೊಂಡಿದೆ ಎಂದು ತಹಶೀಲ್ದಾರ್ ಕಲಗೌಡ ಪಾಟೀಲ ತಿಳಿಸಿದರು.

ಇಲ್ಲಿಯವರೆಗೆ ಎಲ್ಲಿಯೂ ಕುಡಿಯುವ ನೀರಿನ ತೊಂದರೆ ಕಾಣಿಸಿಕೊಂಡಿಲ್ಲ. ಕುಲವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾಗರದಲ್ಲಿ ಕಾಣಿಸಿಕೊಂಡಾಗ ಅಲ್ಲಿಯ ಗ್ರಾಮಸ್ಥರಿಗೆ ಹೊಸದಾಗಿ ಕೊಳವೆ ಬಾವಿ ಕೊರೆಸಿ ಕೊಡಲಾಗಿದೆ ಎಂದರು. ಇದೇ ರೀತಿ ಬಿರು ಬೇಸಿಗೆ ಮುಂದುವರಿದರೆ ತಾಲ್ಲೂಕಿನ ಖೋದಾನಪುರ ಮತ್ತು ಕಡತನಾಳ ಗ್ರಾಮದಲ್ಲಿ ನೀರಿನ ತೊಂದರೆ ಎದುರಾಗಬಹುದು ಎಂದು ಅಂದಾಜು ಮಾಡಲಾಗಿದೆ. ಒಂದು ವೇಳೆ ಆದರೆ, ಗ್ರಾಮಕ್ಕೆ ನೀರು ಸರಬರಾಜು ಕೈಗೊಳ್ಳಲು ಖಾಸಗಿಯವರ ಕೊಳವೆ ಬಾವಿ ಗುರುತಿಸಿ ಇಡಲಾಗಿದೆ ಎಂದು ಹೇಳಿದರು. ತಾಲ್ಲೂಕಿನ ಎಲ್ಲಾ 58 ಹಳ್ಳಿಗಳಲ್ಲಿಯೂ ಗ್ರಾಮ ಆಡಳಿತ ಅಧಿಕಾರಿ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನೀರು ಪೂರೈಕೆ ಸುಗಮವಾಗಿ ಕೈಗೊಳ್ಳಲು ಖಾಸಗಿ ಕೊಳವೆ ಬಾವಿ ಗುರುತಿಸುವ ಕಾರ್ಯ ಪೂರ್ಣಗೊಳಿಸಿದ್ದಾರೆ ಎಂದು ತಿಳಿಸಿದರು.

## ನೀರು ಪೂರೈಕೆಯಲ್ಲಿ ವ್ಯತ್ಯಯ

• ಉದಯವಾಹಿನಿ ಅಳ್ನಾವರ

ಪೈಪ್‌ಲೈನ್ ದುರಸ್ತಿ ಕಾರಣ ಪಟ್ಟಣಕ್ಕೆ ಸೋಮವಾರ ಮತ್ತು ಕುಡಿಯುವ ನೀರು ಪೂರೈಕೆ ಇರುವುದಿಲ್ಲ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರಕಾಶ ಮುಗದಮು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕ ನೀರಾವರಿ ನಿಗಮದಿಂದ ಹಳಿಯಾಳ ತಾಲ್ಲೂಕಿನ ಬಿದರೊಳಿ ಗ್ರಾಮದ ಹತ್ತಿರ ಕೆರೆಗೆ ನೀರು ಸರಬರಾಜು ಯೋಜನೆಯ ಪೈಪ್‌ಲೈನ್ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದ್ದು, ನೀರು ಪೂರೈಕೆ ಇರುವುದಿಲ್ಲ. ಕಾಳಿ ನದಿ ಮೂಲದಿಂದ ಪಟ್ಟಣಕ್ಕೆ ನಿತ್ಯ 24/7 ಯೋಜನೆ ಅಡಿ ನೀರು ಸರಬರಾಜು ಆಗುತ್ತಿದ್ದು, ಸಾರ್ವಜನಿಕರು ಅಗತ್ಯವಿರುವಷ್ಟು ನೀರು ಸಂಗ್ರಹ ಮಾಡಿಕೊಳ್ಳಬೇಕು ಎಂದು ವಿನಂತಿಸಿದ್ದಾರೆ.

## ಕಳಪೆ ಹತ್ತಿಬೀಜ ಮಾರಾಟ ನಿಷೇಧಕ್ಕೆ ಆಗ್ರಹಿಸಿ ಎತ್ತಿನಬಂಡಿಯೊಂದಿಗೆ ಪ್ರತಿಭಟನೆ

• ಉದಯವಾಹಿನಿ ಜೇವರಗಿ

ಕಳಪೆ ಮಟ್ಟದ ಹತ್ತಿ ಬೀಜ ಮಾರಾಟ ಎಫ್‌ಐಡಿ ರದ್ದು ಮಾಡಲು ಅಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನ ತಾಲ್ಲೂಕು ಸಮಿತಿಯಿಂದ ಎತ್ತಿನ ಬಂಡಿ ಮುಖಾಂತರ ಪ್ರತಿಭಟನೆ ಮಾಡಲಾಯಿತು. ರಾಜ್ಯ ಕಾರ್ಯದರ್ಶಿ ಮಹೇಶ್ ಸುಬೇದಾರ ರಾಜ್ಯ ಸಹ ಕಾರ್ಯದರ್ಶಿ ಅಲ್ಲಾ ಪಟೇಲ್ ಇಜೇರಿ ಮಾತನಾಡಿ ಯಾವುದೇ ಕಾರಣಕ್ಕೂ ಕಳಪೆ ಮಟ್ಟದ ಬೀಜ ವಿತರಣೆ ಮಾಡಬಾರದು ಒಂದು ವೇಳೆ ವಿತರಣೆ ಮಾಡಿದರೆ ಅವರ ಮೇಲೆ ಕ್ರಮ ಜರುಗಿ ಸಬೇಕು ಎಂದು ಒತ್ತಾಯಿಸಿದರು ನಂತರ ತಾಲ್ಲೂಕ ಅಧ್ಯಕ್ಷರಾದ ಮಲ್ಲನಗೌಡ ಪಾಟೀಲ ಗೌನಳ್ಳಿ ಮಾತನಾಡಿ,ಎಫ್‌ಐ ಡಿ ಮೂಲಕ ರೈತರಿಗೆ ರಸಗೊಬ್ಬರ ವಿತರಣೆ ಮಾಡುವುದನ್ನು ರದ್ದುಗೊಳಿಸಿ ಮೊದಲಿನಂತೆ ಸರಳವಾಗಿ ವಿತರಣೆ ಮಾಡಬೇಕು.

ಕಳಪೆ ಮಟ್ಟದ ಹತ್ತಿ ಬೀಜ ಮಾರಾಟ ನಿಷೇಧ ಮಾಡಬೇಕು ಎಂದು ಆಗ್ರಹಿಸಿದರು ನಂತರ ತಹಶೀಲ್ದಾರ್ ಮಲ್ಲಣ್ಣ ಯಲಗೋಡರಿಗೆ ಮನವಿ ಪತ್ರ ಸಲ್ಲಿಸಿದರು ಈ ಸಂದರ್ಭದಲ್ಲಿ ಮುಖಂಡರಾದ ಸಂಗೀತ ಕಲ್ಲೂರ ಶೇಖಮ್ಮ ನೆಲೋಗಿ ಪ್ರಭಾವತಿ ನೆಲೋಗಿ ಬಸಮ್ಮ ಜೇವರ್ಗಿ ಶಾರದಾ ಜೇವರ್ಗಿ ಶಾಂತಮ್ಮ ಜೇವರ್ಗಿ ಭೀಮು ಖಾದ್ಯಪುರ ಜಯ ಕರ್ನಾಟಕ ತಾಲ್ಲೂಕ ಅಧ್ಯಕ್ಷ ಭೀಮಶಂಕರ್ ಜನಿವಾರ ಭಾಗಪ್ಪ ಗೌನಳ್ಳಿ ನಮ್ಮ ಕರ್ನಾಟಕ ಸೇನೆ ತಾಲ್ಲೂಕು ಅಧ್ಯಕ್ಷ ರವಿಪಾಟೀಲ್ ಅನೇಕರಿದ್ದರು.

## ಪೊಲೀಸ್‌ರಿಂದ ಲಾಕ್ಡ್ ಹೌಸ್ ಬೀಟ್ ಸಿಸ್ಟಮ್ ಪ್ರಾರಂಭ

• ಉದಯವಾಹಿನಿ ಉಡುಪಿ

ಜಿಲ್ಲೆಯ ನಾಗರಿಕರು ಕೆಲಸದ ನಿಮಿತ್ತ ಅಥವಾ ಪ್ರವಾಸಕ್ಕಾಗಿ ತಮ್ಮ ಮನೆಗೆ ಬೀಗ ಹಾಕಿ (ಲಾಕ್ ಮಾಡಿ) ಹೊರಗೆ ಹೋದಾಗ, ಅಂತಹ ಮನೆಗಳ ಮೇಲೆ ನಿಗಾ ಇಡಲು ಉಡುಪಿ ಜಿಲ್ಲಾ ಪೊಲೀಸ್ ಇಲಾಖೆ ಲಾಕ್ಡ್ ಹೌಸ್ ಬೀಟ್ ಸಿಸ್ಟಮ್ (ಎಲ್‌ಎಚ್‌ಬಿಎಸ್) ಎಂಬ ವಿನೂತನ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.



ಈ ನೂತನ ಯೋಜನೆಯಲ್ಲಿ ಲಾಕ್ ಆಗಿರುವ ಮನೆಗಳ ಮೇಲೆ ಪೊಲೀಸರು ವಿಶೇಷ ನಿಗಾ ಹದ್ದಿನ ಕಣ್ಣು ಇರಿಸಲಿ ದ್ದಾರೆ. ಇಂಥ ಬೀಗ ಹಾಕಿದ ಮನೆ ಇರುವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಯಾ ಠಾಣಾ ಬೀಟ್ ಸಿಬ್ಬಂದಿ ಆ ಮನೆಗೆ ಭೇಟಿ ನೀಡಿ ರಾತ್ರಿ ಮತ್ತು ಹಗಲು ವೇಳೆ ಆ ಮನೆಯ ಸೂಕ್ತ ಭದ್ರತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸುತ್ತಾರೆ.

ಉಡುಪಿ ಜಿಲ್ಲೆಯ ಯಾವುದೇ ಸಾರ್ವಜನಿಕರು ತಾವು ಮನೆಯಿಂದ ಪ್ರವಾಸ ಮತ್ತು ಇತರೇ ಕಾರ್ಯಕ್ರಮಗಳಿಗಾಗಿ ಮನೆಯನ್ನು ಲಾಕ್ ಮಾಡಿ ಹೊರಡುವಾಗ ಉಡುಪಿ ಜಿಲ್ಲಾ ನಿಯಂತ್ರಣ ಕೊಠಡಿಯಲ್ಲಿ ಈ ಬಗ್ಗೆ ನೀಡಲಾದ ವಿಶೇಷ ದೂರವಾಣಿ ಸಂಖ್ಯೆ: 0820-2526709ಕ್ಕೆ ಕರೆ ಮಾಡಿ ಮಾಹಿತಿಯನ್ನು ನೀಡಬೇಕು. ನಿಯಂತ್ರಣ ಕೊಠಡಿಯಿಂದ ನೀಡುವ ವಾಟ್ಸಾಪ್ ಸಂಖ್ಯೆಗೆ ಮನೆಯಿಂದ ತೆರಳುವ ಮತ್ತು ಮರಳಿ ಬರುವ ದಿನಾಂಕ ಹಾಗೂ ಸಮಯ, ಮನೆಯ ನಿಖರವಾದ ವಿಳಾಸ ಹಾಗೂ ಮನೆಯ ಮುಂಭಾಗ ನಿಂತು ತೆಗೆದ ಒಂದು ಸೆಲ್ಫಿ ಫೋಟೋವನ್ನು ನೀಡಬೇಕಾಗಿದೆ ಎಂದು ಜಿಲ್ಲಾ ಪೊಲೀಸರ ಪ್ರಕಟಣೆ ತಿಳಿಸಿದೆ.

ಅನಂತರ ಜಿಲ್ಲಾ ನಿಯಂತ್ರಣ ಕೊಠಡಿಯಿಂದ ಈ ಬಗ್ಗೆ ಸಂಬಂಧಿತ ಪೊಲೀಸ್ ಠಾಣೆಗೆ ಮಾಹಿತಿ ನೀಡಿ, ಆ ಮನೆಯ ವ್ಯಾಪ್ತಿಯ ಬೀಟ್ ಸಿಬ್ಬಂದಿಗಳಿಗೆ ಮನೆಯ ಮಾಹಿತಿಯನ್ನು ನೀಡಲಾಗುವುದು. ಬಳಿಕ ಈ ಮನೆಯನ್ನು ವಾಟ್ಸಾಪ್ ವಿವರದಲ್ಲಿ ನೀಡಲಾದ ನಿಗದಿತ ದಿನಾಂಕ ಮತ್ತು ಸಮಯದವರೆಗೆ ಆ ಮನೆಯ ಭದ್ರತೆ ಮತ್ತು ಸುರಕ್ಷತೆಯನ್ನು ಖಚಿತ ಪಡಿಸುತ್ತಾರೆ. ಈ ಸೌಲಭ್ಯವು ಕೇವಲ ಸ್ವಂತ/ವೈಯಕ್ತಿಕ ಮನೆಗಳಿಗೆ ಮಾತ್ರ ಲಭ್ಯವಿರಲಿದೆ. ಬಹುಮಹಡಿ ಫ್ಲಾಟ್‌ಗಳಿಗೆ ಇದು ಅನ್ವಯಿಸುವುದಿಲ್ಲ. ಯಾವುದೇ ಅಧಿಕೃತವಲ್ಲದ ಅಥವಾ ಅಪರಿಚಿತ ಸಂಖ್ಯೆಗಳೊಂದಿಗೆ ನಿಮ್ಮ ಮನೆಯ ಯಾವುದೇ ವಿವರ ಹಾಗೂ ಮಾಹಿತಿಯನ್ನು ಹಂಚಿಕೊಳ್ಳದಂತೆ ಜಿಲ್ಲಾ ಪೊಲೀಸರು ಜನತೆಯಲ್ಲಿ ಮನವಿ ಮಾಡಿದ್ದಾರೆ.

## ಅಕ್ರಮ ಗಣಿಗಾರಿಕೆಯ ವಿರುದ್ಧ ಸಿಡಿದ್ದೆದ್ದ ಗ್ರಾಮಸ್ಥರು

• ಉದಯವಾಹಿನಿ ಲಕ್ಷ್ಮೇಶ್ವರ

ತಾಲ್ಲೂಕಿನ ಆದರಹಳ್ಳಿ ಗ್ರಾಮದಲ್ಲಿ ಮೀಸಲು ಅರಣ್ಯ ಪ್ರದೇಶದಲ್ಲಿಯೇ ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದ್ದರೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಅರಣ್ಯ ಇಲಾಖೆಯವರು ಪೊಲೀಸ್ ಇಲಾಖೆಯವರು ವಹಿಸಿರುವ ಮೌನಕ್ಕಾಗಿ ಇಡಿ ಗ್ರಾಮಕ್ಕೆ ಗ್ರಾಮವೇ ಸಂಕಷ್ಟದಲ್ಲಿದೆ ಈಗ ಇದುವರೆಗೂ ಹಿಡಿದಿಟ್ಟುಕೊಂಡಿದ್ದ ಸಹನೆಯ ಕಟ್ಟೆ ಒಡೆದು ಗ್ರಾಮಸ್ಥರು ಅಕ್ರಮ ಗಣಿಗಾರಿಕೆಯ ವಿರುದ್ಧ ಸಿಡಿದ್ದೆದ್ದು ಬಿದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ.

ಕ್ರಷರ್ ಮಾಲೀಕರು ಅಕ್ರಮವಾಗಿ ಬಂಡೆ ಗಲ್ಲುಗಳನ್ನು ಸ್ಫೋಟಿಸಲು ಸಿಡಿಮದ್ದುಗಳನ್ನು ಉಪಯೋಗಿಸುತ್ತಿರುವುದರಿಂದ ಗ್ರಾಮಗಳಲ್ಲಿನ ಮನೆಗಳಲ್ಲಿ ಗೋಡೆಗಳು ಬಿರುಕು ಬಿಟ್ಟು ಪರಿತಪ್ಪಿಸುತ್ತಿದ್ದರೆ ನೂರಾರು ಟಿಪ್ಪರಗಳು ಕ್ರಷರಗಳು ಓಡಾಡುತ್ತಿರುವುದರಿಂದ ಭಾರಿ ಪ್ರಮಾಣದ ಧೂಳು ಉಂಟಾಗಿ ಅನೇಕ ರೋಗರುಜಿನಗಳಿಗೆ ಜನರು ಬಲಿಯಾಗುತ್ತಿದ್ದರೆ ಇನ್ನೊಂದು ಕಡೆ ಭಾರಿ



ಉದಯವಾಹಿನಿ ಚಿತ್ರ

**ಸೂಕ್ತ ಪರಿಹಾರಕ್ಕೆ ಆಗ್ರಹ**

**ಸರಕಾರ ಮತ್ತು ಗಣಿ ಇಲಾಖೆಯವರು ಮಧ್ಯಪ್ರವೇಶಿಸಿ ಈ ಅಕ್ರಮ ಚಟುವಟಿಕೆಯನ್ನು ನಿಲ್ಲಿಸಬೇಕು ಜಿಲ್ಲಾಧಿಕಾರಿಗಳು ಖುದ್ದಾಗಿ ಪರಿಶೀಲಿಸಬೇಕು ಗಣಿಗಾರಿಕೆಗೆ ಬಳಸುವ ಸ್ಫೋಟಕಗಳಿಂದ ಮನೆಗಳಿಗೆ ಹಾನಿಯಾಗಿದ್ದ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ.**

ಪ್ರಮಾಣದ ಮದ್ದು ಸಿಡಿಸುತ್ತಿರುವುದರಿಂದ ಕೊಳವೆ ಬಾವಿಗಳಲ್ಲಿನ ಜಲಾಶಯದ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು ಇಷ್ಟೆಲ್ಲಾ ಅನಾಹುತ ಆಗುತ್ತಿದ್ದರು ಅಧಿಕಾರಿಗಳ ಮೌನದ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಕ್ರಮ ಗಣಿಗಾರಿಕೆಯಿಂದ ನಾವು ವಾಸಿಸುತ್ತಿರುವ ಗೋಡೆಗಳು ಬಿರುಕು ಬಿಟ್ಟಿವೆ ನಿರಂತರವಾಗಿ ಟಿಪ್ಪರ ಓಡಾಟದಿಂದ ಧೂಳಿನಿಂದ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬಿದ್ದು ಎಷ್ಟೋ ಜನರು ಆಸ್ಪತ್ರೆಗೆ ಸೇರಿದ್ದಾರೆ ಹಾಗೂ ಗಣಿಗಾರಿಕೆಯಿಂದ ಕುಡಿಯುವ ನೀರಿನ ಕೊಳವೆ ಬಾವಿಗಳು ಬತ್ತಿ ಹೋಗಿವೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಪ್ರಭಾವಿ ಮುಖಂಡರಿಗೆ ಯಾವುದೇ ಮುಲಾಜಿಲ್ಲದೆ ಗಣಿಗಾರಿಕೆಗೆ ಕಣ್ಣುಮುಚ್ಚಿ ಆದೇಶ ನೀಡುತ್ತಿರುವುದರಿಂದ ಈ ಭಾಗದ ಗ್ರಾಮಸ್ಥರು ನಿತ್ಯ ವೇದನೆ ಅನುಭವಿಸುತ್ತಿದ್ದರೂ ಮೌನ ವಹಿಸಿರುವುದು ಸಾರ್ವತ್ರಿಕ ಟೀಕೆ ಕೇಳಿಬರುತ್ತಿದೆ.

## ಬಾಲ್ಯ ವಿವಾಹ ತಡೆಗಟ್ಟಲು ಕಟಿಬದ್ಧ : ಪಿಡಿಓ ವಿಜಯಕುಮಾರ್

• ಉದಯವಾಹಿನಿ ಬೀದರ್

ಗ್ರಾಮ ಮಟ್ಟದಲ್ಲಿ ಬಾಲ್ಯ ವಿವಾಹದಂತಹ ಅನಿಷ್ಠ ಪದ್ಧತಿಗಳನ್ನು ತಡೆಗಟ್ಟಲು ಪಂಚಾಯತ್ ಕಟಿಬದ್ಧವಾಗಿದೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ತಳಮಟ್ಟದಲ್ಲಿ ಜನರೊಂದಿಗೆ ನೇರ ಸಂಪರ್ಕ ಹೊಂದಿರುವುದರಿಂದ, ಈ ಪಿಡುಗಿನ ವಿರುದ್ಧದ ಹೋರಾಟದಲ್ಲಿ ನಿಮ್ಮ ಪಾತ್ರ ಬಹಳ ದೊಡ್ಡದು. ಎಂದು ಕಾಡವಾದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿಜಯಕುಮಾರ ಹೇಳಿದರು. ಅವರು ಕಾಡವಾದ ಗ್ರಾಮ ಪಂಚಾಯತ್ ವತಿಯಿಂದ ಕಾಡವಾದನಲ್ಲಿ ಹಮ್ಮಿಕೊಂಡಿದ್ದ ಬಾಲ್ಯ ವಿವಾಹ ತಡೆ ಅರಿವು



ಉದಯವಾಹಿನಿ ಚಿತ್ರ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಆಧುನಿಕ ಯುಗದಲ್ಲೂ ಬಾಲ್ಯ ವಿವಾಹ ಎಂಬ ಪಿಡುಗು ಸಮಾಜವನ್ನು ಕಾಡುತ್ತಿರುವುದು ದುರದೃಷ್ಟಕರ. ಇದನ್ನು ತಡೆಗಟ್ಟುವ ನಿಟ್ಟನಲ್ಲಿ ಕಾಡುವಾದ್ ಗ್ರಾಮ ಪಂಚಾಯತ್ ವತಿಯಿಂದ ಬಾಲ್ಯ ವಿವಾಹ ತಡೆ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಸದಸ್ಯ ಮನ್ಮತ್ ಮೀನಕೇರಾ ಮಾತನಾಡಿ, ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಬಾಲ್ಯ ವಿವಾಹವು ಕಾನೂನುಬಾಹಿರ ಮಾತ್ರವಲ್ಲದೆ, ಒಂದು ಮಗುವಿನ ಶಿಕ್ಷಣ ಮತ್ತು ಆರೋಗ್ಯದ ಹಕ್ಕನ್ನು ಕಸಿದುಕೊಳ್ಳುತ್ತದೆ. ಸಮಾಜದಲ್ಲಿ ಇಂತಹ ಘಟನೆಗಳು ಕಂಡುಬಂದಲ್ಲಿ ತಕ್ಷಣವೇ 1098 ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕು. ಪ್ರತಿಯೊಬ್ಬ ನಾಗರಿಕನೂ ಜಾಗೃತರಾದಾಗ ಮಾತ್ರ ಈ ಪಿಡುಗನ್ನು ಬೇರುಸಹಿತ ಕಿತ್ತೆಸೆಯಲು ಸಾಧ್ಯ ಎಂದರು.

# ಬೀಚ್ ಪ್ರವಾಸಿಗರಿಗೆ ಸಂಚಾರದ ಸಂಕಷ್ಟ: ಸವಾರರು ಅಸಮಾಧಾನ

### ವಾರಾಂತ್ಯ ಹಾಗೂ ರಜಾದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಪ್ರವಾಸಿಗರು ಗಂಟೆಗಳ ಕಾಲ ಟ್ರಾಫಿಕ್‌ನಲ್ಲಿ ಸಿಲುಕುವ ಪರಿಸ್ಥಿತಿ

• ಉದಯವಾಹಿನಿ ಪಡುಬಿದ್ರಿ

ಕಾಪು ಮತ್ತು ಪಡುಬಿದ್ರಿ, ಬೀಚ್‌ಗೆ ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಿದ್ದು ರಸ್ತೆ ಸಂಪರ್ಕದ ಸಮಸ್ಯೆ ಸವಾಲಾಗಿ ಪರಿಣಮಿಸಿದೆ. ಕಾಪು ಬೀಚ್ ಉಡುಪಿ ಜಿಲ್ಲೆಯ ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಒಂದಾಗಿದ್ದು ಸುಂದರ ಸಮುದ್ರ, ತೀರ ಹಾಗೂ ದೀಪಸ್ತಂಭ ನೋಡಲು ದೇಶ ವಿದೇಶಗಳಿಂದ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದ್ದರೂ ರಸ್ತೆ ಸೌಕರ್ಯ ಸಮರ್ಪಕವಾಗಿಲ್ಲ ಎಂಬ ಆರೋಪ ಕೇಳಿಬಂದಿದೆ.

**ದೇಶ ವಿದೇಶಗಳಿಂದ ಪ್ರವಾಸಿಗರು ಭೇಟಿ**

ಬೀಚ್‌ಗೆ ಸಂಪರ್ಕಿಸುವ ರಸ್ತೆಗಳು ಅತ್ಯಂತ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ತೀವ್ರ, ತೊಂದರೆ ಉಂಟಾಗುತ್ತಿದೆ. ವಾರಾಂತ್ಯ, ರಜಾದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಪ್ರವಾಸಿಗರು ಗಂಟೆಗಳ ಕಾಲ ಟ್ರಾಫಿಕ್‌ನಲ್ಲಿ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಪಾದಚಾರಿಗಳಿಗೂ ಸುರಕ್ಷಿತವಾಗಿ ಸಂಚರಿಸುವುದು ಕಷ್ಟಕರವಾಗಿದೆ. ಕಾಪು ಬೀಚ್‌ಗೆ ರಾ. ಹೆದ್ದಾರಿ 66ರ ಮೂಲಕ ಕೊಪ್ಪಲಂಗಡಿ–ಮಾರಿಗುಡಿ ರಸ್ತೆ ಹಾಗೂ ಕೈಪುಂಜಾಲು ಮೂಲಕ ಬೀಚ್ ಸಂಪರ್ಕಿಸಲು



ಉದಯವಾಹಿನಿ ಚಿತ್ರ

ರಸ್ತೆ ವ್ಯವಸ್ಥೆ ಇದೆ. ಕೊಪ್ಪಲಂಗಡಿ ಮೂಲಕ ಸಾಗುವ ರಸ್ತೆ ಸ್ವಲ್ಪ ಮಟ್ಟಿಗೆ ಅಗಲವಾಗಿದ್ದರೂ, ಮಾರಿಗುಡಿ ಹಾಗೂ ಕೈಪುಂಜಾಲು ಮೂಲಕ ಸಾಗುವ ರಸ್ತೆ ತೀರಾ ಕಿರಿದಾಗಿದೆ. ಎರಡು ವಾಹನಗಳು ಎದುರುಬಂದರೆ ಸಂಚರಿಸುವುದೇ ಕಷ್ಟಕರವಾಗುತ್ತಿದೆ ಎಂದು ವಾಹನ ಸವಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬ್ಲೂಫ್ಲ್ಯಾಗ್ ಬೀಚ್‌ನಿಂದ ನಡಿಪಟ್ಟವರೆಗಿನ ಸುಮಾರು 800 ಮೀಟರ್ ರಸ್ತೆಯನ್ನು ದ್ವಿಪಥ ಕಾಂಕ್ರೀಟ್ ರಸ್ತೆಯಾಗಿ ಅಭಿವೃದ್ಧಿಪಡಿಸಿದ್ದರೂ ಪ್ರಮುಖ ಸಂಪರ್ಕ ರಸ್ತೆ ಇನ್ನೂ ಕಿರಿದಾಗಿದೆ. ರಸ್ತೆ ಬದಿಯಲ್ಲೇ ವಾಹನಗಳನ್ನು ನಿಲ್ಲಿಸುತ್ತಿದ್ದು ಟ್ರಾಫಿಕ್ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತಿದೆ. ಪಾದಚಾರಿಗಳಿಗೆ ಪ್ರತ್ಯೇಕ ದಾರಿ ಇಲ್ಲದಿರುವುದರಿಂದ ಅಪಘಾತ ಭೀತಿ ಹೆಚ್ಚಾಗಿದೆ.

ತುರ್ತು ಪರಿಸ್ಥಿತಿಗಳಲ್ಲಿ ಅಂಬುಲೆನ್ಸ್ ಹಾಗೂ ಅಗ್ನಿಶಾಮಕ ವಾಹನಗಳ ಸಂಚಾರಕ್ಕೂ ಅಡಚಣೆ ಉಂಟಾಗುತ್ತಿದೆ ಎಂದು ಸ್ಥಳೀಯರಾದ ಸಂತೋಷ್ ಹೇಳುತ್ತಾರೆ. ಪಡುಬಿದ್ರಿ, ಬೀಡು ಪ್ರದೇಶದಿಂದ ಪಡುಹಿಟ್ಟು ಜಾರಂದಾಯ ದೈವಸ್ಥಾನ ಮಾರ್ಗವಾಗಿ ಸುಮಾರು 2.5 ಕಿಲೋಮೀಟರ್ ಉದ್ದದ ಹೊಸ ರಸ್ತೆ ನಿರ್ಮಿಸಿ ಬೀಚ್ ಸಂಪರ್ಕ ಕಲ್ಪಿಸುವ ಬೇಡಿಕೆಯೂ ಕೇಳಿಬಂದಿದೆ.

**ಏಕಮುಖ**
**ವಾಹನ ಸಂಚಾರಕ್ಕೆ ಮಾತ್ರ ಸೀಮಿತ**

**ಪಡುಬಿದ್ರಿ, ಬೀಚ್ ಕೂಡ ಪ್ರಮುಖ ಪ್ರವಾಸಿ ತಾಣವಾಗಿ ಗುರುತಿಸಿಕೊಂಡಿದೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಗೊಂಡು ಅಂತರರಾಷ್ಟ್ರೀಯ ಮಟ್ಟದ ಬ್ಲೂಫ್ಲ್ಯಾಗ್ ಮಾನ್ಯತೆ ಪಡೆದಿರುವ ಪಡುಬಿದ್ರಿ, ಎಂಡ್ ಪಾಯಿಂಟ್ ಬೀಚ್‌ಗೆ ರಾಜ್ಯ ಹಾಗೂ ಹೊರರಾಜ್ಯಗಳಿಂದ ಸಾವಿರಾರು ಪ್ರವಾಸಿಗರು ಆಗಮಿಸುತ್ತಿದ್ದಾರೆ. ಆದರೆ ರಾಷ್ಟ್ರೀಯ ಹೆದ್ದಾರಿ 66ರ ಪಡುಬಿದ್ರಿ, ಪೇಟೆಯಿಂದ ಬೀಚ್‌ಗೆ ಸಂಪರ್ಕಿಸುವ ಸುಮಾರು 3.5 ಕಿಲೋಮೀಟರ್ ರಸ್ತೆ ಹಾಗೂ ಕಾಮಿನಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಹಳೆಯ ಸೇತುವೆ ಇಕ್ಕಟ್ಟಾಗಿದ್ದು, ಏಕಮುಖ ವಾಹನ ಸಂಚಾರಕ್ಕೆ ಮಾತ್ರ ಸೀಮಿತವಾಗಿದೆ. ಇದರಿಂದ ವಾಗಾಂತ ಹಾಗೂ ರಜಾದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಸಂಚಾರ ಅಸ್ತವಷವಾಗುತ್ತಿದೆ.**

# ಅಮೆರಿಕದ ಮಧ್ಯಪ್ರಾಚ್ಯ ನೆಲೆಗಳ ಮೇಲೆ ದಾಳಿ: ಇರಾನ್ ಎಚ್ಚರಿಕೆ



**ಟೆಹರಾನ್:** ತನ್ನ ಟ್ಯಾಂಕರ್‌ಗಳ ಮೇಲೆ ಅಮೆರಿಕ ಗುಂಡಿನ ದಾಳಿ ನಡೆಸಿರುವುದನ್ನು ತೀವ್ರವಾಗಿ ಖಂಡಿಸಿರುವ ಇರಾನ್, ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕದ ನೆಲೆಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಸಿದೆ. ಈ ಕುರಿತು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ. ಇದರಿಂದಾಗಿ ಉದ್ವಿಗ್ನತೆ ಹೆಚ್ಚಾಗಿದೆ. 'ಇರಾನ್‌ನ ಟ್ಯಾಂಕರ್‌ಗಳು ಮತ್ತು ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಿದರೆ ಅದಕ್ಕೆ ಪ್ರತಿಯಾಗಿ ಅಮೆರಿಕದ ನೆಲೆಗಳನ್ನು ಗುರಿಯಾಗಿಸಿ ಭೀಕರ ದಾಳಿ ನಡೆಸಬೇಕಾಗುತ್ತದೆ' ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಬೆದರಿಕೆ ಹಾಕಿದೆ.

ಒಮಾನ್ ಕೊಲ್ಲಿಯಲ್ಲಿ ಇರಾನ್ ಧ್ವಜ ಹೊಂದಿದ್ದ ಎರಡು ಟ್ಯಾಂಕರ್‌ಗಳ ಮೇಲೆ ಅಮೆರಿಕ ದಾಳಿ ನಡೆಸಿತ್ತು. ಮತ್ತೊಂದೆಡೆ ಅಮೆರಿಕ ಮುಂದಿಟ್ಟಿರುವ ಹೊಸ ಪ್ರಸ್ತಾವದ ಕುರಿತು ಇರಾನ್‌ನಿಂದ ಪ್ರತಿಕ್ರಿಯೆಗಾಗಿ ಕಾಯುತ್ತಿದೆ. 'ಇರಾನ್‌ನ ಉತ್ತರಕ್ಕಾಗಿ ಕಾಯುತ್ತಿದ್ದೇವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದಾರೆ. ಹೊರ್ಮುಜ್ ಜಲಸಂಧಿಯಲ್ಲಿ ತೈಲ ಸಾಗಣೆಗೆ ಇರಾನ್ ನಿಯಂತ್ರಣ ಹೇರಿರುವುದು ಒಪ್ಪಲು ಸಾಧ್ಯವಿಲ್ಲ ಎಂದು ಅಮೆರಿಕ ಹೇಳಿದೆ. ಆದರೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಟರ್ಕಿಯ ವಿದೇಶಾಂಗ ಸಚಿವ ಹಕಾದ್ ಫಿದಾನ್ ಜೊತೆಗಿನ ಮಾತುಕತೆ ವೇಳೆ ಅಮೆರಿಕದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿದ್ದಾರೆ. ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕ ಪಡೆಗಳು ನಡೆಸಿರುವ ಸಂಘರ್ಷ, ನಿರಂತರ ಕದನ ವಿರಾಮ ಉಲ್ಲಂಘನೆಯಿಂದ ರಾಜತಾಂತ್ರಿಕ ಮಾರ್ಗದ ಕುರಿತಂತೆ ಅಮೆರಿಕ ಹೊಂದಿರುವ ಉದ್ದೇಶ ಹಾಗೂ ಗಂಭೀರತೆಯ ಕುರಿತು ಅನುಮಾನ ಮೂಡಿಸಿದೆ' ಎಂದು ಅರಾಘ್ಚಿ ತಿಳಿಸಿದ್ದಾರೆ ಎಂದು 'ಐಎಸ್‌ಎನ್‌ಎ' ಸುದ್ದಿಸಂಸ್ಥೆ ವರದಿ ಮಾಡಿದೆ.

# ಕೇರಳಂ ಸಿಎಂ ಆಯ್ಕೆ ಕಗ್ಗಂಟು

## ಕಾಂಗ್ರೆಸ್ ವಿರುದ್ಧ ತೀವ್ರಗೊಳ್ಳುತ್ತಿದೆ ಆಕ್ರೋಶ, ಸಾರ್ವಜನಿಕರಲ್ಲೂ ಆಕ್ರೋಶಕ್ಕೆ ಕಾರಣ

**ತಿರುವನಂತಪುರಂ:** ಕೇರಳಂ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿ ಆರು ದಿನಗಳು ಕಳೆದರೂ, ಸಿಎಂ ಯಾರಾಗಲಿದ್ದಾರೆ ಎಂಬುದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಇನ್ನೂ ಅಂತಿಮಗೊಳಿಸಿಲ್ಲ. ಇದು, ಕಾರ್ಯಕರ್ತರು, ಮಿತ್ರಪಕ್ಷಗಳು ಮಾತ್ರವಲ್ಲದೆ, ಸಾರ್ವಜನಿಕರಲ್ಲೂ ಆಕ್ರೋಶಕ್ಕೆ ಕಾರಣವಾಗಿದೆ. 140 ಸದಸ್ಯ ಬಲದ ಕೇರಳಂ ವಿಧಾನಸಭಾ ಚುನಾವಣೆಯ ಫಲಿತಾಂಶ ಮೇ 4ರಂದೇ ಪ್ರಕಟವಾಗಿದೆ. ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) 102 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಕಾಂಗ್ರೆಸ್ 63 ಕ್ಷೇತ್ರಗಳಲ್ಲಿ ಗೆಲುವು ಕಂಡಿದೆ. ಆದಾಗ್ಯೂ, ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲು ಈವರೆಗೆ ಸಾಧ್ಯವಾಗಿಲ್ಲ.

ರಾಜ್ಯದಲ್ಲಿ ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದು ಭಾರಿ ಕುತೂಹಲ ಕೆರಳಿಸಿದೆ. ಆದರೆ, ಈ ವಿಚಾರವಾಗಿ ಆಗುತ್ತಿರುವ ವಿಳಂಬಕ್ಕೆ ಎಐಸಿಸಿ ನಾಯಕರೇ (ಹೈಕಮಾಂಡ್) ಕಾರಣ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ದಟ್ಟವಾಗಿದೆ. ಕಳೆದ ಐದು ವರ್ಷಗಳಿಂದ ಹಾಗೂ ಚುನಾವಣೆಯಲ್ಲಿ ಯುಡಿಎಫ್ ಅನ್ನು ಮುನ್ನಡೆಸಿರುವ ವಿ.ಡಿ. ಸತೀಶನ್ ಅವರು ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ನಿರೀಕ್ಷೆ ಇತ್ತು. ಹಿಂದಿನ ಸರ್ಕಾರದ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿದ್ದ ಅವರಿಗೆ, ಮಿತ್ರ ಪಕ್ಷಗಳ ಬೆಂಬಲವೂ ಇದೆ. ಈ ನಡುವೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಹಿರಿಯ ನಾಯಕ ರಮೇಶ್ ಚೆನ್ನಿತಲ ಅವರು ಪೈಪೋಟಿಗೆ ಇಳಿದಿರುವುದು ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ವೇಣುಗೋಪಾಲ್ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿದರೆ, ಕೇರಳಂ ಕಾಂಗ್ರೆಸ್ ಸಂಸದರ ಅಸಮಾಧಾನ ಸ್ಫೋಟಗೊಳ್ಳಬಹುದು. ಸಂಸದರು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂದು ಸೂಚಿಸಿದ್ದ ಎಐಸಿಸಿ ನಾಯಕರು, ಚುನಾವಣೆಯಲ್ಲಿ ಸ್ಪರ್ಧಿಸುವ ನಿಟ್ಟಿನಲ್ಲಿ ಹಲವರು ಮಾಡಿದ್ದ ಮನವಿಯನ್ನು ತಿರಸ್ಕರಿಸಿದ್ದರು. ವೇಣುಗೋಪಾಲ್ ಮತ್ತು ಸತೀಶನ್ ಅವರು ಪಟ್ಟು ಬಿಗಿಗೊಳಿಸುತ್ತಿರುವುದರ ನಡುವೆ ರಮೇಶ್ ಚೆನ್ನಿತಲ ಅವರಿಗೆ ಲಾಭವಾದರೂ ಅಚ್ಚರಿಯೇನಿಲ್ಲ ಎಂಬುದಾಗಿ ಕಾಂಗ್ರೆಸ್ ಮೂಲಗಳು ತಿಳಿಸಿವೆ ಚೆನ್ನಿತಲ ಅವರು, ಈ ಹಿಂದೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದರು.



**ಬಿಜೆಪಿ ಪಾಲಾಗುವ ಸಾಧ್ಯತೆ**

**ಕಾಂಗ್ರೆಸ್ ಶಾಸಕರ ಪೈಕಿ ಹೆಚ್ಚಿನವರು ವೇಣುಗೋಪಾಲ್‌ಗೆ ಬೆಂಬಲ ನೀಡುತ್ತಿದ್ದಾರೆ. ಒಂದು ವೇಳೆ ಅವರೇನಾದರೂ ವಿಧಾನಸಭೆ ಪ್ರವೇಶಿಸುವ ಸಲುವಾಗಿ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದರೆ, ಅವರು ಪ್ರತಿನಿಧಿಸುತ್ತಿರುವ ಅಲಪ್ಪುಳ ಕ್ಷೇತ್ರವು ಬಿಜೆಪಿ ಪಾಲಾಗುವ ಸಾಧ್ಯತೆ ಇದೆ. ಇದರಿಂದಾಗಿ, ವೇಣುಗೋಪಾಲ್ ಅವರಿಗೆ ಹಿನ್ನಡೆಯಾಗಲಿದೆ ಎಂಬುದಾಗಿ ಮಿತ್ರಪಕ್ಷಗಳ ನಾಯಕರು ಅಂದಾಜಿಸಿದ್ದಾರೆ.**

**ಪಕ್ಷಕ್ಕೆ ಈಗಾಗಲೇ ಸಾಕಷ್ಟು ಹಾನಿ**

**ಸದ್ಯ ಸಿಎಂ ಗಾದಿ ರೇಸ್‌ನಲ್ಲಿರುವ ಮೂವರು ನಾಯಕರು ಮಾಡಿಕೊಂಡಿರುವ ಮನವಿಯಂತೆ, ಅವರ ಬೆಂಬಲಿಗರು ಪೋಸ್ಟರ್ ಅಭಿಯಾನ ನಡೆಸುವುದನ್ನು ಶನಿವಾರವೇ ನಿಲ್ಲಿಸಿದ್ದಾರೆ. ಆದರೆ, ಸಾಮಾಜಿಕ ವಲಯದಲ್ಲಿ ಆಕ್ರೋಶ ತೀವ್ರಗೊಳ್ಳುತ್ತಿದೆ. ಕಾಂಗ್ರೆಸ್ ವಿರುದ್ಧ ಟೀಕೆಗಳು ಕೇಳಿಬರುತ್ತಿವೆ. ಪಕ್ಷಕ್ಕೆ ಈಗಾಗಲೇ ಸಾಕಷ್ಟು ಹಾನಿಯಾಗಿದೆ. ಯುಡಿಎಫ್ ಸಾಧಿಸಿರುವ ಐತಿಹಾಸಿಕ ಗೆಲುವಿನ ಪ್ರಭೆ ಪಕ್ಷದ ನಾಯಕರ ಕಚ್ಚಾಟದಿಂದಾಗಿ ಕುಂದಿದೆ. ಮುಖ್ಯಮಂತ್ರಿ ಆಯ್ಕೆ ವಿಳಂಬ ಮುಂದುವರಿದರೆ, ಇನ್ನಷ್ಟು ಹಾನಿಯಾಗುತ್ತದೆ ಎಂದು ಸ್ಥಳೀಯ ಕಾಂಗ್ರೆಸ್ ನಾಯಕರು ಅಭಿಪ್ರಾಯಪಟ್ಟಿದ್ದಾರೆ.**

## ಮಿನಿ ನ್ಯೂಸ್

### ಯೋಗಿ ಸರ್ಕಾರಕ್ಕೆ ಆರು ಹೊಸ ಸಚಿವರ ಸೇರ್ಪಡೆ

**ಲಖನೌ:** ಉತ್ತರ ಪ್ರದೇಶದ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ಅವರ ಸಚಿವ ಸಂಪುಟವನ್ನು ವಿಸ್ತರಿಸಲಾಗಿದ್ದು, ಒಟ್ಟು ಆರು ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಇಬ್ಬರು ಶಾಸಕರು ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ನೀಡಿದ್ದರೆ, ನಾಲ್ವರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಲಾಗಿದೆ. ಇದಲ್ಲದೇ ಇಬ್ಬರು ರಾಜ್ಯ ಸಚಿವರಿಗೆ ಸ್ವತಂತ್ರ ಖಾತೆ ನೀಡಲಾಗಿದೆ.

ಜನ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಆನಂದಿಬೆನ್ ಪಟೇಲ್ ಅವರು ನೂತನ ಸಚಿವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಭೂಪೇಂದ್ರ ಚೌಧರಿ, ಎಸ್.ಪಿ ಮನೋಜ್ ಪಾಂಡೆ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ನಡುವೆ, ಈ ಹಿಂದೆ ರಾಜ್ಯ ಸಚಿವರಾಗಿದ್ದ ಅಜಿತ್ ಪಾಲ್ ಸಿಂಗ್, ಸೋಮೇಂದ್ರ ತೋಮರ್ ಅವರಿಗೆ ಬಡ್ತಿ ನೀಡಲಾಗಿದ್ದು, ಸ್ವತಂತ್ರ ನಿರ್ವಹಣೆಯ ರಾಜ್ಯ ಸಚಿವರಾಗಿ ಜವಾಬ್ದಾರಿ ನೀಡಲಾಗಿದೆ. ಕೃಷ್ಣ ಪಾಸ್ವಾನ್, ಸುರೇಂದ್ರತ ದಿಲೆರ್, ಹಂಸರಾಜ್ ವಿಶ್ವಕರ್ಮ, ಕೈಲಾಶ್ ರಜಪೂತ್‌ರಾಜ್ಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಸಚಿವರಾದ ಅಜಿತ್ ಪಾಲ್ ಸಿಂಗ್ ಮತ್ತು ಸೋಮೇಂದ್ರ ತೋಮರ್ ಅವರಿಗೆ ಸ್ವತಂತ್ರ ಖಾತೆಗಳನ್ನು ನೀಡಲಾಗಿದೆ.

2024ರ ಮಾರ್ಚ್‌ನಲ್ಲಿ ಯೋಗಿ ಸರ್ಕಾರದ ಮೊದಲ ಸಂಪುಟ ವಿಸ್ತರಣೆ ನಡೆದಿತ್ತು. ಆಗ ಮೈತ್ರಿಕೂಟದ ಪಾಲುದಾರ ಪಕ್ಷಗಳಾದ ಎಸ್‌ಬಿಎಸ್‌ಪಿ ಮುಖ್ಯಸ್ಥ ಓಂ ಪ್ರಕಾಶ್ ರಾಜ್‌ಭರ್, ಆರ್‌ಎಲ್‌ಡಿಯ ಅನಿಲ್ ಕುಮಾರ್, ಸುನಿಲ್ ಕುಮಾರ್ ಶರ್ಮಾ, ದಾರಾ ಸಿಂಗ್ ಚೌಹಾಣ್‌ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

### ಹಣ ಅಕ್ರಮ ವರ್ಗಾವಣೆ ಪ್ರಕರಣ: ಪಂಜಾಬ್ ಸಚಿವ ಅರೋರಾ 7 ದಿನ ಇ.ಡಿ ವಶಕ್ಕೆ

**ಗುರುಗ್ರಾಮ:** ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಲಾಗಿರುವ ಪಂಜಾಬ್‌ನ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಅವರನ್ನು ಏಳು ದಿನ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ಒಪ್ಪಿಸಿ ಗುರುಗ್ರಾಮದ ನ್ಯಾಯಾಲಯ ಆದೇಶ ಹೊರಡಿಸಿದೆ. ಜಿಎಸ್‌ಟಿ ವಂಚನೆ ಪ್ರಕರಣದಲ್ಲಿ 62 ವರ್ಷದ ಅರೋರಾ ಅವರನ್ನು ಶನಿವಾರ ಸಂಜೆ ಚಂಡೀಗಢದ ಅಧಿಕೃತ ನಿವಾಸದಲ್ಲಿ ಇ.ಡಿ ಅಧಿಕಾರಿಗಳು ಬಂಧಿಸಿದ್ದರು.

ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಅರೋರಾ ಅವರನ್ನು ಇ.ಡಿ ಅಧಿಕಾರಿಗಳು ಚಂಡೀಗಢದಿಂದ ರಸ್ತೆಯ ಮೂಲಕ ಗುರುಗ್ರಾಮಕ್ಕೆ ಕರೆತಂದಿದ್ದರು.

ಸಚಿವರ ಪರ ಪ್ರತಿಕ್ರಿಯಿಸಿದ ವಕೀಲರು, ಮೇ 5ರಂದು ಪ್ರಕರಣ ದಾಖಲಿಸಿ ಮೇ 9ರಂದು ಅರೋರಾ ಅವರನ್ನು ಬಂಧಿಸಲಾಗಿದೆ. ಇದು 'ರಾಜಕೀಯ ಪ್ರೇರಿತ' ಎಂದು ದೂರಿದ್ದಾರೆ.

100 ಕೋಟಿಗೂ ಹೆಚ್ಚು ಮೊತ್ತದ ಮೊಬೈಲ್‌ಗಳ ಖರೀದಿಯಲ್ಲಿ ನಕಲಿ ಜಿಎಸ್‌ಟಿ ಬಿಲ್ ಸೃಷ್ಟಿಸಿ ದುಬೈನಿಂದ ಭಾರತಕ್ಕೆ ಅಕ್ರಮವಾಗಿ ಹಣ ವರ್ಗಾಯಿಸಲಾಗಿದೆ ಎಂದು ಇ.ಡಿ ಆರೋಪಿಸಿತ್ತು ಅರೋರಾ ಅವರಿಗೆ ಸಂಬಂಧಿಸಿದ ಗುರುಗ್ರಾಮದ ಉದ್ಯೋಗ್ ವಿಹಾರದಲ್ಲಿರುವ ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್ ಕಂಪನಿಯ ಕಚೇರಿಯಲ್ಲೂ ಇ.ಡಿ ಶೋಧ ನಡೆಸಿತ್ತು. ಇ.ಡಿ ಕ್ರಮವನ್ನು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಆಮ್ ಆದ್ಮ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಖಂಡಿಸಿದ್ದಾರೆ. ಕೇಂದ್ರ ಸರ್ಕಾರವು ಇ.ಡಿಯನ್ನು ಅಸ್ತ್ರವಾಗಿ ಬಳಸಿಕೊಂಡು ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸುತ್ತಿದೆ ಎಂದು ಆರೋಪಿಸಿದ್ದಾರೆ.

### ತಾಯಿಯೇ ನಮ್ಮ ಗುರು, ಮೊದಲ ಗೆಳತಿ: ಅಮ್ಮನ ಬಗ್ಗೆ ರಾಹುಲ್ ಗಾಂಧಿ ಭಾವುಕ ಪೋಸ್ಟ್

**ನವದೆಹಲಿ:** ಭಾನುವಾರ ವಿಶ್ವ ತಾಯಂದಿರ ದಿನ. ತಾಯಂದಿರ ದಿನದ ಅಂಗವಾಗಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಜಗತ್ತಿನ ಎಲ್ಲಾ ತಾಯಂದಿರಿಗೆ ಗೌರವಪೂರ್ವಕ ನಮನ ಸಲ್ಲಿಸಿದ್ದಾರೆ. ತಾಯಿ ನಮ್ಮ ಪಾಲಿನ



ಮೊದಲ ಗುರು ಮತ್ತು ಮೊದಲ ಗೆಳತಿ ಎಂದು ಅವರು ಬಣ್ಣಿಸಿದ್ದಾರೆ. ಈ ಕುರಿತು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ತಾಯಿ ಎಂದರೆ ಮೃದುತ್ವ, ತ್ಯಾಗ, ಸಹಾನುಭೂತಿ ಮತ್ತು ಪ್ರೀತಿಯ ಸಾಕಾರಮೂರ್ತಿ. ಒಬ್ಬ ವ್ಯಕ್ತಿಯ ತಲೆಯ ಮೇಲೆ ತಾಯಿಯ ಕೈ ಇರುವುದು ಈ ಜಗತ್ತಿನಲ್ಲೇ ಅತಿ ದೊಡ್ಡ ಶಕ್ತಿಯ ಮೂಲವಾಗಿದೆ ಎಂದು ಭಾವನಾತ್ಮಕವಾಗಿ ಬರೆದುಕೊಂಡಿದ್ದಾರೆ. ಈ ಸಂದೇಶದೊಂದಿಗೆ ರಾಹುಲ್ ಗಾಂಧಿ ಅವರು ತಮ್ಮ ತಾಯಿ ಸೋನಿಯಾ ಗಾಂಧಿ ಅವರನ್ನು ಅಪ್ಪಿಕೊಂಡಿರುವ ಸುಂದರ ಭಾವಚಿತ್ರವನ್ನೂ ಹಂಚಿಕೊಂಡಿದ್ದಾರೆ.

ಈ ಪವಿತ್ರವಾದ ತಾಯಂದಿರ ದಿನದಂದು, ವಿಶ್ವದಾದ್ಯಂತ ಇರುವ ಎಲ್ಲಾ ತಾಯಂದಿರಿಗೆ ನಾನು ಗೌರವಗಳನ್ನು ಅರ್ಪಿಸುತ್ತೇನೆ ಎಂದು ರಾಹುಲ್ ಗಾಂಧಿ ತಿಳಿಸಿದ್ದಾರೆ. ಇನ್ನು, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಅವರೂ ತಾಯಂದಿರ ದಿನದ ಶುಭಾಶಯ ಕೋರಿದ್ದು, ತಾಯಿಯ ಪ್ರೀತಿಯೇ ನಮ್ಮ ಬದುಕಿನ ಮೊದಲ ಶಕ್ತಿಯಾಗಿದೆ' ಎಂದು ಹೇಳಿದ್ದಾರೆ.

# ಪಾಕಿಸ್ತಾನದಲ್ಲಿ ಉಗ್ರರ ಆತ್ಮಾಹುತಿ ಬಾಂಬ್ ದಾಳಿಗೆ 12 ಪೊಲೀಸರು ಬಲಿ



**ಇಸ್ಲಾಮಾಬಾದ್:** ಪಾಕಿಸ್ತಾನದ ಪ್ರಕ್ಷುಬ್ಧ ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದಲ್ಲಿ ಪೊಲೀಸ್ ಠಾಣೆಯ ಮೇಲೆ ನಡೆದ ಆತಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 12 ಪೊಲೀಸರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಬನ್ನು ಜಿಲ್ಲೆಯ ಫತೇಖೇಲ್ ಪೊಲೀಸ್ ಠಾಣೆ ಮೇಲೆ ಉಗ್ರರು ಆತಾಹುತಿ ದಾಳಿ ನಡೆಸಿದ್ದಾರೆ. ಈ ವೇಳೆ ಡಜನ್ ಗಟ್ಟಲೇ ದಾಳಿಕೋರರು ಚೆಕ್‌ಪಾಯಿಂಟ್ ಅನ್ನು ಸುತ್ತುವರೆದಿದ್ದರು. ಗುಂಡಿನ ಚಕಮಕಿಯೂ ನಡೆಯಿತು. ಸ್ಫೋಟದಿಂದ ಹಲವಾರು ಮನೆಗಳಿಗೆ ಭಾರೀ ಹಾನಿಯಾಗಿದೆ. ದಾಳಿಯಲ್ಲಿ ಕನಿಷ್ಠ ಮೂವರು ಪೊಲೀಸರು ಸಾವನ್ನಪ್ಪಿದ್ದು, ಹಲವರಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಉಗ್ರಗಾಮಿ ದಾಳಿಗಳು ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಗಡಿಯಲ್ಲಿ ಮತ್ತೆ ಹೋರಾಟವನ್ನು ಪ್ರಚೋದಿಸುವ ಸಾಮರ್ಥ್ಯವನ್ನು ಹೊಂದಿವೆ. ಫೆಬ್ರವರಿಯಲ್ಲಿ ಮಿತ್ರಪಕ್ಷಗಳಿಂದ ಶತ್ರುಗಳಾಗಿ ಬದಲಾದ ದೇಶಗಳ ನಡುವೆ ವರ್ಷಗಳಲ್ಲಿ ಅತ್ಯಂತ ಕೆಟ್ಟ ಹೋರಾಟ ಭುಗಿಲೆದ್ದಿತು, ಪಾಕಿಸ್ತಾನಿ ವಾಯುದಾಳಿಗಳು ಅಫ್ಘಾನಿಸ್ತಾನದೊಳಗೆ ನಡೆದವು ಎಂದು ಇಸ್ಲಾಮಾಬಾದ್ ಹೇಳಿಕೊಂಡಿದೆ.

ಖೈಬರ್ ಪಖ್ತುನ್ಖ್ವಾ ಮುಖ್ಯಮಂತ್ರಿ ಮುಹಮದ್ ಸೊಹೈಲ್ ಅಫ್ರಿದಿ ಫತೇಖೇಲ್ ಪೊಲೀಸ್ ಠಾಣೆಯ ಮೇಲಿನ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಿದ್ದಾರೆ.

ಗಾಯಾಳುಗಳಿಗೆ ಸಾಧ್ಯವಾದಷ್ಟು ಉತ್ತಮ ವೈದ್ಯಕೀಯ ಚಿಕಿತ್ಸೆಯನ್ನು ಖಚಿತಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ದಾಳಿಯಲ್ಲಿ ಗಾಯಗೊಂಡವರ ತ್ವರಿತ ಚೇತರಿಕೆಗಾಗಿ ಪ್ರಾರ್ಥಿಸಿದ್ದಾರೆ.

ಭಯೋತ್ಪಾದನೆಯ ವಿರುದ್ಧದ ಯುದ್ಧವು ಖೈಬರ್ ಪಖ್ತುನ್ಖ್ವಾ ಯುದ್ಧ ಮಾತ್ರವಲ್ಲ, ಇಡೀ ದೇಶದ ಯುದ್ಧವಾಗಿತ್ತು.

ಮುಚ್ಚಿದ ಬಾಗಿಲುಗಳ ಹಿಂದೆ ತೆಗೆದುಕೊಂಡ ನಿರ್ಧಾರಗಳು, ಹೇರಿದ ನೀತಿಗಳು ರಾಷ್ಟ್ರವನ್ನು ಅಭದ್ರತೆಯ ಜೌಗು ಪ್ರದೇಶಕ್ಕೆ ತಳ್ಳಿವೆ ಎಂದು ಅಫ್ರಿದಿ ಹೇಳಿದ್ದಾರೆ.

ಭಯೋತ್ಪಾದನೆಯಿಂದ ಬಾಧಿತರಾದ ಪ್ರತಿಯೊಂದು ಕುಟುಂಬದೊಂದಿಗೆ ಪ್ರಾಂತೀಯ ಸರ್ಕಾರ ನಿಲ್ಲುತ್ತದೆ, ಉಗ್ರಗಾಮಿತ್ವದ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾಗ ಖೈಬರ್ ಪಖ್ತುನ್ಖ್ವಾ ಪೊಲೀಸರು ಮಾಡಿದ ತ್ಯಾಗಗಳಿಗೆ ಗೌರವ ಸಲ್ಲಿಸುತ್ತದೆ ಎಂದಿದ್ದಾರೆ. ನಮ ಹುತಾತರ ತ್ಯಾಗಗಳನ್ನು ವ್ಯರ್ಥವಾಗಲು ನಾವು ಬಿಡುವುದಿಲ್ಲ, ಭಯೋತ್ಪಾದನೆಯ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವವರೆಗೆ ಪ್ರಯತ್ನಗಳನ್ನು ಮುಂದುವರಿಸುತ್ತೇವೆ ಎಂದು ಅಫ್ರಿದಿ ತಿಳಿಸಿದ್ದಾರೆ.

# ಅಸ್ಸಾಂನಲ್ಲಿ ಸರ್ಕಾರ ರಚನೆ: ಹಿಮಂತ ಬಿಸ್ವಾ ಶರ್ಮಾಗೆ ರಾಜ್ಯಪಾಲರಿಂದ ಆಹ್ವಾನ



**ಗುವಾಹಟಿ:** ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸಲು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಹಿಮಂತ ಬಿಸ್ವಾ ಶರ್ಮಾ ಅವರಿಗೆ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಭಾನುವಾರ ಆಹ್ವಾನ ನೀಡಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ನಾಯಕರು ರಾಜ್ಯಪಾಲ ಆಚಾರ್ಯ ಅವರನ್ನು ಲೋಕ ಭವನದಲ್ಲಿ ಭೇಟಿಯಾಗಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರು.

'ರಾಜ್ಯಪಾಲರು ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸಲು ಡಾ. ಹಿಮಂತ ಬಿಸ್ವಾ ಶರ್ಮಾ ಅವರಿಗೆ ಆಹ್ವಾನ ನೀಡಿದ್ದಾರೆ' ಎಂದು ಲೋಕ ಭವನ ಹೇಳಿಕೆ ಬಿಡುಗಡೆ ಮಾಡಿದೆ. ಮೈತ್ರಿಕೂಟದ ನಾಯಕರಾಗಿ ಆಯ್ಕೆಯಾಗಿರುವ ಶರ್ಮಾ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಶರ್ಮಾ ಮತ್ತು ಅವರ ಸಂಪುಟ ಸೇರುವ ಶಾಸಕರಿಗೆ ರಾಜ್ಯಪಾಲರು ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ ಎಂದೂ ಉಲ್ಲೇಖಿಸಲಾಗಿದೆ. ಪ್ರಮಾಣವಚನ ಸಮಾರಂಭವು ಮೇ 12ರಂದು ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಮತ್ತಿತರ ನಾಯಕರು ಪಾಲ್ಗೊಳ್ಳುವ ಸಾಧ್ಯತೆ ಇದೆ. (2016ರಲ್ಲಿ) ಸಿಎಂ ಸರ್ಬಾನಂದ ಸೋನವಾಲ್ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟ ಮೊದಲ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಿತ್ತು. ಅದಾದ ನಂತರ ಸತತ ಮೂರನೇ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಗುತ್ತಿದೆ.

2021ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿ ಗಾದಿಗೇರಿದ್ದ ಹಿಮಂತ ಬಿಸ್ವಾ ಶರ್ಮಾ, ರಾಜ್ಯದಲ್ಲಿ ಸತತ ಎರಡು ಅವಧಿಗೆ ಮುಖ್ಯಮಂತ್ರಿಯಾದ ಕಾಂಗ್ರೆಸ್ಸೇತರ ನಾಯಕ ಎನಿಸಿದ್ದಾರೆ. 126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 102 ಸ್ಥಾನಗಳನ್ನು ಗೆದ್ದುಕೊಂಡಿದೆ. ಇದರಲ್ಲಿ ಹೆಚ್ಚಿನ (82) ಸ್ಥಾನಗಳು ಬಿಜೆಪಿ ಪಾಲಾಗಿದ್ದು, ಅದರ ಮಿತ್ರ ಪಕ್ಷಗಳಾದ ಎಜಿಪಿ ಮತ್ತು ಬಿಪಿಎಫ್ ತಲಾ 10 ಕ್ಷೇತ್ರಗಳಲ್ಲಿ ಜಯ ಸಾಧಿಸಿವೆ. ಕಾಂಗ್ರೆಸ್ 19 ಕಡೆ ಗೆಲುವು ಸಾಧಿಸಿದೆ.

# 10 ಕೋಟಿ ಹಣಕ್ಕೆ ಬೇಡಿಕೆ: ಬಿಗ್‌ಬಾಸ್ ಒಟಿಟಿ-2 ವಿನ್ನರ್‌ಗೆ ಬೆದರಿಕೆ ಕರೆ



**ಗುರುಗ್ರಾಮ:** 10 ಕೋಟಿ ರೂಪಾಯಿ ನೀಡುವಂತೆ ವಿದೇಶದ ವಾಟ್ಸ್‌ಆ್ಯಪ್ ಸಂಖ್ಯೆಯಿಂದ ಹಿಂದಿಯ ಬಿಗ್‌ಬಾಸ್ ಒಟಿಟಿ-2 ವಿನ್ನರ್ ಎಲ್ವಿಶ್ ಯಾದವ್ ಅವರಿಗೆ ಬೆದರಿಕೆ ಸಂದೇಶ ಬಂದಿದೆ. ಸಂದೇಶ ಕಳುಹಿಸಿದವನು ತನ್ನನ್ನು ತಾನು ರಣದೀಪ್ ಮಲಿಕ್ ಎಂದು ಗುರುತಿಸಿಕೊಂಡಿದ್ದು, ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನೊಂದಿಗೆ ನಿಕಟ ಸಂಬಂಧ ಹೊಂದಿರುವುದಾಗಿ ಹೇಳಿಕೊಂಡಿದ್ದಾನೆ. ಎರಡು ದಿನಗಳಲ್ಲಿ ಹಣ ನೀಡದಿದ್ದರೆ ಗುಂಡಿಕ್ಕಿ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಎಲ್ವಿಶ್ ಕುಟುಂಬ ಸದಸ್ಯರು ಆತಂಕ ವ್ಯಕ್ತಪಡಿಸಿದ್ದಾರೆ. ಯಾದವ್ ದೂರಿನ ಮೇರೆಗೆ ಗುರುಗ್ರಾಮದ ಸೆಕ್ಟರ್ 56 ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದೇಶದ ವಾಟ್ಸ್‌ಆ್ಯಪ್ ಸಂಖ್ಯೆಯಿಂದ ಕರೆ ಬಂದಿತ್ತು. ಆಗ ನಾನು ರಿಸೀವ್ ಮಾಡಲಿಲ್ಲ. ಬಳಿಕ, ಅದೇ ಸಂಖ್ಯೆಯಿಂದ ಬೆದರಿಕೆ ಸಂದೇಶ ಬಂದಿದೆ ಎಂದು ಎಲ್ವಿಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಸಂದೇಶ ಕಳುಹಿಸಿದ ವ್ಯಕ್ತಿ ತನ್ನನ್ನು ರಣದೀಪ್ ಮಲಿಕ್ ಎಂದು ಪರಿಚಯಿಸಿಕೊಂಡಿದ್ದು, ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನೊಂದಿಗೆ ನಿಕಟ ಸಂಬಂಧ ಹೊಂದಿರುವುದಾಗಿ ಹೇಳಿಕೊಂಡಿದ್ದಾನೆ. ಎರಡು ದಿನಗಳಲ್ಲಿ 10 ಕೋಟಿ ಪಾವತಿಸುವಂತೆ ಬೇಡಿಕೆ ಇಟ್ಟಿದ್ದು, ಹಣ ಪಾವತಿಸದಿದ್ದರೆ ನನ್ನನ್ನು ಗುಂಡಿಕ್ಕಿ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಯಾದವ್ ತನ್ನ ದೂರಿನಲ್ಲಿ ತಿಳಿಸಿದ್ದಾರೆ.

ಅದೇ ಬೆದರಿಕೆ ಸಂದೇಶವನ್ನು ತಂದೆಯ ಮೊಬೈಲ್ ಸಂಖ್ಯೆಗೂ ಕಳುಹಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಪ್ರಕರಣವನ್ನು ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕರೆಯ ಮೂಲವನ್ನು ಪತ್ತೆ ಹಚ್ಚಲು ಪ್ರಯತ್ನಗಳು ನಡೆಯುತ್ತಿವೆ.

# ಗುಜರಾತ್ ಮಾದರಿ ನೆರವು ಕೇಳಿದ ತೆಲಂಗಾಣ ಸಿಎಂ; ನನ್ನೊಂದಿಗೆ ಕೈಜೋಡಿಸಿ



**ಹೈದರಾಬಾದ್:** ಗುಜರಾತ್ ಮಾದರಿ ನೆರವು ಕೇಳಿದ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿಗೆ 'ನನ್ನೊಂದಿಗೆ ಕೈಜೋಡಿಸಿ' ಎಂದು ಪ್ರಧಾನಿ ಮೋದಿಯವರು ಸಾರ್ವಜನಿಕ ಕಾರ್ಯಕ್ರಮದಲ್ಲಿ ಆಫರ್ ನೀಡಿದರು. ಈ ವೇಳೆ ರೆಡ್ಡಿ ಸೇರಿದಂತೆ ಇಡೀ ಸಭೆಯೇ ನಗೆಗಡಲಲ್ಲಿ ತೇಲಿತು. ಭಾನುವಾರ ತೆಲಂಗಾಣ ರಾಜ್ಯದ ವಿವಿಧೆಡೆ ಅಂದಾಜು 9,400 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರಧಾನಿ ಮೋದಿ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮೊದಲಿಗೆ ಮಾತನಾಡಿ ಸಿಎಂ ರೇವಂತ್ ರೆಡ್ಡಿ, ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ 10 ವರ್ಷಗಳಲ್ಲಿ ಆ ರಾಜ್ಯವು ಅಭಿವೃದ್ಧಿಯಲ್ಲಿ ದೇಶಕ್ಕೆ ಮಾದರಿಯಾಗಿ ಬೆಳೆಯಿತು. ಅದೇ ಮಾದರಿಯ ನೆರವು ತೆಲಂಗಾಣಕ್ಕೂ ಕೇಂದ್ರದಿಂದ ಸಿಗಬೇಕು ಎಂದು ಕೇಳಿಕೊಂಡರು.

ಇದಕ್ಕೆ ತಮ್ಮ ಭಾಷಣದಲ್ಲಿ ನಗುನಗುತ್ತಲೇ ಉತ್ತರಿಸಿದ ಮೋದಿ, ತೆಲಂಗಾಣಕ್ಕೆ ಗುಜರಾತ್ ಮಾದರಿಯಲ್ಲೇ ಲಾಭವನ್ನು ನೀಡಲು ನಾವು ಸಿದ್ಧರಿದ್ದೇವೆ. ಆದರೆ, ಹಾಗೆ ಮಾಡಿದರೆ ಪ್ರಸ್ತುತ ಕೇಂದ್ರದಿಂದ ತೆಲಂಗಾಣ ಪಡೆಯುತ್ತಿರುವ ನೆರವಿನಲ್ಲಿ ಅರ್ಧದಷ್ಟನ್ನು ರಾಜ್ಯವು ಕಳೆದುಕೊಳ್ಳಬೇಕಾಗುತ್ತದೆ! ಮತ್ತು ನೀವು ಅಂದುಕೊಂಡ ಗುರಿಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ನೀವು ನನ್ನೊಂದಿಗೆ ಕೈಜೋಡಿಸುವುದು ಉತ್ತಮ, ಎಂದು ಮಾರ್ಮಿಕವಾಗಿ ನುಡಿದರು. ಮೋದಿಯವರ ಹಾಸ್ಯಮಿಶ್ರಿತವಾಗಿ ಪ್ರತಿಕ್ರಿಯೆ ಸಭಿಕರ ಗಮನ ಸೆಳೆಯಿತು. ಸಿಎಂ ಸೇರಿ ಎಲ್ಲರೂ ನಕ್ಕರು.

**ವಿಕಸಿತ ಭಾರತ ನಿರ್ಮಾಣದ ಗುರಿ:** 2047ರ ವೇಳೆಗೆ 'ವಿಕಸಿತ ಭಾರತ' ನಿರ್ಮಾಣದ ಗುರಿ ಹೊಂದಿರುವ ಕೇಂದ್ರ ಸರ್ಕಾರವು, ರಾಜ್ಯಗಳ ಅಭಿವೃದ್ಧಿಯನ್ನೇ ಬುನಾದಿಯನ್ನಾಗಿ ಮಾಡಿಕೊಂಡಿದೆ. ಈ ನಿಟ್ಟಿನಲ್ಲಿ ತೆಲಂಗಾಣದ ಕ್ಷಿಪ್ರ ಅಭಿವೃದ್ಧಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತನ್ನ ಸಂಪೂರ್ಣ ಬೆಂಬಲವನ್ನು ಮುಂದುವರಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಸರ್ಕಾರಗಳಿರುವುದು ಅತ್ಯಂತ ಸಹಜ ಪ್ರಕ್ರಿಯೆ. ಆದರೆ, ದೇಶದ ಸಮಗ್ರ ಅಭಿವೃದ್ಧಿಯಾಗಬೇಕಾದರೆ ರಾಜ್ಯಗಳ ಅಭಿವೃದ್ಧಿ ಅತಿಮುಖ್ಯವಾಗುತ್ತದೆ. 2047ರ ವೇಳೆಗೆ ವಿಕಸಿತ ಭಾರತವನ್ನು ಸಾಕಾರಗೊಳಿಸುವುದು ನನ್ನ ಹೆಬ್ಬಯಕೆಯಾಗಿದೆ, ಎಂದು ಪ್ರಧಾನಿ ನುಡಿದರು.

**ಹೊಸ ಯೋಜನೆಗಳಿಗೆ ಚಾಲನೆ:** ಜಹೀರಾಬಾದ್ ಕೈಗಾರಿಕಾ ಪಾರ್ಕ್, ಮಲ್ಕಾಪುರದಲ್ಲಿನ ಐಒಸಿ ಟರ್ಮಿನಲ್ ಮತ್ತು ಕಾಜಿಪೇಟೆ – ವಿಜಯವಾಡ ನಡುವಿನ ರೈಲ್ವೆ ಮಾರ್ಗದ ಮಲ್ಟಿ-ಟ್ರ್ಯಾಕಿಂಗ್ ಮುಂತಾದ ಬೃಹತ್ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದರು. ಈ ಯೋಜನೆಗಳು ತೆಲಂಗಾಣವನ್ನು ಪ್ರಮುಖ 'ಉತ್ಪಾದನಾ ಕೇಂದ್ರ' ವನ್ನಾಗಿ ಮಾಡುವ ಗುರಿಯನ್ನು ಹೊಂದಿವೆ. ಮೂಲಸೌಕರ್ಯಗಳ ಅಭಿವೃದ್ಧಿಯ ಜೊತೆಗೆ, ರಾಜ್ಯದ ಸಂಪರ್ಕ ವ್ಯವಸ್ಥೆ ಬಲಗೊಳ್ಳಲಿದ್ದು, ಸ್ಥಳೀಯವಾಗಿ ಭಾರಿ ಪ್ರಮಾಣದ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ಚುನಾವಣೆ ಸೋಲಿನ ಬೆನ್ನಲ್ಲೇ ಟಿಎಂಸಿ ಮೂವರು ವಕ್ತಾರರ ಅಮಾನತು



**ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸೋಲಿನ ಬಳಿಕ ಪಕ್ಷ ವಿರೋಧಿ ಹೇಳಿಕೆ ನೀಡಿದ ತೃಣಮೂಲ ಕಾಂಗ್ರೆಸ್‌ನ ಮೂವರು ವಕ್ತಾರರನ್ನು ಅಮಾನತು ಮಾಡಲಾಗಿದೆ.

ಪಕ್ಷದ ಶಿಸ್ತು ಉಲ್ಲಂಘಿಸಿದ ಆರೋಪದ ಮೇಲೆ ವಕ್ತಾರರಾದ ಕೊಹಿನೂರ್ ಮಜುಂದಾರ್, ರಿಜು ದತ್ತ ಮತ್ತು ಕಾರ್ತಿಕ್ ಘೋಷ್ ಅವರನ್ನು 6 ವರ್ಷಗಳ ಕಾಲ ಅಮಾನತುಗೊಳಿಸಲಾಗಿದೆ.

ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ, ನಾಯಕತ್ವ ಮತ್ತು ಪಕ್ಷದ ಚುನಾವಣಾ ಕಾರ್ಯತಂತ್ರವನ್ನು ಟೀಕಿಸಿದ ಐವರು ವಕ್ತಾರರಿಗೆ ಪಕ್ಷವು ಶೋಕಾಸ್ ನೋಟಿಸ್ ನೀಡಿತ್ತು.

ಅದಾದ ಕೆಲವು ದಿನಗಳ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಈ ಫಲಿತಾಂಶದಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆದ್ದಿದ್ದರೆ, ಟಿಎಂಸಿ 80 ಸ್ಥಾನಗಳಿಗೆ ಕುಸಿದಿದೆ.

ಪಕ್ಷದ ಶಿಸ್ತು ಸಮಿತಿಯ ಸದಸ್ಯರೂ ಆಗಿರುವ ಟಿಎಂಸಿ ಸಂಸದ ಡೆರೆಕ್ ಒ'ಬ್ರೇನ್ ಅವರು ನೋಟಿಸ್‌ಗಳನ್ನು ಜಾರಿ ಮಾಡಿದ್ದಾರೆ.


ಅಮಾನತುಗೊಂಡ ಮೂವರು ನಾಯಕರಲ್ಲದೆ, ಕೃಷ್ಣೇಂದು ಚೌಧರಿ ಮತ್ತು ಪಪಿಯಾ ಘೋಷ್ ಅವರಿಗೂ ನೋಟಿಸ್ ನೀಡಲಾಗಿದೆ.

ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರನ್ನು ಭೇಟಿ ಮಾಡಲು ಪಕ್ಷದ ನಾಯಕರು ಗಂಟೆಗಟ್ಟಲೆ ಕಾಯಬೇಕಾಗಿತ್ತು ಎಂದು ಮಜುಂದಾರ್ ಮಾತನಾಡಿದ್ದರು.

ಮಾಲ್ಡಾದ ಹಿರಿಯ ನಾಯಕರಾದ ಚೌಧರಿ ಅವರು ಡೈಮಂಡ್ ಹಾರ್ಬರ್ ಸಂಸದರ ಕಾರ್ಯವೈಖರಿಯನ್ನು ಟೀಕಿಸಿದ್ದರು.

ಏತನ್ಮಧ್ಯೆ, ದತ್ತಾ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಚುನಾವಣೋತ್ತರ ಹಿಂಸಾಚಾರವನ್ನು ನಿಗ್ರಹಿಸಲು ಬಿಜೆಪಿ ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ಶ್ಲಾಘಿಸಿದ್ದರು.

# ವಿಜಯ್ ಪ್ರಮಾಣ ವಚನದ ವೇಳೆ ನಾಡಗೀತೆಗೆ ಮೊದಲು ವಂದೇ ಮಾತರಂ ಗಾಯನ: ಸಿಪಿಐ ಆಕ್ಷೇಪ



**ಚೆನ್ನೈ:** ಟಿವಿಕೆ ಮುಖ್ಯಸ್ಥ, ನಟ ವಿಜಯ್ ಅವರು ಸಿಎಂಆಗಿ ಪ್ರಮಣವಚನ ಸ್ವೀಕರಿಸಿದ ಸಮಾರಂಭದಲ್ಲಿ ವಂದೇ ಮಾತರಂ ಹಾಡಿದ ಬಳಿಕ ನಾಡಗೀತೆ 'ತಮಿಳ್ ತಾಯ್ ವಾಳು' ಅನ್ನು ಹಾಡಿದ್ದಕ್ಕೆ ಟಿವಿಕೆ ಮಿತ್ರ ಪಕ್ಷ ಸಿಪಿಐ ಆಕ್ಷೇಪ ವ್ಯಕ್ತಪಡಿಸಿದೆ. ಸರ್ಕಾರಿ ಸಮಾರಂಭಗಳ ಶಿಷ್ಟಾಚಾರದಲ್ಲಿ ನಾಡಗೀತೆಗೆ ಪ್ರಮುಖ ಸ್ಥಾನ ನೀಡಬೇಕು ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಎಂ. ವೀರಪಾಂಡ್ಯನ್ ಒತ್ತಾಯಿಸಿದ್ದಾರೆ.

ಜೋಸೆಫ್ ಸಿ ವಿಜಯ್ ಅವರು ತಮಿಳುನಾಡಿನ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ ಸಮಾರಂಭದಲ್ಲಿ 'ವಂದೇ ಮಾತರಂ' ಅನ್ನು ಮೊದಲು, ನಂತರ ರಾಷ್ಟ್ರಗೀತೆ 'ಜನ ಗಣ ಮನ', ನಾಡ ಗೀತೆ ತಮಿಳ್ ತಾಯ್ ವಾಳು' ಅನ್ನು ಮೂರನೇ ಸ್ಥಾನದಲ್ಲಿ ಹಾಡಿಸಲಾಯಿತು. ಸಮಾರಂಭದಲ್ಲಿ ನಾಡಗೀತೆಗೆ ಮೂರನೇ ಸ್ಥಾನ ನೀಡಲಾಯಿತು. 'ವಂದೇ ಮಾತರಂ' ಮತ್ತು ರಾಷ್ಟ್ರಗೀತೆಗೆ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ನೀಡಲಾಗಿತ್ತು ಎಂದು ಅವರು ಹೇಳಿದ್ದಾರೆ. ತಮಿಳುನಾಡಿನಲ್ಲಿ ಸರ್ಕಾರಿ ಸಮಾರಂಭಗಳು ಸಾಂಪ್ರದಾಯಿಕವಾಗಿ ನಾಡಗೀತೆಯೊಂದಿಗೆ ಆರಂಭವಾಗಿ ರಾಷ್ಟ್ರಗೀತೆಯೊಂದಿಗೆ ಕೊನೆಗೊಳ್ಳುತ್ತವೆ ಎಂದು ಅವರು ಗಮನ ಹೇಳಿದರು.

ವಂದೇ ಮಾತರಂ ಗೀತೆಯು ನಿರ್ದಿಷ್ಟ ಪಂಥದ ಧಾರ್ಮಿಕ ಪಾತ್ರವನ್ನು ಹೊಂದಿರುವುದರಿಂದ ಅದನ್ನು ಸ್ವಾತಂತ್ರ್ಯ ಹೋರಾಟದ ಸಮಯದಲ್ಲೇ ರಾಷ್ಟ್ರಗೀತೆಯಾಗಿ ಪರಿಗಣಿಸಿರಲಿಲ್ಲ ಎಂದು ವೀರಪಾಂಡ್ಯನ್ ಹೇಳಿದ್ದಾರೆ.

ಲೋಕ ಭವನದ ನಿರ್ದೇಶನದ ಅಡಿಯಲ್ಲಿ ತಮಿಳುನಾಡು ಸರ್ಕಾರ ಆಯೋಜಿಸಿದ ಪ್ರಮಾಣವಚನ ಸಮಾರಂಭದ ಕಾರ್ಯಸೂಚಿಯಲ್ಲಿ ನಾಡಗೀತೆಯನ್ನು ಮೂರನೇ ಸ್ಥಾನದಲ್ಲಿ ಇರಿಸಿ, 'ವಂದೇ ಮಾತರಂ' ಗೆ ಪ್ರಥಮ ಸ್ಥಾನ ನೀಡಿದ ನಿರ್ಧಾರವು ಸಂಪ್ರದಾಯದ ಉಲ್ಲಂಘನೆಯಾಗಿದೆ' ಎಂದು ಅವರು ಆರೋಪಿಸಿದ್ದಾರೆ. ಈ ತಪ್ಪಿಗೆ ಕಾರಣರಾದ ಬಗ್ಗೆ ತಮಿಳುನಾಡು ಸರ್ಕಾರ ಜನರಿಗೆ ವಿವರಣೆಯನ್ನು ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

# 25,160 ಕೋಟಿ ವಿಮಾ ಮೊತ್ತ ಇತ್ಯರ್ಥ: ಸಚಿವೆ

## ಪಿಎಂಎಸ್‌ಬಿವೈ ಯೋಜನೆಯಲ್ಲಿ 1.84 ಲಕ್ಷ ಕುಟುಂಬಗಳಿಗೆ 3,660 ಕೋಟಿ ಮೌಲ್ಯದ ಕ್ಲೇಮ್ ಮಂಜೂರು

**ನವದೆಹಲಿ:** ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆಯಂತಹ ಜನಸುರಕ್ಷಾ ಯೋಜನೆಗಳು ಆರಂಭವಾದಾಗಿನಿಂದ ಇದುವರೆಗೆ 25,160 ಕೋಟಿ ಮೌಲ್ಯದ ಕ್ಲೇಮ್‌ಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ದುರ್ಬಲ ವರ್ಗದ ಜನರು ಸೇರಿದಂತೆ ಎಲ್ಲರಿಗೂ ಕೈಗೆಟುಕುವ ದರದಲ್ಲಿ ಆರ್ಥಿಕ ಭದ್ರತೆ ಕಲ್ಪಿಸಲು ಪಿಎಂಜೆಜೆಬಿವೈ, ಪಿಎಂಎಸ್‌ಬಿವೈ ಮತ್ತು ಅಟಲ್ ಪಿಂಚಣಿ ಯೋಜನೆಗೆ (ಎಪಿವೈ) 2015ರ ಮೇ 9ರಂದು ಚಾಲನೆ ನೀಡಿದ್ದರು. ಪ್ರಸ್ತುತ ಪಿಎಂಜೆಜೆಬಿವೈನಲ್ಲಿ 27 ಕೋಟಿಗೂ ಅಧಿಕ ಜನರು ನೋಂದಣಿ ಆಗಿದ್ದಾರೆ. ಪಿಎಂಎಸ್‌ಬಿವೈ ಅಡಿ 58 ಕೋಟಿ, ಅಟಲ್ ಪಿಂಚಣಿ ಯೋಜನೆಯಲ್ಲಿ 9 ಕೋಟಿ ಜನ ನೋಂದಣಿ ಮಾಡಿಕೊಂಡಿದ್ದಾರೆ.

ಪಿಎಂಜೆಜೆಬಿವೈ ಅಡಿ 10.7 ಲಕ್ಷಕ್ಕೂ ಅಧಿಕ ಕುಟುಂಬಗಳ 21,500 ಕೋಟಿ ಮೊತ್ತದ ಕ್ಲೇಮ್ ಇತ್ಯರ್ಥಪಡಿಸಲಾಗಿದೆ. ಪಿಎಂಎಸ್ ಬಿವೈ ಯೋಜನೆಯಲ್ಲಿ 1.84 ಲಕ್ಷ ಕುಟುಂಬಗಳಿಗೆ 3,660 ಕೋಟಿ ಮೌಲ್ಯದ ಕ್ಲೇಮ್ ಮಂಜೂರು ಮಾಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.



ಪಿಎಂಜೆಜೆಬಿವೈ ಜೀವ ವಿಮಾ ಯೋಜನೆಯಾಗಿದ್ದು, ಇದಕ್ಕೆ ವಾರ್ಷಿಕವಾಗಿ 436 ಕಂತು ಪಾವತಿಸಬೇಕು. 18ರಿಂದ 50 ವರ್ಷದವರೆಗಿನವರು ಈ ಯೋಜನೆಗೆ ಅರ್ಹರು.

ಚಂದಾದಾರರು ಮೃತಪಟ್ಟಾಗ ನಾಮನಿರ್ದೇಶಿತ ವ್ಯಕ್ತಿಗೆ 2 ಲಕ್ಷ ನೀಡಲಾಗುತ್ತದೆ. ಏಪ್ರಿಲ್ 29ರ ವೇಳೆಗೆ 12.72 ಕೋಟಿ ಮಹಿಳೆಯರು ಇದರಲ್ಲಿ ನೋಂದಣಿ ಆಗಿದ್ದಾರೆ.

ಪಿಎಂಎಸ್‌ಬಿವೈ ಯೋಜನೆಯ ವಾರ್ಷಿಕ ಪ್ರೀಮಿಯಂ 20. 18ರಿಂದ 70 ವರ್ಷದೊಳಗಿನವರು ಇದಕ್ಕೆ ಅರ್ಹರಾಗಿದ್ದು, ಅಪಘಾತದಿಂದ ಪಾಲಿಸಿದಾರರು ಮೃತಪಟ್ಟರೆ ಅಥವಾ ಸಂಪೂರ್ಣ ಅಂಗವೈಕಲ್ಯಕ್ಕೆ ಒಳಗಾದರೆ 2 ಲಕ್ಷ ಮತ್ತು ಭಾಗಶಃ ಅಂಗವೈಕಲ್ಯಕ್ಕೆಒಳಗಾದರೆ 1 ಲಕ್ಷ ಪರಿಹಾರ ನೀಡಲಾಗುತ್ತದೆ.

**ಆನ್‌ಲೈನ್ ಜನ್ ಸುರಕ್ಷಾ ಪೋರ್ಟಲ್ ಮೂಲಕ ಜನರು ಬ್ಯಾಂಕ್‌ನ ಶಾಖೆ ಅಥವಾ ಅಂಚೆ ಕಚೇರಿಗೆ ಭೇಟಿ ನೀಡದೇ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ, ಕ್ಲೇಮ್ ಪ್ರಕ್ರಿಯೆಯನ್ನು ಡಿಜಿಟಲೀಕರಣ ಮಾಡಿರುವುದರಿಂದ ತ್ವರಿತವಾಗಿ ಕ್ಲೇಮ್ ಇತ್ಯರ್ಥ ಮಾಡಿಕೊಳ್ಳಬಹುದಾಗಿದೆ.**

– ಪಂಕಜ್ ಚೌಧರಿ
ಕೇಂದ್ರಹಣಕಾಸು ಖಾತೆಯ ರಾಜ್ಯ ಸಚಿವ

**ಆರ್ಥಿಕ ಭದ್ರತೆ ಕಲ್ಪಿಸುವ ಉದ್ದೇಶ**

**ಅಸಂಘಟಿತ ವಲಯದ ಕಾರ್ಮಿಕರಿಗೆ ಅವರ ನಿವೃತ್ತಿ ಜೀವನದ ಸಮಯದಲ್ಲಿ ಆರ್ಥಿಕ ಭದ್ರತೆ ಕಲ್ಪಿಸುವ ಉದ್ದೇಶವನ್ನು ಅಟಲ್ ಪಿಂಚಣಿ ಯೋಜನೆ (ಎಪಿವೈ) ಹೊಂದಿದೆ. ಈ ಯೋಜನೆ ಅಡಿ ನೋಂದಾಯಿಸಿಕೊಂಡವರು ಪಾವತಿಸುವ ಮೊತ್ತಕ್ಕೆ ಅನುಗುಣವಾಗಿ, ವ್ಯಕ್ತಿಯ ವಯಸ್ಸು 60 ವರ್ಷವಾದಾಗ ಮಾಸಿಕ 1 ಸಾವಿರದಿಂದ 5 ಸಾವಿರದವರೆಗೆ ಪಿಂಚಣಿ ದೊರೆಯುತ್ತದೆ. ಈ ಯೋಜನೆಯನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ನಿರ್ವಹಣೆ ಮಾಡುತ್ತದೆ. 18ರಿಂದ 40 ವರ್ಷದೊಳಗಿನವರು ಈ ಯೋಜನೆಗೆ ಅರ್ಹರು. ಚಂದಾದಾರರು ಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ ರೂಪದಲ್ಲಿ ಪಾವತಿ ಮಾಡಬೇಕಿರುತ್ತದೆ. ಆದಾಯ ತೆರಿಗೆ ಪಾವತಿಸುವವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.**

ಒಂದು ವೇಳೆ ಚಂದಾದಾರರು ವಯಸ್ಸು 60 ವರ್ಷ ಆಗುವುದರೊಳಗೆ ಮೃತಪಟ್ಟರೆ, ಸಂಗಾತಿಯು ಯೋಜನೆಗೆ ನೀಡುವ ಕೊಡುಗೆಯನ್ನು ಮುಂದುವರಿಸಬಹುದಾಗಿದೆ, ಮೊತ್ತವನ್ನು ಹಿಂಪಡೆಯಬಹುದಾಗಿದೆ.

ಪ್ರಸಕ್ತ ವರ್ಷದ ಏಪ್ರಿಲ್ 30ರ ವೇಳೆಗೆ ಈ ಯೋಜನೆಯಡಿ 9.04 ಕೋಟಿ ಜನರು ನೋಂದಣಿ ಆಗಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

# ಮದುವೆ ನಂತರ ರಜನಿಕಾಂತ್‌ಗೆ ಆ ನಟಿ ಮೇಲೆ ಲವ್!

ಅದು 80ರ ದಶಕದ ಸುವರ್ಣ ಯುಗ. ತೆರೆಯ ಮೇಲೆ 'ಸೂಪರ್‌ಸ್ಟಾರ್' ರಜನಿಕಾಂತ್ ಅಧಿಪತ್ಯ ನಡೆಸುತ್ತಿದ್ದರೆ, ಮತ್ತೊಂದೆಡೆ 19 ವರ್ಷದ ನಟಿಯೊಬ್ಬರು ತಮ್ಮ ಸೌಂದರ್ಯ ಮತ್ತು ನಟನೆಯಿಂದ ಪಡ್ಡೆಹುಡುಗರ ನಿದ್ದೆ ಗೆಡಿಸಿದ್ದರು. ಇವರಿಬ್ಬರ ಕಾಂಬಿನೇಷನ್ ತೆರೆಯ ಮೇಲೆ ಎಷ್ಟು ಮ್ಯಾಜಿಕ್ ಮಾಡಿತ್ತೋ, ತೆರೆಯ ಹಿಂದೆ ಅಷ್ಟೇ ವಿವಾದದ ಕಿಚ್ಚು ಹೊತ್ತಿಸಿತ್ತು. ಅದು ಎಷ್ಟರ ಮಟ್ಟಿಗೆ ಅಂದ್ರೆ, ಆ 19 ವರ್ಷದ ನಟಿಗೋಸ್ಕರ 36 ವರ್ಷದ ರಜನಿಕಾಂತ್, ತಮ್ಮ ಪತ್ನಿ ಲತಾಗೆ ಡಿವೋರ್ಸ್ ಕೊಡಲು ಸಿದ್ಧರಾಗಿದ್ದಾರೆ ಎನ್ನುವಷ್ಟರ ಮಟ್ಟಿಗೆ! ಹೌದು, ರಜನಿಕಾಂತ್ ಮತ್ತು ನಟಿಯೊಬ್ಬರ ನಡುವಿನ ಗಾಢ ಸ್ನೇಹವು ಅದೆಷ್ಟು ಚರ್ಚೆಗೆ ಒಳಗಾಗಿತ್ತೆಂದರೆ, ಅದು ರಜನಿಕಾಂತ್ ಅವರ ಸುಖ ಸಂಸಾರದಲ್ಲಿ ಬಿರುಗಾಳಿ ಎಬ್ಬಿಸಿ, ಲತಾ ಅವರಿಗೆ ವಿಚ್ಛೇದನ ನೀಡುತ್ತಾರೆ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತ್ತು. ಹಾಗಾದ್ರೆ, ಆ ನಟಿ ಮೇಲಿನ ಹುಚ್ಚಿನಿಂದ ನಿಜವಾಗಿಯೂ ರಜನಿಕಾಂತ್ ಲತಾ ಅವರಿಗೆ ಡಿವೋರ್ಸ್ ಕೊಡಲು ಹೋಗಿದ್ರಾ, ಆ ಕುರಿತ ಅಸಲಿಯತ್ತು ಇಲ್ಲಿದೆ ನೋಡಿ.



ಆ ನಟಿ ಯಾರು ತಮಿಳು ಚಿತ್ರರಂಗದ ಇತಿಹಾಸವನ್ನು ತಿರುವಿ ಹಾಕಿದರೆ, 1980ರ ದಶಕದಲ್ಲಿ ಸೂಪರ್‌ಸ್ಟಾರ್ ರಜನಿಕಾಂತ್ ಅವರ ವೃತ್ತಿಜೀವನದ ಉತ್ತುಂಗದ ಜೊತೆಗೆ ಅವರ ವೈಯಕ್ತಿಕ ಜೀವನದ ಅತಿದೊಡ್ಡ ವಿವಾದವೊಂದು ಎದ್ದು ಕಾಣುತ್ತದೆ. ಅದುವೇ, ನಟಿ ಅಮಲಾ ಮತ್ತು ರಜನಿಕಾಂತ್ ನಡುವಿನ ಸ್ನೇಹ ಹಾಗೂ ಅದರಿಂದ ಸೃಷ್ಟಿಯಾದ ವಿಚ್ಛೇದನದ ಸುದ್ದಿಗಳು.! 'ವೇಲೈಕ್ಕಾರನ್' ಮತ್ತು 'ಶಿವ' ಅಂತಹ ಸೂಪರ್ ಹಿಟ್ ಚಿತ್ರಗಳಲ್ಲಿ ರಜನಿಕಾಂತ್ ಮತ್ತು ಅಮಲಾ ಜೋಡಿಯಾಗಿ ನಟಿಸಿದ್ದರು. ಅದರಂತೆ, ತೆರೆಯ ಮೇಲೆ ಇವರಿಬ್ಬರ ಕೆಮಿಸ್ಟ್ರಿ ಅದ್ಭುತವಾಗಿ ಮೂಡಿಬರುತ್ತಿತ್ತು. ಆದರೆ, ಈ ತೆರೆಯ ಮೇಲಿನ ಜೋಡಿ ತೆರೆಯ ಹಿಂದೆಯೂ ಅತಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ ಎಂಬ ಮಾತುಗಳು ಅಂದಿನ ಮದ್ರಾಸ್ ಫಿಲ್ಮ್ ಸಿಟಿಯಲ್ಲಿ ಹರಿದಾಡತೊಡಗಿದವು.



# ಸಂಭಾವನೆ ವಿಚಾರದಲ್ಲಿ ಕೃತಿ ಸನನ್ ಬೇಸರ

ಎಲ್ಲಾ ಭಾಷೆಯ ಚಿತ್ರರಂಗದಲ್ಲೂ ನಟಿಯರಿಗೆ ಕಡಿಮೆ ಸಂಭಾವನೆ ನೀಡಲಾಗುತ್ತದೆ. ಈ ಬಗ್ಗೆ ಕೃತಿ ಸನನ್ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೀರೋಗಳಿಗೆ ಹೋಲಿಸಿದರೆ ನಟಿಯರ ಸಂಭಾವನೆ ಕಡಿಮೆ ಇರುತ್ತದೆ. ಈ ಮೊದಲು ಕೂಡ ಹಲವು ನಟಿಯರು ಲಿಂಗ ತಾರತಮ್ಯದ ಬಗ್ಗೆ ಧ್ವನಿ ಎತ್ತಿದ್ದರು. ಬಾಲಿವುಡ್‌ನಲ್ಲಿ ನಾಯಕ ನಟರಿಗೆ ಸಿಗುವ ಪ್ರಾಮುಖ್ಯತೆ ಮತ್ತು ಸಂಭಾವನೆ ನಾಯಕಿಯರಿಗೆ ಸಿಗುತ್ತಿಲ್ಲ ಎಂಬ ಚರ್ಚೆ ಇಂದು ನಿನ್ನೆಯದಲ್ಲ. ಈಗ ಇದೇ ವಿಷಯವಾಗಿ ರಾಷ್ಟ್ರ ಪ್ರಶಸ್ತಿ ವಿಜೇತ ನಟಿ ಕೃತಿ ಸನನ್ ಧ್ವನಿ ಎತ್ತಿದ್ದಾರೆ. ಚಿತ್ರದ ಬಜೆಟ್ ಕಡಿತ ಮಾಡುವ ಸಂದರ್ಭ ಬಂದಾಗ ಮೊದಲು ಕತ್ತರಿ ಬೀಳುವುದು ನಟಿಯರ ಸಂಭಾವನೆಗೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ 'ಜಿಕ್ಯೂ ಇಂಡಿಯಾ' ಮ್ಯಾಗಜಿನ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಈ ಕುರಿತು ಮಾತನಾಡಿದರು.


'ಚಿತ್ರದ ಬಜೆಟ್‌ನಲ್ಲಿ ಸಿಂಹಪಾಲು ನಾಯಕ ನಟರಿಗೆ ಹೋಗುತ್ತದೆ. ಆದರೆ ನಿರ್ಮಾಪಕರು ಎಲ್ಲಾದರೂ ಹಣ ಉಳಿಸಬೇಕು ಎಂದುಕೊಂಡರೆ, ಅವರು ಮೊದಲು ಸಂಧಾನ ಮಾಡುವುದು ನಾಯಕಿಯರ ಸಂಭಾವನೆಯಲ್ಲಿ' ಎಂದು ಕೃತಿ ಸನನ್ ಅವರು ನೇರವಾಗಿ ಹೇಳಿದ್ದಾರೆ. ಈ ಮೊದಲು ಅನೇಕ ನಟಿಯರು ಕೂಡ ಈ ಬಗ್ಗೆ ಧ್ವನಿ ಎತ್ತಿದ್ದರು.

ತಮ್ಮ ಆರಂಭಿಕ ದಿನಗಳನ್ನು ನೆನಪಿಸಿಕೊಂಡ ಕೃತಿ ಸನನ್, 'ಚಿತ್ರರಂಗದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಇನ್ನೂ ಆಳವಾಗಿ ಬೇರೂರಿದೆ. ನನ್ನ ಸಹನಟ ನನಗಿಂತ ಸೀನಿಯರ್ ಕೂಡ ಆಗಿರಲಿಲ್ಲ. ಆತ ನನಗಿಂತ ಉತ್ತಮವಾದ ಕಾರನ್ನು ಹೊಂದಿದ್ದ ದಿನಗಳು ನನಗೆ ನೆನಪಿವೆ. ಇಲ್ಲಿ ವಿಷಯ ಕಾರಿನದ್ದಲ್ಲ, ಬದಲಿಗೆ ಸಮಾನ ಗೌರವ ನೀಡುವ ಮನಸ್ಥಿತಿಯದ್ದು' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಅಮ್ಮಂದಿರ ದಿನಕ್ಕೆ ಡಾಲಿ ಸ್ಪೆಷಲ್

ಮದರ್ ಪ್ರಾಮಿಸ್ ಚಿತ್ರದ ಮೊದಲ ಹಾಡು ಅಮ್ಮಂದಿರ ದಿನವೇ ರಿಲೀಸ್ ಆಗಿದೆ. ಇದರಲ್ಲಿ ಅಮ್ಮನ ಗುಣಗಾನ ಇದೆ. ಅಮ್ಮ ಅದೆಷ್ಟು ಮುಖ್ಯ ಅನ್ನೋದನ್ನ ಡಾಲಿ ಧನಂಜಯ್ ಇಲ್ಲಿ ಹೇಳಿದ್ದಾರೆ. ನೀನೇ ಬೇಕು ಅಮ್ಮ ಅನ್ನೋ ಈ ಹಾಡಿನಲ್ಲಿ ಒಂದು ಲೈನ್ ಬರುತ್ತದೆ.

ಹೌದು, ನಾ ಹಾರಾಡಲು ನೀನಲ್ಲವೇ ಆಗಸ ನಾ ತೇಲಾಡಲು ನೀನಲ್ಲವೇ ಮಾನಸ ಅಂತಲೇ ಬರುತ್ತದೆ. ಅಂದ್ರೆ, ಅಮ್ಮ ಅಂದ್ರೆ, ಎಲ್ಲಾ ಅನ್ನುವ ಅರ್ಥದಲ್ಲಿಯೇ ಈ ಲೈನ್ ಇದೆ. ಅಮ್ಮ ನಿನ್ನ ಸೆರಗಂಚಲ್ಲಿ ಕಟ್ಟಿ ನಿನ್ನ ಇಷ್ಟಂಗಳ ಅಮ್ಮ ನಿನ್ನ ಹೆಗಲಿನಲ್ಲಿ ಹೊತ್ತೆ ನನ್ನ ಕಷ್ಟಂಗಳ ಬಿತ್ತಿ ಬೆಳೆದೆ ನೀ ಬೆಳದಿಂಗಳ ಅನ್ನೋದು ಇಲ್ಲಿ ಬರುತ್ತದೆ. ಇಂತಹ ಸಾಲುಗಳು ಇಲ್ಲಿ ತುಂಬಾನೆ ಇವೆ. ಅಮ್ಮನ ಈ ಒಂದು ಹಾಡನ್ನ ಸಂಜಿತ್ ಹೆಗ್ಡೆ ಹಾಡಿದ್ದಾರೆ. ಅಮ್ಮನ ಬಗೆಗಿನ ಹಾಡನ್ನ ಸಂಜಿತ್ ಹೆಗ್ಡೆ ತಮ್ಮದೇ ಶೈಲಿಯಲ್ಲಿಯೇ ಹಾಡಿದ್ದಾರೆ. ಈ ಹಾಡು ಕೇಳಲು ಅಷ್ಟೆ ಚೆನ್ನಾಗಿದೆ. ವಿಡಿಯೋ ಹೇಗೆ ಇರುತ್ತದೆ ಅನ್ನುವ ಕುತೂಹಲ ಇದೆ. ಕಾರಣ, ಸದ್ಯ ಈ ಚಿತ್ರದ ಲಿರಿಕಲ್ ವಿಡಿಯೋ ಮಾತ್ರ ರಿಲೀಸ್ ಆಗಿದೆ.



ಸಂಜಿತ್ ಹೆಗ್ಡೆ ಕಂಠಸಿರಿ

ನವನೀತ್ ಶ್ಯಾಮ್ ಈ ಚಿತ್ರಕ್ಕೆ ಸಂಗೀತ ಕೊಟ್ಟಿದ್ದಾರೆ. ಈ ಸಂಗೀತಕ್ಕೆ ಸಂಚಿತ್ ಹೆಗ್ಡೆ ಗಾಯನ ಅಷ್ಟೆ ಸೂಕ್ತ ಅನಿಸುತ್ತದೆ. ಡಾಲಿ ಧನಂಜಯ್ ಬರೆದ ಪ್ರತಿ ಸಾಲನ್ನೂ ಸಂಜಿತ್ ಹೆಗ್ಡೆ ಅನುಭವಿಸಿಯೇ ಹಾಡಿದ್ದಾರೆ ನೋಡಿ. ಈ ಹಾಡಿನ ಲಿರಿಕಲ್ ವಿಡಿಯೋದಲ್ಲಿ ಇನ್ನೂ ಒಂದು ವಿಶೇಷ ಇದೆ. ಅದು ಡಾಲಿ ಧನಂಜಯ್ ಅಮ್ಮನ ಪಾತ್ರಧಾರಿ ಯಾರು ಅನ್ನೋದು ಗೊತ್ತಾಗಿದೆ.

ಮದರ್ ಪ್ರಾಮಿಸ್ ಚಿತ್ರದಲ್ಲಿ ಹಿರಿಯ ನಟಿ ಗೀತಾ ಅವರೂ ಇದ್ದಾರೆ. ಕನ್ನಡದ ನಟ ವಿನಯ ಪ್ರಸಾದ್ ಕೂಡ ಇದ್ದಾರೆ. ಹಾಗಾಗಿಯೇ ಇಲ್ಲಿ ಡಾಲಿ ಧನಂಜಯ್ ಅಮ್ಮ ಯಾರು ಅನ್ನುವ ಕುತೂಹಲ ಇತ್ತು. ಅದಕ್ಕೆ ಉತ್ತರ ಈ ಮದರ್ ಸಾಂಗ್ ಅಲ್ಲಿಯೇ ಸಿಕ್ಕಿದೆ. ವಿನಯ್ ಪ್ರಸಾದ್ ಇಲ್ಲಿ ಡಾಲಿ ಧನಂಜಯ್ ಅಮ್ಮನಾಗಿದ್ದಾರೆ. ಡಾಲಿ ಧನಂಜಯ್ ಮತ್ತು ವಿನಯ್ ಪ್ರಸಾದ್ ಇಲ್ಲಿ ನಿಜವಾದ ಅಮ್ಮ ಮತ್ತು ಮಗ ಅನಿಸುತ್ತಾರೆ. ಡಾಲಿ ಧನಂಜಯ್ ಇಲ್ಲಿ ರೈಡರ್ ಅನ್ನೋದು ರಿವೀಲ್ ಆಗಿದೆ. ಬೈಕ್ ಕ್ರೇಜ್ ಅದೆಷ್ಟಿದೆ ಅನ್ನೋದು ಗೊತ್ತಾಗಿದೆ. ಈ ಒಂದು ಕನಸಿಗೆ ಅಮ್ಮ ಅದೆಷ್ಟು ಸಪೋರ್ಟ್ ಮಾಡ್ತಾರೆ ಅನ್ನೋದು ಹಾಡಿನಲ್ಲಿದೆ. ಇಡೀ ಹಾಡಿನಲ್ಲಿ ಬರೀ ಫೋಟೋಗಳೇ ಏನೂ ಇಲ್ಲ. ಬದಲಾಗಿ ಚಿತ್ರದ ವಿಡಿಯೋಗಳನ್ನು ಬಳಕೆ ಮಾಡಿದ್ದಾರೆ. ಈ ಮೂಲಕ ಡಾಲಿಯ ಪಾತ್ರದ ವಿಚಾರವು ಗೊತ್ತಾಗುತ್ತದೆ ನೋಡಿ. ಮದರ್ ಪ್ರಾಮಿಸ್ ಚಿತ್ರದ ರಿಲೀಸ್ ಬಗ್ಗೆನೂ ಕುತೂಹಲ ಇದೆ. ಆದರೆ, ಅದಕ್ಕೆ ಸಂಬಂಧಿಸಿದಂತೆ ಸದ್ಯ ಇನ್ನು ಏನೂ ರಿವೀಲ್ ಆಗಿಲ್ಲ. ಇನ್ನುಳಿದಂತೆ ಈ ಚಿತ್ರದ ಮೊದಲ ಹಾಡು ರಿಲೀಸ್ ಆಗಿದೆ.

# ಫಿಫಾ ವಿಶ್ವಕಪ್ 2026: ಉದ್ಘಾಟನಾ ಸಮಾರಂಭದಲ್ಲಿ ಮಿಂಚಲಿರುವ ನೋರಾ

ಖ್ಯಾತ ಬಾಲಿವುಡ್ ನಟಿ ಮತ್ತು ಡ್ಯಾನ್ಸರ್ ನೋರಾ ಫತೇಹಿ ಅವರ ಜಾಗತಿಕ ಮಟ್ಟದ ಜನಪ್ರಿಯತೆಗೆ ಹೊಸ ಸಾಕ್ಷಿ ಇಲ್ಲಿದೆ. 2026ರ ಫಿಫಾ ವಿಶ್ವಕಪ್‌ನ ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶನ ನೀಡಲು ಅವರು ಸಜ್ಜಾಗುತ್ತಿದ್ದಾರೆ. ಇದು ಅವರ ಅಭಿಮಾನಿಗಳಿಗೆ ಹೆಮ್ಮೆ ತಂದಿದೆ. ಭಾರತೀಯ ಚಿತ್ರರಂಗದ ಖ್ಯಾತ ನಟಿ, ಅದ್ಭುತ ನೃತ್ಯಗಾರ್ತಿ ನೋರಾ ಫತೇಹಿ ಅವರು ಮತ್ತೊಮ್ಮೆ ಜಾಗತಿಕ ವೇದಿಕೆಯಲ್ಲಿ ಭಾರತದ ಹೆಸರನ್ನು ರಾರಾಜಿಸುವಂತೆ ಮಾಡುತ್ತಿದ್ದಾರೆ. 2026ರ ಫಿಫಾ ವಿಶ್ವಕಪ್‌ನ ಕೆನಡಾ ಆವೃತ್ತಿಯ ಅದ್ಧೂರಿ ಉದ್ಘಾಟನಾ ಸಮಾರಂಭದಲ್ಲಿ ನೋರಾ ಫತೇಹಿ ನೃತ್ಯ ಪ್ರದರ್ಶನದ ಜೊತೆಗೆ ಹಾಡನ್ನೂ ಹಾಡಲಿದ್ದಾರೆ. ಈ ಉದ್ಘಾಟನಾ ಸಮಾರಂಭವು ಜೂನ್ 12ರಂದು ಕೆನಡಾದ ಟೊರೊಂಟೊದಲ್ಲಿರುವ ಬಿಎಂಒ ಫೀಲ್ಡ್ ಕ್ರೀಡಾಂಗಣದಲ್ಲಿ ನಡೆಯಲಿದೆ. ನೋರಾ ಫತೇಹಿ ಅವರು ಈ ಬಾರಿ ಕೇವಲ ನೃತ್ಯಕ್ಕೆ ಸೀಮಿತವಾಗದೆ, ಗಾಯಕಿಯಾಗಿಯೂ ವೇದಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿರುವ ಗಾಯಕರ ಜೊತೆಗೆ ನೋರಾ ವೇದಿಕೆ ಹಂಚಿಕೊಳ್ಳಲಿದ್ದಾರೆ. 2022ರ ಫಿಫಾ ವಿಶ್ವಕಪ್ ಫೈನಲ್‌ನಲ್ಲೂ ನೋರಾ ಅದ್ಭುತ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದಿದ್ದರು. ಈಗ ಎರಡನೇ ಬಾರಿಗೆ ವಿಶ್ವದ ಅತಿದೊಡ್ಡ ಕ್ರೀಡಾಕೂಟದಲ್ಲಿ ಅವಕಾಶ ಪಡೆದಿದ್ದಾರೆ. ಭಾರತದಲ್ಲಿ ಹೆಸರು ಗಳಿಸಿರುವ ನೋರಾ ಫತೇಹಿ ಅವರ ಪ್ರತಿಭೆಗೆ ಈಗ ಜಾಗತಿಕ ಮಟ್ಟದಲ್ಲಿ ಭಾರಿ ಬೇಡಿಕೆ ವ್ಯಕ್ತವಾಗುತ್ತಿದೆ. ಈ ಹಿಂದೆ ಟಿ20 ವಿಶ್ವಕಪ್ ಸಂಬಂಧಿತ ಕಾರ್ಯಕ್ರಮಗಳಲ್ಲೂ ಅವರು ಕಾಣಿಸಿಕೊಂಡಿದ್ದರು. ಈಗ ಫಿಫಾ ಉದ್ಘಾಟನಾ ಸಮಾರಂಭದಲ್ಲಿ ಕಾಣಿಸಿಕೊಳ್ಳುತ್ತಿರುವುದು ಅವರ ವೃತ್ತಿಜೀವನದ ಮೈಲಿಗಲ್ಲು ಎನ್ನಲಾಗಿದೆ.

'ಟೊರೊಂಟೊದಲ್ಲಿ ನಡೆಯಲಿರುವ ಉದ್ಘಾಟನಾ ಸಮಾರಂಭವು ಕೆನಡಾದ ಅಸ್ಮಿತೆ ಮತ್ತು ಫಿಫಾ ವಿಶ್ವಕಪ್‌ನ ಶಕ್ತಿಯನ್ನು ಪ್ರತಿಬಿಂಬಿಸಲಿದೆ' ಎಂದು ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ತಿಳಿಸಿದ್ದಾರೆ.



# 'ರೌಡಿ ಜನಾರ್ದನ' ವಿಜಯ್ ದೇವರಕೊಂಡ

ವಿಜಯ್ ದೇವರಕೊಂಡ ನಟನೆಯ 'ರೌಡಿ ಜನಾರ್ದನ' ಚಿತ್ರದ ಹೊಸ ಪೋಸ್ಟರ್ ಬಿಡುಗಡೆಯಾಗಿದೆ. ಈ ಸಿನಿಮಾದಲ್ಲಿ ವಿಜಯ್ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದು, ಅವರ ಎದೆಯ ಮೇಲೆ ನಟಿ ಕೀರ್ತಿ ಸುರೇಶ್ ಕಾಲು ಇಟ್ಟಿರುವ ಭಂಗಿ ಕುತೂಹಲ ಮೂಡಿಸಿದೆ. ಈ ಮಾಸ್ ಆಯಕ್ಷನ್ ಸಿನಿಮಾ ಡಿಸೆಂಬರ್‌ನಲ್ಲಿ ತೆರೆಕಾಣಲಿದೆ.

ಸೌತ್ ಸಿನಿಮಾರಂಗದ ಸ್ಟಾರ್ ನಟ ವಿಜಯ್ ದೇವರಕೊಂಡ ಅವರು ಮೇ 9ರಂದು ಹುಟ್ಟುಹಬ್ಬ ಆಚರಿಸಿಕೊಂಡರು. ಈ ಸಂಭ್ರಮದ ಅಂಗವಾಗಿ ಅವರ ಬಹುನಿರೀಕ್ಷಿತ ಪ್ಯಾನ್-ಇಂಡಿಯಾ ಸಿನಿಮಾ 'ರೌಡಿ ಜನಾರ್ದನ' ಚಿತ್ರತಂಡದಿಂದ ವಿಶೇಷ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ವಿಜಯ್ ಅವರು ಬ್ಯಾಕ್ ಟು ಬ್ಯಾಕ್ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿದ್ದು, ಆ ಪೈಕಿ 'ರೌಡಿ ಜನಾರ್ದನ' ಸಿನಿಮಾ ಕೂಡ ಸಾಕಷ್ಟು ನಿರೀಕ್ಷೆ ಮೂಡಿಸಿದೆ. ಈ ಚಿತ್ರದಲ್ಲಿ ಕೀರ್ತಿ ಸುರೇಶ್ ನಟಿಸುತ್ತಿದ್ದಾರೆ.

ಹೊಸ ಪೋಸ್ಟರ್ ಗಮನ ಸೆಳೆಯುತ್ತಿದೆ. ರವಿ ಕಿರಣ್ ಕೋಲಾ ನಿರ್ದೇಶನದ ಈ ಚಿತ್ರದಲ್ಲಿ ವಿಜಯ್ ದೇವರಕೊಂಡ ಹಿಂದೆಂದೂ ಕಾಣದ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಸುರಿಯುವ ಮಳೆಯಲ್ಲಿ ಕೈಯಲ್ಲಿ ಪಿಸ್ತೂಲ್ ಹಿಡಿದು ಕುಳಿತಿರುವ ವಿಜಯ್ ಅವರ ರಗಡ್ ಲುಕ್ ನೋಡಿದರೆ ಇದು ಪಕ್ಕಾ ಆಕ್ಷನ್ ಸಿನಿಮಾ ಎಂಬುದನ್ನು ಸಾಬೀತುಪಡಿಸುತ್ತಿದೆ. ಜೊತೆಗೆ ರೊಮ್ಯಾನ್ಸ್ ಕೂಡ ಇರಲಿದೆ. ಈಗ ಬಿಡುಗಡೆ ಆಗಿರುವ ಪೋಸ್ಟರ್‌ನಲ್ಲಿ ಎಲ್ಲರ ಗಮನ ಸೆಳೆಯುತ್ತಿರುವುದು ನಟಿ ಕೀರ್ತಿ ಸುರೇಶ್ ಅವರ ಭಂಗಿ. ವಿಜಯ್ ದೇವರಕೊಂಡ ಎದೆಯ ಮೇಲೆ ಕೀರ್ತಿ ಸುರೇಶ್ ಕಾಲು ಇಟ್ಟಿರುವ ದೃಶ್ಯವು ಕುತೂಹಲ ಮೂಡಿಸಿದೆ. ಚಿತ್ರದಲ್ಲಿ ಇವರಿಬ್ಬರ ನಡುವೆ ವಿಭಿನ್ನವಾದ ಪ್ರೇಮಕಥೆ ಅಥವಾ ಭಾವನಾತ್ಮಕ ತಿರುವು ಇರಬಹುದು ಎಂದು ಅಭಿಮಾನಿಗಳು ಊಹಿಸುತ್ತಿದ್ದಾರೆ.



ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಅಡಿಯಲ್ಲಿ ದಿಲ್ ರಾಜು ಮತ್ತು ಶಿರೀಶ್ ಈ ಸಿನಿಮಾವನ್ನು ಅದ್ಧೂರಿಯಾಗಿ ನಿರ್ಮಿಸುತ್ತಿದ್ದಾರೆ. ಈ ಮಾಸ್ ಆಯಕ್ಷನ್ ಸಿನಿಮಾ ಇದೇ ವರ್ಷದ ಡಿಸೆಂಬರ್‌ನಲ್ಲಿ ವಿಶ್ವದಾದ್ಯಂತ ಅದ್ಧೂರಿಯಾಗಿ ತೆರೆಗೆ ಬರಲಿದೆ.

ವಿಜಯ್ ದೇವರಕೊಂಡ ಅವರ ಸರಣಿ ಸೋಲುಗಳ ನಂತರ ಈ ಸಿನಿಮಾ ಅವರಿಗೆ ದೊಡ್ಡ ಮಟ್ಟದ ಯಶಸ್ಸು ತಂದುಕೊಡಲಿದೆ ಎಂಬ ಭರವಸೆಯಲ್ಲಿ ಅಭಿಮಾನಿಗಳಿದ್ದಾರೆ. ಸದ್ಯ ಬಿಡುಗಡೆಯಾಗಿರುವ 'ರೌಡಿ ಜನಾರ್ದನ' ಸಿನಿಮಾದ ಪೋಸ್ಟರ್ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ.

# ನಿನ್ನ ಜೇಬಿನಲ್ಲಿ ವಿಕೆಟ್ ಇದೆ, ನನ್ನ ಕಿಸೆಯಲ್ಲಿ ಪಾಯಿಂಟ್ಸ್ ಇದೆ!

ಇಂಡಿಯನ್ ಪ್ರೀಮಿಯರ್ ಲೀಗ್ ಕೇವಲ ಆಟಕ್ಕಷ್ಟೇ ಅಲ್ಲ, ಆಟಗಾರರ ನಡುವಿನ 'ಸ್ವ್ಯಾಗ್' ಮತ್ತು ಜಿದ್ದಾಜಿದ್ದಿಗೂ ಹೆಸರುವಾಸಿ. ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಭರ್ಜರಿ ಜಯ ದಾಖಲಿಸಿದ ಬೆನ್ನಲ್ಲೇ, ಅಫ್ಘಾನ್ ಸ್ಪಿನ್ ಮಾಂತ್ರಿಕ ರಶೀದ್ ಖಾನ್ ಅವರು ರವೀಂದ್ರ ಜಡೇಜಾ ಅವರ ಕಾಲೆಳೆದಿರುವ ವಿಡಿಯೋವೊಂದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಐಪಿಎಲ್ ಅಂಗಳದಲ್ಲಿ ಕೇವಲ ಬ್ಯಾಟ್ ಮತ್ತು ಬಾಲ್ ನಡುವಿನ ಹೋರಾಟ ಮಾತ್ರವಲ್ಲದೆ, ಆಟಗಾರರ ನಡುವಿನ ಸಂಭ್ರಮಾಚರಣೆಯ ಜಿದ್ದಾಜಿದ್ದೂ ನೋಡುಗರಿಗೆ ಭರಪೂರ ಮನರಂಜನೆ ನೀಡುತ್ತದೆ. ಇತ್ತೀಚೆಗೆ ಗುಜರಾತ್ ಟೈಟಾನ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ನಡುವೆ ನಡೆದ ಪಂದ್ಯವು ಇಂತಹದ್ದೇ ಒಂದು ಸ್ವಾರಸ್ಯಕರ ಘಟನೆಗೆ ಸಾಕ್ಷಿಯಾಯಿತು. ರಾಜಸ್ಥಾನ ರಾಯಲ್ಸ್ ತಂಡದ ರವೀಂದ್ರ ಜಡೇಜಾ ಅವರ 'ಪಾಕೆಟ್' ಸಂಭ್ರಮಕ್ಕೆ, ಅಫ್ಘಾನ್ ಸ್ಪಿನ್ ಮಾಂತ್ರಿಕ ರಶೀದ್ ಖಾನ್ ನೀಡಿದ ತಮಾಷೆಯ ತಿರುಗೇಟು ಇದೀಗ ವೈರಲ್ ಆಗಿದೆ. ಅಷ್ಟಕ್ಕೂ ಈ 'ಪಾಕೆಟ್ ವೀಡಿಯೋ' ಹಿಂದಿನ ಕಥೆಯೇನು ಇಲ್ಲಿದೆ ಸಂಪೂರ್ಣ ವಿವರ.

**ಏನಿದು 'ಪಾಕೆಟ್' ಸೆಲೆಬ್ರೇಷನ್:** ಜೈಪರದಲ್ಲಿ ನಡೆದ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದ ವೇಳೆ ರಾಜಸ್ಥಾನ್ ರಾಯಲ್ಸ್‌ನ ರವೀಂದ್ರ ಜಡೇಜಾ ಅವರು ಜೋಸ್ ಬಟ್ಲರ್ ಅವರ ವಿಕೆಟ್ ಪಡೆದು, ನಿನ್ನ ವಿಕೆಟ್ ನನ್ನ ಪಾಕೆಟ್‌ನಲ್ಲಿ ಎಂಬಾರ್ಥದಲ್ಲಿ 'ಪಾಕೆಟ್ ಸೆಲೆಬ್ರೇಷನ್' ಮಾಡಿದ್ದರು.

ಗುಜರಾತ್ ಟೈಟಾನ್ಸ್ ಈ ಪಂದ್ಯವನ್ನು 77 ರನ್‌ಗಳ ಬೃಹತ್ ಅಂತರದಿಂದ ಗೆದ್ದ ನಂತರ, ರಶೀದ್ ಖಾನ್ ಅವರು ಒಂದು ವಿಶೇಷ ವೀಡಿಯೋ ಹಂಚಿಕೊಂಡಿದ್ದಾರೆ. ಅದರಲ್ಲಿ ಅವರು ತಮ್ಮ ಜೇಬಿನಲ್ಲಿದ್ದ ವಸ್ತುವನ್ನು ಹುಡುಕುವಂತೆ ಅಭಿನಯಿಸಿದ ರಶೀದ್ ಖಾನ್, ನನ್ನ ಪಾಕೆಟ್‌ನಲ್ಲಿ 2 ಪಾಯಿಂಟ್ ಇದೆ ಎಂದು ತೋರಿಸಿದ್ದಾರೆ. ಅಂದರೆ ನಿನ್ನ ಕಿಸೆಯಲ್ಲಿ ವಿಕೆಟ್ ಇದ್ದರೆ, ನನ್ನ ಜೇಬಿನಲ್ಲಿ 2 ಪಾಯಿಂಟ್ ಇದೆ ಎಂದು ರಶೀದ್ ಖಾನ್ ಪರೋಕ್ಷವಾಗಿ ರವೀಂದ್ರ ಜಡೇಜಾಗೆ ತಿರುಗೇಟು ನೀಡಿದ್ದಾರೆ. ಈ ಮೂಲಕ ವಿಕೆಟ್‌ಗಿಂತ ಪಾಯಿಂಟ್ ಮುಖ್ಯ ಎಂಬುದನ್ನು ಸಾರಿದ್ದಾರೆ. ಇದೀಗ ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.



**ರಶೀದ್ ಖಾನ್ ತಿರುಗೇಟು**

**ಟೈಟಾನ್ಸ್ ಬ್ಯಾಟಿಂಗ್:** ಶುಭ್‌ಮನ್ ಗಿಲ್ (84) ಮತ್ತು ಸಾಯಿ ಸುದರ್ಶನ್ (55) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಗುಜರಾತ್ ಟೈಟಾನ್ಸ್ ತಂಡವು 20 ಓವರ್‌ಗಳಲ್ಲಿ 229 ರನ್ ಕಲೆಹಾಕಿತು.

**ರಾಜಸ್ಥಾನ್ ರಾಯಲ್ಸ್ ಬ್ಯಾಟಿಂಗ್:** 230 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ ತಂಡವು 16.3 ಓವರ್‌ಗಳಲ್ಲಿ 152 ರನ್‌ಗಳಿಗೆ ಆಲೌಟ್ ಆಗಿದೆ. ಈ ಮೂಲಕ 77 ರನ್‌ಗಳಿಂದ ಸೋಲೊಪ್ಪಿಕೊಂಡಿದೆ.

**ರಶೀದ್ ಖಾನ್ ಮ್ಯಾಜಿಕ್:** ಈ ಪಂದ್ಯದಲ್ಲಿ ಮಿಂಚಿದ ರಶೀದ್ ಖಾನ್ 4 ಓವರ್‌ಗಳಲ್ಲಿ 33 ರನ್ ನೀಡಿ 4 ಪ್ರಮುಖ ವಿಕೆಟ್ ಪಡೆದರು. ಇದರಲ್ಲಿ ರವೀಂದ್ರ ಜಡೇಜಾ ಅವರ ವಿಕೆಟ್ ಕೂಡ ಸೇರಿತ್ತು ಎಂಬುದು ವಿಶೇಷ.

ಈ ಗೆಲುವಿನೊಂದಿಗೆ ಗುಜರಾತ್ ಟೈಟಾನ್ಸ್ ತಂಡವು ಅಂಕ ಪಟ್ಟಿಯಲ್ಲಿ ದ್ವಿತೀಯ ಸ್ಥಾನಕ್ಕೇರಿದೆ. ಅಲ್ಲದೆ ಮುಂದಿನ ಮೂರು ಮ್ಯಾಚ್‌ಗಳಲ್ಲಿ ಒಂದು ಗೆಲುವು ಸಾಧಿಸಿದರೆ ಪ್ಲೇಆಫ್ ಆಡುವುದನ್ನು ಖಚಿತಪಡಿಸಿಕೊಳ್ಳಲಿದೆ.

# ಮುಂಬೈ ಇಂಡಿಯನ್ಸ್ ವಿರುದ್ಧ ಆರ್‌ಸಿಬಿಗೆ ರೋಚಕ ಜಯ

ಇಲ್ಲಿಯ ಬಿಸಿಗಾಳಿಗೆ ಭಾನುವಾರ ಭುವನೇಶ್ವರ್ ಕುಮಾರ್ ಅವರ 'ಸುಂಟರಗಾಳಿ'ಯೂ ಸೇರಿ ಕೊಂಡಿತು. ಮುಂಬೈ ಇಂಡಿಯನ್ಸ್ ಬ್ಯಾಟಿಂಗ್ ಪಡೆ ಭುವಿಯ ಕೈಚಳಕದ ಮುಂದೆ ಬಾಗಿತು. ಶಹೀದ್ ವೀರ ನಾರಾಯಣ್ ಸಿಂಗ್ ಕ್ರೀಡಾಂಗಣದಲ್ಲಿ ಸೇರಿದ್ದ 60 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಲ್ಲಿ 'ರೆಡ್ ಆರ್ಮಿ' ಅಭಿಮಾನಿಗಳ ಸಂಖ್ಯೆಯೂ ಗಣನೀಯವಾಗಿ ಎದ್ದು ಕಂಡಿತ್ತು.

ಅವರ ನಿರೀಕ್ಷೆಗೆ ತಕ್ಕಂತೆ ಭುವಿ ಬೌಲಿಂಗ್ ಮಾಡಿದರು. ಮುಂಬೈ ಇಂಡಿಯನ್ಸ್ ತಂಡದ ವಿರುದ್ಧ ಆರ್‌ಸಿಬಿ 2 ವಿಕೆಟ್‌ಗಳ ರೋಚಕ ಜಯ ಸಾಧಿಸಿ ಮಿಂಚಿತು.

ಪೌರಾಣಿಕ ಧಾರಾವಾಹಿಗಳಲ್ಲಿ ತೋರಿಸುವ ಸರ್ಪಾಸ್ತ್ರಗಳಂತೆ ಸುಳಿದಾಡಿದ ಭುವಿ (4-0-23-4) ಎಸೆತಗಳಿಗೆ ಪ್ರಮುಖ ಬ್ಯಾಟರ್‌ಗಳು ಶರಣಾದರು. ಮುಂಬೈ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 166 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ತಿಲಕ್ ವರ್ಮಾ (57; 42ಎ) ಮತ್ತು ನಮನ್ ಧೀರ್ (47; 32ಎ) ಅವರ ಆಟದಿಂದಾಗಿ ಈ ಮೊತ್ತ ಕಲೆಹಾಕಲು ಸಾಧ್ಯವಾಯಿತು. ಟಾಸ್



ಗೆದ್ದ ಬೆಂಗಳೂರು ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭುವಿ ಹಾಕಿದ ಮೊದಲ ಎಸೆತದಲ್ಲಿಯೇ ವಿಕೆಟ್ ಲಭಿಸುವ ಅವಕಾಶವೊಂದು ಇತ್ತು. ರಿಯಾನ್ ರಿಕೆಲ್ಸನ್ ಹೊಡೆದ ಚೆಂಡು ಗಾಳಿಯಲ್ಲಿ ಸಾಗಿತು.

ಅದನ್ನು ಕ್ಯಾಚ್ ಮಾಡಲು ಮಿಡ್‌ಆಫ್‌ನಲ್ಲಿದ್ದ ರಜತ್ ಪಾಟೀದಾರ್ ಅವರು ಪಟ್ಟ ಪ್ರಯತ್ನ ಫಲಿಸಲಿಲ್ಲ. ಆದರೆ ಅದೇ ಓವರ್‌ನ ಕೊನೆಯ ಎಸೆತದಲ್ಲಿ ರಿಕೆಲ್ಸನ್ ಅವರು ರಜತ್ ಅವರಿಗೆ ಅದೇ ಜಾಗದಲ್ಲಿ ಸುಲಭ ಕ್ಯಾಚ್ ಕೊಟ್ಟು ನಿರ್ಗಮಿಸಿದರು. ಇದರೊಂದಿಗೆ ಭುವಿಯ ಬೇಟೆ ಆರಂಭವಾಯಿತು.

ತಮ್ಮ ಎರಡನೇ ಓವರ್‌ನಲ್ಲಿ ಅವರು ಹಾಕಿದ ನಕಲ್ ಬಾಲ್‌ಗೆ ರೋಹಿತ್ ಶರ್ಮಾ (22; 10ಎ) ದಂಡ ತೆತ್ತರು. ಆಫ್‌ಸ್ಟಂಪ್ ಹೊರಗಿದ್ದ ಚೆಂಡನ್ನು ಕೆಣಕಿದರು. ವಿಕೆಟ್‌ಕೀಪರ್ ಜಿತೇಶ್ ಶರ್ಮಾ ತಮ್ಮ ಬಲಕ್ಕೆ ನೆಗೆದು ಪಡೆದ ಆಕರ್ಷಕ ಕ್ಯಾಚ್‌ಗೆ ರೋಹಿತ್ ನಿರ್ಗಮಿಸಿದರು. ಇದಕ್ಕೂ ಮುನ್ನ ಅವರು ಜೋಶ್ ಹೇಝಲ್‌ವುಡ್ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದ್ದರು. ಹಾರ್ದಿಕ್ ಪಾಂಡ್ಯ ಫಿಟ್ ಇರದ ಕಾರಣ ನಾಯಕತ್ವ ವಹಿಸಿರುವ ಸೂರ್ಯಕುಮಾರ್ ಯಾದವ್ ತಾವೆದುರಿಸಿದ ಮೊದಲ ಎಸೆತದಲ್ಲಿಯೇ ಸ್ಲಿಪ್‌ನಲ್ಲಿದ್ದ ವಿರಾಟ್ ಕೊಹ್ಲಿಗೆ ಕ್ಯಾಚಿತ್ತರು. ಭುವಿ ಸಂಭ್ರಮಿಸಿದರು.


ಪವರ್‌ಪ್ಲೇ ನಂತರ ಕಾಶ್ಮೀರದ ಹುಡುಗ ರಸಿಕ್ ಸಲಾಮ್ ದಾರ್ ಎಸೆತದಲ್ಲಿ ತಿಲಕ್ ವರ್ಮಾ ಕೊಟ್ಟ ಸುಲಭ ಕ್ಯಾಚ್ ಕೈಚೆಲ್ಲಿದ ಸುಯಶ್ ಶರ್ಮಾ ಕೈಕೈ ಹಿಸುಕಿಕೊಂಡರು. 17ನೇ ಓವರ್‌ನವರೆಗೂ ವರ್ಮಾ ಅವರ ಆಟ ನಡೆಯಿತು. ಏಕಾಗ್ರತೆ ಮತ್ತು ತಾಳ್ಮೆ ಮೇಳೈಸಿದ ಅರ್ಧಶತಕ ಗಳಿಸಿದರು. ನಮನ್ ಧೀರ್ ಅವರೊಂದಿಗೆ 82 ರನ್ ಸೇರಿಸಿದರು. 18ನೇ ಓವರ್ ಹಾಕಲು ಮರಳಿದ ಭುವಿ ಮತ್ತೆ ತಮ್ಮ ಸ್ಟಿಂಗ್ ಸಾಮರ್ಥ್ಯ ಮೆರೆದರು. ವರ್ಮಾ ಇನಿಂಗ್ಸ್‌ಗೆ ತೆರೆಯೆಳೆದರು. ನಮನ್ ಧೀರ್ ಅವರನ್ನು 13ನೇ ಓವರ್‌ನಲ್ಲಿ ರಸಿಕ್ ಕ್ಲೀನ್ ಬೌಲ್ಡ್ ಮಾಡಿದ್ದರು. ಉಳಿದ ಬ್ಯಾಟರ್‌ಗಳು ಅಬ್ಬರಿಸದಂತೆ ಬೌಲರ್‌ಗಳೂ ಹಿಡಿತ ಸಾಧಿಸಿದರು. ಇದರಿಂದಾಗಿ ದೊಡ್ಡ ಮೊತ್ತ ದಾಖಲಾಗಲಿಲ್ಲ.

# 6,6,6,6,6,6.. ಸಿಎಸ್‌ಕೆ ವಿರುದ್ಧ ಅಬ್ಬರಿಸಿದ ಜೋಶ್ ಇಂಗ್ಲಿಸ್

ಐಪಿಎಲ್ 2026 ರ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಪಂದ್ಯದಲ್ಲಿ, ಲಕ್ನೋ ಆರಂಭಿಕ ಜೋಶ್ ಇಂಗ್ಲಿಸ್ ಕೇವಲ 17 ಎಸೆತಗಳಲ್ಲಿ ಸ್ಫೋಟಕ ಅರ್ಧಶತಕ ಸಿಡಿಸಿ ಗಮನ ಸೆಳೆದರು. 33 ಎಸೆತಗಳಲ್ಲಿ 85 ರನ್ ಗಳಿಸಿ ತಂಡಕ್ಕೆ ಭರ್ಜರಿ ಆರಂಭ ನೀಡಿದರು. ಈ ಮೂಲಕ ಲಕ್ನೋ ಕೇವಲ 3.4 ಓವರ್‌ಗಳಲ್ಲಿ 50 ರನ್ ಗಳಿಸಿ, ತನ್ನದೇ ಆದ ಹಳೆಯ ದಾಖಲೆಯನ್ನು ಸರಿಗಟ್ಟಿತು. ಐಪಿಎಲ್ 2026 ರ 53ನೇ ಪಂದ್ಯ ಲಕ್ನೋ ಸೂಪರ್ ಜೈಂಟ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ (ಐಖಉ ತ ಅಖಏ) ನಡುವೆ ನಡೆಯಿತು. ಈ ಪಂದ್ಯ ಪ್ಲೇಆಫ್ ದೃಷ್ಟಿಯಿಂದ ಸಿಎಸ್‌ಕೆಗೆ ಬಹುಮುಖ್ಯವಾಗಿದ್ದರೆ, ಲಕ್ನೋ ತಂಡಕ್ಕೆ ಕೇವಲ ಔಪಚಾರಿಕವಾಗಿತ್ತು. ಏಕೆಂದರೆ ಲಕ್ನೋ ತಂಡ ಪ್ಲೇಆಫ್ ತಲುಪುವುದು ಅಸಾಧ್ಯವೆಂದು ಹೇಳಲಾಗುತ್ತಿದೆ. ಇದರ ನಡುವೆಯೂ ಸಿಎಸ್‌ಕೆ ವಿರುದ್ಧದ ಪಂದ್ಯದಲ್ಲಿ ಲಕ್ನೋ ತಂಡದ ಆರಂಭಿಕ ಆಟಗಾರ ಜೋಶ್ ಇಂಗ್ಲಿಸ್ , ಕೇವಲ 17 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ತಂಡಕ್ಕೆ ಭರ್ಜರಿ ಆರಂಭ ನೀಡಿದರು. ಮೇ 10 ರಂದು ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲಕ್ನೋ ಮೊದಲು ಬ್ಯಾಟಿಂಗ್ ಮಾಡಿತು. ಈ ಪಂದ್ಯದಲ್ಲಿ ಆರಂಭಿಕನಾಗಿ ಕಣಕ್ಕಿಳಿದಿದ್ದ ಜೋಶ್ ಇಂಗ್ಲಿಸ್ ಬೌಂಡರಿ ಮತ್ತು ಸಿಕ್ಸರ್‌ಗಳ ಮಳೆ ಸುರಿಸಿ ಕೇವಲ 17 ಎಸೆತಗಳಲ್ಲಿ, ಆರು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ಅರ್ಧಶತಕ ಪೂರೈಸಿದರು. ಅಂದರೆ ಇಂಗ್ಲಿಸ್ ಕೇವಲ ಬೌಂಡರಿ ಹಾಗೂ ಸಿಕ್ಸರ್‌ಗಳಿಂದಲೇ 48 ರನ್ ಕಲೆಹಾಕಿದರು.

**ಶತಕದಂಚಿನಲ್ಲಿ ಎಡವಿದ ಇಂಗ್ಲಿಸ್:** ಇಂಗ್ಲಿಸ್ ಸ್ಫೋಟಕ ಬ್ಯಾಟಿಂಗ್ ಮಾಡುವುದರ ಜೊತೆಗೆ ಮಿಚೆಲ್ ಮಾರ್ಷ್ ಅವರೊಂದಿಗೆ 77 ರನ್‌ಗಳ ಜೊತೆಯಾಟವನ್ನು ಹಂಚಿಕೊಂಡರು. ಅದರಲ್ಲಿ ಇಂಗ್ಲಿಸ್ ಒಬ್ಬರೇ 66 ರನ್‌ಗಳ ಕೊಡುಗೆ ನೀಡಿದರು. ಆದಾಗ್ಯೂ, ಶತಕದಂಚಿನಲ್ಲಿ ಎಡವಿದ ಇಂಗ್ಲಿಸ್ ಕೇವಲ 33 ಎಸೆತಗಳಲ್ಲಿ 85 ರನ್ ಬಾರಿಸಿ ಔಟಾದರು. ಇಂಗ್ಲಿಸ್ ಅವರ ಇನ್ನಿಂಗ್ಸ್‌ನಲ್ಲಿ 10 ಬೌಂಡರಿಗಳು ಮತ್ತು 6 ಸಿಕ್ಸರ್‌ಗಳು ಸೇರಿದ್ದವು.

**3 ವರ್ಷಗಳ ನಂತರ ಸಿಎಸ್‌ಕೆಗೆ ಆಘಾತ:** ಇಂಗ್ಲಿಸ್ ಅವರ ಸ್ಫೋಟಕ ಆರಂಭದ ಪರಿಣಾಮವಾಗಿ ಲಕ್ನೋ ತಂಡವು ಕೇವಲ 3.4 ಓವರ್‌ಗಳಲ್ಲಿ 50 ರನ್‌ಗಳ ಗಡಿ ತಲುಪಿತು. ಈ ಮೂಲಕ ಲಕ್ನೋ ತಂಡ ಅತಿ ವೇಗವಾಗಿ 50 ರನ್ ಗಳಿಸಿದ ತನ್ನದೇ ಆದ ದಾಖಲೆಯನ್ನು ಸರಿಗಟ್ಟಿತು. ಪ್ರಾಸಂಗಿಕವಾಗಿ, ತಂಡದ ಹಿಂದಿನ ದಾಖಲೆಯು ಮೂರು ವರ್ಷಗಳ ಹಿಂದೆ ಅಂದರೆ 2023 ರಲ್ಲಿ ಇದೇ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸೃಷ್ಟಿಯಾಗಿತ್ತು. ಆ ಪಂದ್ಯದಲ್ಲಿಯೂ ಸಹ, ತಂಡವು ಕೇವಲ 3.4 ಓವರ್‌ಗಳಲ್ಲಿ 50 ರನ್‌ಗಳ ಗಡಿ ದಾಟಿತು.




# ಯಶಸ್ವಿ ಜೈಸ್ವಾಲ್ ದಾಖಲೆ ಸರಿಗಟ್ಟಿದ ಉರ್ವಿಲ್

ಚುಟುಕು ಕ್ರಿಕೆಟ್ ಎಂದರೇ ಬ್ಯಾಟರ್‌ಗಳ ದರ್ಬಾರು. ಪ್ರತಿದಿನ ಹೊಸ ಹೊಸ ತಾರೆಗಳು ಉದಯಿಸುತ್ತಾರೆ. ಹೊಸ ಹೊಸ ದಾಖಲೆಗಳು ನಿರ್ಮಾಣಗೊಳ್ಳುತ್ತವೆ. ಇದೀಗ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟರ್ ಇಡೀ ಕ್ರಿಕೆಟ್ ವಿಶ್ವವೇ ತಮ್ಮತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. 3 ವರ್ಷಗಳಿಂದ ಅಬಾಧಿತವಾಗಿ ಉಳಿದಿರುವ ಯಶಸ್ವಿ ಜೈಸ್ವಾಲ್ ಅವರ ಅತಿ ವೇಗದ ಅರ್ಧಶತಕದ ದಾಖಲೆಯನ್ನು ಸರಿಗಟ್ಟಿದ್ದಾರೆ. ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಅರ್ಧಶತಕದ ಗಡಿ ದಾಟಲು ಅವರು ತೆಗೆದುಕೊಂಡಿದ್ದು ಕೇವಲ 13 ಎಸೆತ!

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಮೇ 10ರ ಭಾನುವಾರದಂದು ನಡೆದ ಪಂದ್ಯದಲ್ಲಿ ಅವರು ಲಖನೌ ಬೌಲರ್‌ಗಳನ್ನು ಗೋಳು ಹೊಯ್ದುಕೊಂಡರು. 13 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ ಅವರು 7 ಸಿಕ್ಸರ್‌ಗಳನ್ನು ಸಿಡಿಸಿದರು. ಒಂದು ಬಾರಿ ಚೆಂಡನ್ನು ಬೌಂಡರಿ ಗಡಿ ದಾಟಿಸಿದರು. ಅವರ ಬ್ಯಾಟಿಂಗ್ ಶೈಲಿಗೆ ಲಖನೌ ಬೌಲರ್ ಗಳು ಅಕ್ಷರಶಃ ಕಂಗೆಟ್ಟರು. ಅಂತಿಮವಾಗಿ ಅವರು 23 ಎಸೆತದಲ್ಲಿ 2 ಬೌಂಡರಿ ಮತ್ತು 8 ಸಿಕ್ಸರ್ ಗಳನ್ನು ಒಳಗೊಂಡ 65 ರನ್ ಗಳಿಸಿ ಶಾಬಾಝ್ ಅಹ್ಮದ್ ಬೌಲಿಂಗ್ ನಲ್ಲಿ ಅವೇಶ್ ಖಾನ್ ಅವರಿಗೆ ಕ್ಯಾಚಿತ್ತು ಔಟಾದರು. ಅರ್ಧಶತಕ ಗಳಿಸಿದ ಬಳಿಕ ಅವರು ಅಭಿಷೇಕ್ ಶರ್ಮ ಅವರ ಶೈಲಿಯಲ್ಲಿ ಜೇಬಿನಿಂದ ಚೀಟಿಯನ್ನು ತೆಗೆದು ತೋರಿಸಿದರು. ಈ ಇನ್ನಿಂಗ್ಸ್ ಅನ್ನು ಅವರು ತಮ್ಮ ತಂದೆಗೆ ಅರ್ಪಿಸಿರುವುದಾಗಿ ತಮ್ಮ ಚೀಟಿಯಲ್ಲಿ ಬರೆದಿದ್ದರು.

ಸಂಜು ಸ್ಯಾಮ್ಸನ್(14 ಎಸೆತದಲ್ಲಿ 28) ಅವರ ವಿಕೆಟ್ ಪತನದ ಬಳಿಕ ಕ್ರೀಸಿಗಿಳಿದ ಉರ್ವಿಲ್ ಪಟೇಲ್ ಅವರು ಮೊದಲ ಎಸೆತದಿಂದಲೇ ಚೆನ್ನೈ ಬೌಲರ್ ಗಳ ಮೇಲೆ ಏರಿ ಹೋದರು. ಆರಂಭದ 8 ಎಸೆತಗಳಲ್ಲಿ 6 ಸಿಕ್ಸರ್ ಗಳನ್ನು ಸಿಡಿಸಿದರು. ಇದು ಐಪಿಎಲ್‌ನಲ್ಲಿ ಹೊಸ ದಾಖಲೆಯಾಗಿದೆ. ಐವೇಶ್ ಖಾನ್ ಅವರು ಎಸೆದ 5ನೇ ಓವರ್ ನಲ್ಲಿ 3 ಸಿಕ್ಸರ್ ಸಿಡಿದರು. ಬಳಿಕ ವಿಘ್ನೇಶ್ ರಾಠಿ ಎಸೆದ 6ನೇ ಓವರ್ ನಲ್ಲಿ 3 ಸಿಕ್ಸರ್ 1 ಬೌಂಡರಿ ಬಾರಿಸಿದರು. ಇನ್ನು 3 ಎಸೆತದಲ್ಲಿ 9 ರನ್ ಗಳಿಸಿದ್ದರೆ ಅವರದ್ದು ಐಪಿಎಲ್‌ನ ಅತಿ ವೇಗದ ಅರ್ಧಶತಕವಾಗಿತ್ತು.



ಆದರೆ ಅಲ್ಲಿಂದ 50 ರನ್ ಗಳ ಗಡಿ ತಲುಪಲು ಮತ್ತೂ 5 ಎಸೆತಗಳಿಂದ ತೆಗೆದುಕೊಂಡಿದ್ದರಿಂದ ಯಶಸ್ವಿ ಜೈಸ್ವಾಲ್ ಅವರ ದಾಖಲೆಯನ್ನು ಸಮಗಟ್ಟಲು ಸಾಧ್ಯವಾಯಿತು.

**ಯಾರು ಈ ಉರ್ವಿಲ್ ಪಟೇಲ್?**

1998ರ ಅಕ್ಟೋಬರ್ 17ರಂದು ಗುಜರಾತ್ ನ ಮೆಹ್ಸಾನಾದಲ್ಲಿ ಹುಟ್ಟಿದ ಉರ್ವಿಲ್ ಪಟೇಲ್ ದೇಶೀಯ ಕ್ರಿಕೆಟ್ ನಲ್ಲಿ ಚಿರಪರಿಚಿತ ಹೆಸರು.

ಗುಜರಾತ್ ರಾಜ್ಯ ತಂಡದ ಪರ ಆಡುವ ಅವರು, ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ 28 ಎಸೆತಗಳಲ್ಲಿ ಶತಕ (ಭಾರತೀಯರಲ್ಲೇ ವೇಗದ) ಸಿಡಿಸಿದ ದಾಖಲೆ ಹೊಂದಿದ್ದಾರೆ.

2023ರಲ್ಲಿ ಗುಜರಾತ್ ಟೈಟಾನ್ಸ್ ತಂಡದ ಮೂಲಕ ಐಪಿಎಲ್ ಅಭಿಯಾನ ಪ್ರಾರಂಭವಾಯಿತು. ಆದರೆ ಯಾವುದೇ ಪಂದ್ಯವನ್ನಾಡುವ ಅವಕಾಶ ದೊರೆತಿರಲಿಲ್ಲ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,**
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: **udayavahininews@yahoo.com** , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**